ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 4 ಸೋಮವಾರ 2022

ಸಂಪುಟ: 43 | ಸಂಚಿಕೆ: 79 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ

ಎಲ್ಲಾ ವಂಚಿತ ಸಮುದಾಯಗಳನ್ನು ಪಕ್ಷ ತಲುಪಬೇಕು

ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಲಹೆ


ಹೈದರಾಬಾದ್, ಜು.3–ನಾವು ಕೇವಲ ಹಿಂದೂಗಳಿಗೆ ಮಾತ್ರ ಸೀಮಿತವಾಗದೆ ಎಲ್ಲಾ ವಂಚಿತ ಸಮುದಾಯಗಳನ್ನು ತಲುಪಬೇಕು ಎಂದು ಬಿಜೆಪಿಯ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದರು.

ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಸಮುದಾಯಗಳಲ್ಲೂ ದೀನ–ದಲಿತರ ವರ್ಗಗಳಿವೆ. ಆ ವರ್ಗಗಳ ಪರವಾಗಿ ಕೆಲಸ ಮಾಡುವ ಮೂಲಕ ಅವರನ್ನು ನಾವು ತಲುಪಬೇಕು ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.



ಪ್ರಮುಖವಾಗಿ ದಕ್ಷಿಣ ಭಾರತದಲ್ಲಿ ಪಕ್ಷವನ್ನು ಬಲಪಡಿಸಬೇಕು ಎಂಬ ಸಂದೇಶವನ್ನು ಪ್ರಧಾನಿ ನೀಡಿದ್ದಾರೆ ಎನ್ನಲಾಗಿದ್ದು, ಅದಕ್ಕೆ ಕರ್ನಾಟಕವನ್ನು ಉದಾಹರಣೆ ನೀಡಿ ಇದೇ ಮಾದರಿಯಲ್ಲಿ ತಮಿಳುನಾಡು, ಕೇರಳ, ಆಂಧ್ರ ಮತ್ತು ತೆಲಂಗಾಣದಲ್ಲಿ ಕಾರ್ಯಕರ್ತರು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದ್ದಾಗಿ ಮೂಲಗಳು ಹೇಳಿವೆ. ಚುನಾವಣಾ ಪರೀಕ್ಷೆಯಲ್ಲಿ ಮುಸ್ಲಿಂ ಮತದಾರರು ನಿರ್ಣಾಯಕ ಪಾತ್ರ ವಹಿಸುತ್ತಿರುವ ಉತ್ತರಪ್ರದೇಶದ ▶ 8ನೇ ಪುಟಕ್ಕೆ


> “ಬಿಜೆಪಿ ಗಣನೀಯವಾಗಿ ಅಸ್ತಿತ್ವವಿಲ್ಲದ ಹಾಗೂ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದಂತಹ ಪ್ರದೇಶಗಳ ಮೇಲೆ ಗಮನ ಹರಿಸಬೇಕು ಎಂಬುದು ಪ್ರಧಾನಿ ಮೋದಿಯವರ ಸಂದೇಶವಾಗಿದೆ.



ಹೈದರಾಬಾದ್‌ನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಸಂತೋಷ್ ಇತರರು.

ಮುಂದಿನ ದಿನಗಳಲ್ಲಿ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ

ಹೈದರಾಬಾದ್,ಜು.3–ಮುಂದಿನ ದಿನಗಳಲ್ಲಿ ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.




ಹೈದರಾಬಾದ್‌ನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮಾತ್ರವಲ್ಲದೆ, ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಅವರು ಹೇಳಿದ್ದಾಗಿ ಬಿಜೆಪಿ ಮೂಲಗಳು ತಿಳಿಸಿವೆ. ಗೃಹ ಸಚಿವರ ಭಾಷಣದ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಮುಂದಿನ 30ರಿಂದ 40 ವರ್ಷಗಳು ಬಿಜೆಪಿ ಪಕ್ಷದ ಯುಗವಾಗಿದ್ದು ಭಾರತವು "ವಿಶ್ವ ಗುರು" (ವಿಶ್ವ ನಾಯಕ) ಆಗಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ರಾಜವಂಶದ ರಾಜಕಾರಣ, ಜಾತೀಯತೆ ಮತ್ತು ತುಷ್ಟೀಕರಣದ ರಾಜಕೀಯ ಮಹಾ ಪಾಪಗಳಾಗಿದ್ದು ಹಲವಾರು ವರ್ಷಗಳಿಂದ ▶ 8ನೇ ಪುಟಕ್ಕೆ

ಕೊಡಗಲ್ಲಿ ಮುಂದುವರೆದ ಭಾರೀ ಮಳೆ

ಮತ್ತೆ ಹಲವೆಡೆ ಭೂ ಕುಸಿತ, ಧರೆಗುರುಳಿದ ಮರಗಳು

ಮುರಿದು ಬಿದ್ದ ವಿದ್ಯುತ್ ಕಂಬಗಳು, ಕೆಲವು ಗ್ರಾಮಗಳಲ್ಲಿ ಕಗ್ಗತ್ತಲು

ಭೂ ಕುಸಿತದಿಂದ ಮನೆಗಳಿಗೆ ಹಾನಿ, ಭೂಮಿಯಿಂದ ಉಕ್ಕಿ ಹರಿದ ಜಲ, ಮಡಿಕೇರಿ-ಮಾಣಿ ಹೆದ್ದಾರಿಗೆ ಹಾನಿ



ಕರಿಕೆ ಸಮೀಪದ ಕಂಡತ್ತಿಕಾನ ಎಂಬಲ್ಲಿ ಬೆಟ್ಟದ ಮೇಲಿಂದ ಶುಕ್ರವಾರ ತಡರಾತ್ರಿ ಭಾರೀ ಗಾತ್ರದ ಬಂಡೆ ಕಲ್ಲುಗಳು ಉರುಳಿ ಬಿದ್ದು, ಗ್ರಾಮದ ಸಂಪರ್ಕ ಕಾಲು ದಾರಿ ಬಂದ್ ಆಗಿರುವ ಬಗ್ಗೆ ವರದಿಯಾಗಿದೆ. ಈ ರಸ್ತೆಯ ಕೆಳ ಭಾಗ ಜನ ವಸತಿಗಳಿದ್ದು, ಗ್ರಾಮದಲ್ಲಿ ಆತಂಕ ಮನೆ ಮಾಡಿದೆ.

ಮಡಿಕೇರಿ,ಜು.3– ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆ ಮುಂದುವರೆದಿದ್ದು, ಅಲ್ಲಲ್ಲಿ ಭೂ ಕುಸಿತ, ಮರ ಮುರಿದು ಬಿದ್ದಿರುವ ಘಟನೆಗಳ ಸಹಿತ ಹಾನಿಗಳಾದ ಬಗ್ಗೆ ವರದಿಯಾಗಿದೆ. ಅಮ್ಮತ್ತಿ, ಮಾದಾಪುರ, ಗರಗಂದೂರು, ಕೂಡಿಗೆ ಮತ್ತಿತ್ತರ ಕಡೆಗಳಲ್ಲಿ ಮರಗಳು ಮುರಿದು ಬಿದ್ದಿದ್ದು, ವಿದ್ಯುತ್ ಕಂಬಗಳು ಮತ್ತು ತಂತಿಗಳು ತುಂಡರಿಸಲ್ಪಟ್ಟಿವೆ. ಇದರಿಂದ ಕೆಲವು ಭಾಗಗಳಲ್ಲಿ ಕಗ್ಗತ್ತಲು ಮನೆ ಮಾಡಿದೆ. ಸುರಿಯುತ್ತಿರುವ ಮಳೆಯ ನಡುವೆ ವಿದ್ಯುತ್ ಕಂಬಗಳ ಬದಲಿ ವ್ಯವಸ್ಥೆ ಹಾಗೂ ಲೈನ್‌ಗಳ ದುರಸ್ತಿ ಕಾರ್ಯ ಸಮಾರೋಪಾದಿಯಲ್ಲಿ ಸಾಗಿದೆ ಎಂದು ಚೆಸ್ಕಾಂ ಇಲಾಖೆ ಮಾಹಿತಿ ನೀಡಿದೆ. ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ▶ 8ನೇ ಪುಟಕ್ಕೆ



ಭಾಗಮಂಡಲ ತ್ರಿವೇಣಿ ಸಂಗಮ ಜಲಾವೃತಗೊಂಡಿರುವುದು.

ಬಿ.ಟಿ.ಲಲಿತಾ ನಾಯಕ್‌ಗೆ ಜೀವ ಬೆದರಿಕೆ ಪತ್ರ, ಕೇಸ್ ದಾಖಲು

ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯರನ್ನೂ ಕೊಲ್ಲುವುದಾಗಿ ಬೆದರಿಕೆ

ಬೆಂಗಳೂರು: ಪಠ್ಯ ಪುಸ್ತಕ ಪರಿಷ್ಕರಣೆ ವಿಚಾರವಾಗಿ ಮಾಜಿ ಸಚಿವೆ ಮತ್ತು ಲೇಖಕಿ ಬಿ.ಟಿ.ಲಲಿತಾ ನಾಯಕ್ ಅವರಿಗೆ ಮತ್ತೊಂದು ಬೆದರಿಕೆ ಪತ್ರ ಪೋಸ್ಟ್ ಮೂಲಕ ಅವರ ಮನೆ ವಿಳಾಸಕ್ಕೆ ಶನಿವಾರ ಬಂದಿದೆ.



ಲಲಿತಾ ನಾಯಕ್

ಎಡಪಂಥೀಯ ಸಿದ್ಧಾಂತಗಳಿಗೆ ಬೆಂಬಲ ನೀಡುತ್ತಿದ್ದು, ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಮಧ್ಯ ಪ್ರವೇಶಿಸುತ್ತಿದ್ದು, ವಿಪಕ್ಷ ನಾಯಕ ಸಿದ್ದರಾಮಯ್ಯ, ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ನಿಮ್ಮೊಂದಿಗೂ ಕೊಲೆ ಮಾಡಲಾಗುವುದು ಎಂದು ದುಷ್ಕರ್ಮಿಗಳು ▶ 6ನೇ ಪುಟಕ್ಕೆ

ದೇಶದ ಸಂವಿಧಾನ ಉಳಿಯಬೇಕಾದರೆ ಯಶವಂತ ಸಿನ್ಹಾ ರಾಷ್ಟ್ರಪತಿ ಆಗಬೇಕಿದೆ

ಬೆಂಗಳೂರು, ಜು.3– ದೇಶದ ಸಂವಿಧಾನ ಉಳಿಯಬೇಕಾದರೆ ಯಶವಂತ ಸಿನ್ಹಾ ಅವರು ಮುಂದಿನ ರಾಷ್ಟ್ರಪತಿ ಆಗಬೇಕಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.





ಬೆಂಗಳೂರಿನ ಖಾಸಗಿ ಹೋಟೇಲ್‌ನಲ್ಲಿ ಮಾತನಾಡಿದ ಅವರು, ಯಶವಂತ ಸಿನ್ಹಾ ಅವರು ಸಿವಿಲ್ ಸರ್ವಿಸ್‌ನಲ್ಲಿದ್ದವರು. ರಾಜಕಾರಣಿಯಾಗಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಒಬ್ಬ ಮುತ್ಸದ್ದಿ ರಾಜಕಾರಣಿಯಾಗಿದ್ದಾರೆ. ಪ್ರಮುಖವಾಗಿ ದೇಶದ ಸಂವಿಧಾನ ಅಪಾಯದಲ್ಲಿದೆ. ದೇಶದ ಸಂವಿಧಾನ ಉಳಿಯಬೇಕಾದರೆ ಯಶವಂತ ಸಿನ್ಹಾ ಅವರು ರಾಷ್ಟ್ರಪತಿ ▶ 8ನೇ ಪುಟಕ್ಕೆ

ವ್ಯಕ್ತಿ ಪೂಜೆಯಲ್ಲ, ಪಕ್ಷ ಪೂಜೆ ಮುಖ್ಯ

ಉಡುಪಿ,ಜು.3–ನಮಗೆ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ ಎನ್ನುವ ಮೂಲಕ ಪರೋಕ್ಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಟಾಂಗ್ ಕೊಟ್ಟಿದ್ದಾರೆಯೇ ಎಂಬ ಅನುಮಾನ ಕಾಡುತ್ತಿದೆ.



ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಹುಮತದಿಂದ ಆರಿಸಿ ಬಂದು ಸರ್ಕಾರ ರಚಿಸುವ ಆಸೆಯಲ್ಲಿ ಕಾಂಗ್ರೆಸ್ ಪಕ್ಷವಿದ್ದರೂ ಆಗಾಗ ನಾಯಕರ ಇಂತಹ ಮಾತುಗಳು ಪಕ್ಷದೊಳಗೆ ನಾಯಕರ ಮಧ್ಯೆ ಸರಿಯಿಲ್ಲ, ಹೊಂದಾಣಿಕೆ ಮತ್ತು ಒಗ್ಗಟ್ಟು ಇಲ್ಲವೇ? ಎಂಬ ಮಾತುಗಳಿಗೆ ಪುಷ್ಟಿ ನೀಡುತ್ತಿವೆ. ಇಂದು ಉಡುಪಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ನಾವು ವ್ಯಕ್ತಿ ಪೂಜೆಗೆ ಗೌರವ ನೀಡುವುದಿಲ್ಲ, ಪಕ್ಷ ಪೂಜೆ ಮಾಡುತ್ತೇವೆ ಎಂದು ಸಿದ್ದರಾಮೋತ್ಸವಕ್ಕೆ ಪರೋಕ್ಷವಾಗಿ ಟಾಂಗ್ ಕೊಟ್ಟರು. ಸಾಮೂಹಿಕ ನಾಯಕತ್ವದಲ್ಲಿ ಮುಂಬರುವ ಚುನಾವಣೆಯನ್ನು ಎದುರಿಸುತ್ತೇವೆ. ನಮ್ಮ ಸರ್ಕಾರ ಬಂದಾಗ ನನ್ನನ್ನು ಮಂತ್ರಿ ಮಾಡಲಿಲ್ಲ, ಆಗಲೂ ನಾನೇನು ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ನನ್ನಂತ ನಿಷ್ಠಾವಂತ ▶ 6ನೇ ಪುಟಕ್ಕೆ

ಪ್ರಧಾನಿ ಕಚೇರಿ ಉನ್ನತ ಅಧಿಕಾರಿ ಹೆಸರಲ್ಲಿ ಡಿಸಿಗೆ ಕರೆ ಮಾಡಿದ ವಂಚಕ

- ಬಿಳಿಗಿರಿರಂಗನಬೆಟ್ಟದಲ್ಲಿ ವಾಸ್ತವ್ಯಕ್ಕೆ ಕೊಠಡಿ ಕಾಯ್ದಿರಿಸಲು ಸೂಚನೆ
- ಚಾಮರಾಜನಗರ ಟೌನ್ ಠಾಣೆಯಲ್ಲಿ ಡಿಸಿಯಿಂದ ಪ್ರಕರಣ ದಾಖಲು

ಚಾಮರಾಜನಗರ,ಜು.3– ಪ್ರಧಾನಮಂತ್ರಿ ಕಚೇರಿಯ ಅಧಿಕಾರಿ ಎಂದು ಹೇಳಿಕೊಂಡು ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಗೆ ವ್ಯಕ್ತಿಯೋರ್ವ ಕರೆ ಮಾಡಿ ಬಿಳಿಗಿರಿರಂಗನಬೆಟ್ಟದಲ್ಲಿ ವಾಸ್ತವ್ಯಕ್ಕೆ ಕೊಠಡಿ ಕಾಯ್ದಿರಿಸುವಂತೆ ಹೇಳಿದ ಬಗ್ಗೆ ಚಾಮರಾಜನಗರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




ಚಾರುಲತಾ ಸೋಮಲ್

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಗೆ ರಾವ್ ಅವರ ಹೆಸರಿನಲ್ಲಿ ಜೂ.27ರಂದು ಕರೆ ಮಾಡಿದ ವ್ಯಕ್ತಿ, ತಾನು ಗುಜರಾತ್‌ನ ನಿವೃತ್ತ ಮುಖ್ಯ ಕಾರ್ಯದರ್ಶಿಯಾಗಿದ್ದು, ಪ್ರಸ್ತುತ ಪ್ರಧಾನ ಮಂತ್ರಿ ಕಾರ್ಯಾಲಯದಲ್ಲಿ ಉನ್ನತ ಅಧಿಕಾರಿಯಾಗಿರುವುದಾಗಿ ಹೇಳಿದ್ದಾನೆ. ತಾನು ಜು.2ರಂದು ಕುಟುಂಬ ಸಮೇತ ಬಿಳಿಗಿರಿರಂಗನ ಬೆಟ್ಟಕ್ಕೆ ಬರುತ್ತಿರುವುದಾಗಿ ತಿಳಿಸಿದ ಆತ, ತನ್ನ ವಾಸ್ತವ್ಯಕ್ಕೆ ಕೊಠಡಿ ಕಾಯ್ದಿರಿಸಿ, ಜಂಗಲ್ ಸಫಾರಿ, ಬಿಳಿಗಿರಿರಂಗನಬೆಟ್ಟ ದೇವಸ್ಥಾನ ದರ್ಶನ ಹಾಗೂ ದೊಡ್ಡಸಂಪಿಗೆ ಮರ ವೀಕ್ಷಣೆಗೆ ಅನುಕೂಲ ಮಾಡಿಕೊಡಬೇಕೆಂದು ▶ 6ನೇ ಪುಟಕ್ಕೆ

ಡಿಸೆಂಬರ್‌ನಲ್ಲೇ ವಿಧಾನಸಭೆ ಚುನಾವಣೆ ಸಾಧ್ಯತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಡಿಸೆಂಬರ್‌ನಲ್ಲೇ ಎದುರಾಗುವ ಸಾಧ್ಯತೆಗಳಿವೆ. ಜೆಡಿಎಸ್ ಕಾರ್ಯಕರ್ತರು ಈಗಿನಿಂದಲೇ ಸಜ್ಜಾಗಬೇಕೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕರೆ ನೀಡಿದ್ದಾರೆ.



ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ 'ಜನತಾ ಮಿತ್ರ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕನಿಷ್ಠ ಹದಿನೈದು ಕ್ಷೇತ್ರಗಳನ್ನು ಗೆಲ್ಲುವ ವಾತಾವರಣ ಜೆಡಿಎಸ್‌ಗೆ ಇದೆ. ವಿಧಾನಸಭೆ ಮತ್ತು ಬಿಬಿಎಂಪಿ ಚುನಾವಣೆಗೆ ಕಾರ್ಯಕರ್ತರು ಸಂಘಟಿತರಾಗಬೇಕು. ಬೆಂಗಳೂರು ಹಂತ–ಹಂತವಾಗಿ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ನಮ್ಮ ಪಕ್ಷ ಶಕ್ತಿಯುತವಾಗಿಲ್ಲ ಎಂಬ ಭಾವನೆ ತೆಗೆದುಹಾಕಬೇಕು ಎಂದರು.

ರಾಜರಾಜೇಶ್ವರಿನಗರದಲ್ಲಿ ಪಕ್ಷದ ಮತಗಳಿವೆ. ಕಾರ್ಯಕರ್ತರು ಇದನ್ನು ಮರೆಯಬಾರದು. ನಾವೇನು ಅಧಿಕಾರ ಇದ್ದಾಗ ಅಕ್ರಮವಾಗಿ ಹಣ ಲೂಟಿ ಮಾಡಿಲ್ಲ. ನಮ್ಮಲ್ಲಿ ಮೂರು ಜನ ಶಾಸಕರು ಪಕ್ಷದಲ್ಲಿದ್ದರು. ಅವರೂ ಬೇರೆ ಕಡೆ ಹೋಗಿದ್ದಾರೆ. ಚಾಮರಾಜಪೇಟೆಯಲ್ಲಿ ನಮ್ಮ ನಾಯಕರು ಹೋರಾಟ ▶ 8ನೇ ಪುಟಕ್ಕೆ

ಇಬ್ಬರ ಮೇಲೆ ದಾಳಿ ನಡೆಸಿದ್ದ ಹೆಣ್ಣು ಹುಲಿ ಸುರಕ್ಷಿತ ಸೆರೆ

ಕಾರ್ಯಾಚರಣೆಯಲ್ಲಿ ಸಾಕಾನೆಗಳಾದ ಅಭಿಮನ್ಯು, ಶ್ರೀಕಂತ ಭಾಗಿ





ಪುನರ್ವಸತಿ ಕೇಂದ್ರಕ್ಕೆ ರವಾನೆ

ಬಿಗಿ ಭದ್ರತೆಯಲ್ಲಿ ಹುಲಿಯನ್ನು ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ತರಲಾಯಿತು. ಬೆಂಗಾವಲು ವಾಹನದ ನೆರವಿನಿಂದ ಸುರಕ್ಷಿತವಾಗಿ ತಂದು ಬೋನಿಗೆ ಬಿಡಲಾಯಿತು. ನಿದ್ರಾ ಮಂಪರಿನಲ್ಲಿರುವ ಹುಲಿಗೆ ಪುನರ್ವಸತಿ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತಿದೆ. ಈಗಾಗಲೇ ಗಂಭೀರ ಗಾಯದಿಂದಾಗಿ ಬಳಲಿರುವ ಹುಲಿಗೆ ಚಿಕಿತ್ಸೆ ಆರಂಭಿಸಲಾಗಿದೆ.

ಮೈಸೂರು,ಜು.3(ಎಂಟಿವೈ)–ಇಬ್ಬರ ಮೇಲೆ ದಾಳಿ ನಡೆಸಿ ಆತಂಕ ಉಂಟು ಮಾಡಿದ್ದ ಹುಲಿಯನ್ನು ಅರಣ್ಯ ಇಲಾಖಾ ಸಿಬ್ಬಂದಿ ನಡೆಸಿದ ವ್ಯವಸ್ಥಿತ ಕಾರ್ಯಾಚರಣೆಯಿಂದಾಗಿ ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದ್ದು, ಪುನರ್ವಸತಿಗಾಗಿ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ರವಾನಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಸೆರೆ ಹಿಡಿಯಲಾದ ಹುಲಿ ಹೆಣ್ಣು ಹುಲಿಯಾಗಿದ್ದು, ಸುಮಾರು 10 ವರ್ಷ ವಯಸ್ಸಿನದ್ದಾಗಿದೆ. ಆರಂಭದಲ್ಲಿ ಹೆಡಿಯಾಲ ಅರಣ್ಯ ವಲಯದಲ್ಲಿದ್ದ ಈ ಹುಲಿ 2014ರಿಂದ 2022ರವರೆಗೆ ಗೋಪಾಲಸ್ವಾಮಿಬೆಟ್ಟ ವಲಯದಲ್ಲಿ ಆವಾಸ ಸ್ಥಾನವಾಗಿ ಗುರುತಿಸಿಕೊಂಡಿತ್ತು. ವಯಸ್ಸಿನ ಕಾರಣ ಹಾಗೂ ಗಾಯಗೊಂಡಿದ್ದರಿಂದ ಭೇಟೆಯಾಡುವ ಶಕ್ತಿ ಕಳೆದುಕೊಂಡ ಕಾರಣ ಕಾಡಂಚಿನ ಗ್ರಾಮದತ್ತ ಬಂದು ಜಾನುವಾರು ಬೇಟೆಯಾಡಲು ಬಂದಿದ್ದಾಗ ಇಬ್ಬರ ಮೇಲೆ ದಾಳಿ ನಡೆಸಿದೆ ಎನ್ನಲಾಗಿದೆ.

ಗುಂಡ್ಲುಪೇಟೆ ತಾಲೂಕಿನ ಲಕ್ಕೀಪುರ ಗ್ರಾಮದ ಸರ್ವೇ ನಂ. 47ರಲ್ಲಿ ಶನಿವಾರ (ಜು.2) ಮಧ್ಯಾಹ್ನ 12 ಗಂಟೆ ವೇಳೆಯಲ್ಲಿ ಹಸುವೊಂದರ ಮೇಲೆ ದಾಳಿ ಮಾಡಿದಾಗ, ಹಸು ರಕ್ಷಿಸಲು ಮುಂದಾದ ಗೋಪಾಲ ಪುರದ ನಿವಾಸಿ ಗವಿಯಪ್ಪ ಎಂಬುವರ ಮೇಲೆ ಹುಲಿ ದಾಳಿ ಮಾಡಿತ್ತು. ಘಟನೆ ಬಳಿಕ ಬಾಳೆತೋಟದಲ್ಲಿ ಅಡಗಿದ್ದ ಹುಲಿಯನ್ನು ಅರಣ್ಯ ಸಿಬ್ಬಂದಿ ಹಾಗೂ ಪೊಲೀಸರು ನೀಡಿದ ಎಚ್ಚರಿಕೆಯನ್ನು ಗಾಳಿಗೆ ತೂರಿ ಫೋಟೋ ತೆಗೆಯಲು ಹೋಗಿದ್ದ ಗೋಪಾಲಪುರದ ರಾಜಶೇಖರ್(35) ಎಂಬಾತನ ಮೇಲೆ ದಾಳಿ ಮಾಡಿ ಗಾಯಗೊಳಿಸಿತ್ತು. ಈ ಎರಡೂ ಪ್ರಕರಣದಿಂದ ಎಚ್ಚೆತ್ತುಕೊಂಡ ಅರಣ್ಯ ಇಲಾಖೆಯ ಸಿಬ್ಬಂದಿ ಹುಲಿ ಅಡಗಿದ್ದ ಜಮೀನಿನ ಸುತ್ತ ರಾತ್ರಿಯಿಡೀ ಪಹರೆ ಕಾದು ಘಟನೆ ಮರು ಕಳಿಸದಂತೆ ಕ್ರಮ ಕೈಗೊಂಡಿದ್ದರು.

ಗುರುತು ಪತ್ತೆ: ಶನಿವಾರ ದಾಳಿ ನಡೆಸಿದ ಬಳಿಕ ಬಾಳೆ ತೋಟದಲ್ಲಿ ಅಡಗಿದ್ದ ಹಾಗೂ ಕೊಂದಿದ್ದ ಹಸುವನ್ನು ತಿನ್ನುವ ವೇಳೆ ತೆಗೆದ ಚಿತ್ರವನ್ನು ಬೆಂಗಳೂರಿನ ಟೈಗರ್ ಸೆಲ್‌ಗೆ ಕಳುಹಿಸಲಾಯಿತು. ಹುಲಿಯ ಮೈಮೇಲಿದ್ದ ಪಟ್ಟೆಯನ್ನು ಅವಲೋಕಿಸಿದಾಗ 2010ರಲ್ಲಿ ಹೆಡಿಯಾಲ ವಲಯದಲ್ಲಿ ಆವಾಸ ಸ್ಥಾನ ಗುರುತಿಸಿಕೊಂಡಿದ್ದ 'ಬಂಡೀಪುರ 15–ಯು 420' ಕೋಡ್‌ನಲ್ಲಿ ಕರೆಯುತ್ತಿದ್ದ ಹೆಣ್ಣುಲಿ ಎಂದು ದೃಢಪಟ್ಟಿದೆ. ಆ ಹುಲಿಗೆ 10 ವರ್ಷ ಆಗಿರುವುದರಿಂದ ಬೇಟೆಯಾಡಲು ಶಕ್ತಿ ಕಳೆದುಕೊಂಡಿರುವುದರಿಂದಲೇ ಕಾಡಿಂದ ಗ್ರಾಮಗಳತ್ತ ಬಂದಿರುವುದನ್ನು ಖಚಿತಪಡಿಸಿಕೊಂಡು, ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲು ಅರಣ್ಯ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಹುಲಿ ಅಡಗಿದ್ದ ತೋಟಕ್ಕೆ ಹೊಂದಿಕೊಂಡಂತೆ ಇರುವ ಗೋಪಾಲ ಪುರ ಹಾಗೂ ಲಕ್ಕೀಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಅನಗತ್ಯವಾಗಿ ಮನೆಯಿಂದ ಹೊರಬರದಂತೆ ಅರಣ್ಯಾಧಿಕಾರಿಗಳು ಸೂಚಿಸಿದ್ದರು. ಅಲ್ಲದೆ, ಭಾನುವಾರ ಬೆಳಗ್ಗೆ 6 ಗಂಟೆಯಿಂದಲೇ ದಸರಾ ಆನೆ ಅಭಿಮನ್ಯು, ಸಾಕಾನೆ ಶ್ರೀಕಂತನೊಂದಿಗೆ ಎಸ್‌ಟಿ ಪಿಎಫ್ ಹಾಗೂ ಅರಣ್ಯ ಸಿಬ್ಬಂದಿ ತಂಡ ಕಾರ್ಯಾಚರಣೆ ಆರಂಭಿಸಿತ್ತು. ಪಶುವೈದ್ಯರಾದ ಡಾ.ಮಿರ್ಜಾ ವಾಸಿಂ, ಡಾ.ಮುಜೀಬ್ ರೆಹಮಾನ್ ನೇತೃತ್ವದಲ್ಲಿ ಎರಡು ತಂಡ ಹುಲಿ ಇರುವ ಸ್ಥಳ ಗುರುತಿಸಿ ಪ್ರತ್ಯೇಕ ದಿಕ್ಕಿನಲ್ಲಿ ಸಾಗಿ ಅರವಳಿಕೆ ಮದ್ದು ನೀಡುವಲ್ಲಿ ಯಶಸ್ವಿಯಾದರು. ಸಮತಟ್ಟಾದ ಪ್ರದೇಶವಾಗಿದ್ದರಿಂದ ಹಾಗೂ ದಟ್ಟ ಪೊದೆಗಳು ಇಲ್ಲದ ಕಾರಣ ಕಾರ್ಯಾಚರಣೆಗೆ ಅಡ್ಡಿಯಾಗಲಿಲ್ಲ. ▶ 6ನೇ ಪುಟಕ್ಕೆ

ಧ್ವಜ ಕಾಯಿದೆ ತಿದ್ದುಪಡಿಯಿಂದ ಕುಗ್ಗಿದ ರಾಷ್ಟ್ರ ಧ್ವಜದ ಮೌಲ್ಯ

ಜು.30ರಂದು ಧ್ವಜ ಸತ್ಯಾಗ್ರಹ, ಉಪವಾಸ ಕೈಗೊಳ್ಳಲು ನಿರ್ಧಾರ

ಖಾದಿ ಬಳಕೆದಾರರ ಬಳಗದಿಂದ ತಿದ್ದುಪಡಿ ಹಿಂಪಡೆಯಲು ಆಗ್ರಹ



ಮೈಸೂರು,ಜು.3(ಆರ್‌ಕೆಬಿ)–ದೇಶ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದು, ಸ್ವಾವಲಂಬನೆಯ ಬಗ್ಗೆ ಮಾತನಾಡುವ ಮತ್ತು ಆತ್ಮನಿರ್ಭರತೆ ಬಗ್ಗೆ ಹೇಳುವ ಇಂದಿನ ಸರ್ಕಾರ, ಧ್ವಜ ಕಾಯಿದೆಗೆ ತಿದ್ದುಪಡಿ ತಂದು, ಧ್ವಜ ತಯಾರಿಸಲು ಖಾದಿ ಬಟ್ಟೆಯೇ ಆಗ ಬೇಕಿಲ್ಲ ಎನ್ನುತ್ತಿದೆ. ರಾಷ್ಟ್ರ ಬಾವುಟವೂ ಕೃತಕ ನೂಲಿನಿಂದ ತಯಾರಾದದ್ದು ಅಥವಾ ಆಮದು ಮಾಡಿಕೊಂಡದ್ದೂ ಆಗಬಹುದೆಂದು ಹೇಳಿದೆ. ಇದು ಇಡೀ ದೇಶದ ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಸಂಕೇತವಾಗಿರುವ ರಾಷ್ಟ್ರ ಧ್ವಜದ ಮೌಲ್ಯವನ್ನು ಕುಗ್ಗಿಸಿದೆ ಎಂದು ಮೈಸೂರಿನ ಖಾದಿ ನೂಲುಗಾರರ ಬಳಗ ಅಸಮಾಧಾನ ವ್ಯಕ್ತಪಡಿಸಿದೆ.

ಧ್ವಜ ಕಾಯಿದೆ ತಿದ್ದುಪಡಿಯನ್ನು ವಿರೋಧಿಸಿ, ಖಾದಿ ನೂಲುಗಾರರ ಬಳಗದ ಆಶ್ರಯದಲ್ಲಿ ಭಾನುವಾರ ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ 'ಪ್ರಕೃತಿ' ಆವರಣದಲ್ಲಿ ಸಭೆ ನಡೆಸಲಾಯಿತು. ಸಭೆಯಲ್ಲಿ ಹಿರಿಯ ರಂಗಕರ್ಮಿ ಪ್ರಸನ್ನ, ಖಾದಿ ನೂಲುಗಾರರ ಬಳಗದ ಸಚ್ಚಿದಾನಂದ (ಸಚ್ಚು), ಸಂತೋಷ್ ಕೌಲಗಿ, 'ಪ್ರಕೃತಿ'ಯ ಬಾಲಚಂದ್ರ, ರಜನಿ, ಸೌಮ್ಯ, ತರಂಗ, ಗೌರಿ ಇನ್ನಿತರರು ಭಾಗ ವಹಿಸಿ, ಸಲಹೆಗಳನ್ನು ನೀಡಿದರು.

ಧ್ವಜ ಕಾಯಿದೆ ತಿದ್ದುಪಡಿಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ, ಸ್ವಾತಂತ್ರ್ಯ ದಿನಾಚರಣೆಗೆ 15 ದಿನಗಳ ಮುನ್ನ ಜು.30ರಂದು ಮೈಸೂರಿನ ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಧ್ವಜ ಸತ್ಯಾಗ್ರಹದ ಭಾಗವಾಗಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

ಚರಕದಲ್ಲಿ ನೂಲುವ ಮೂಲಕ ರಂಗಕರ್ಮಿ ಪ್ರಸನ್ನ ಸಭೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಧ್ವಜ ಕಾಯಿದೆ ತಿದ್ದುಪಡಿಗೆ ನಿಧಾನವಾಗಿ ಯಾದರೂ ಭಾರೀ ವಿರೋಧ ವ್ಯಕ್ತವಾಗ ತೊಡಗಿದೆ. ಚಳುವಳಿ ದೊಡ್ಡದಾಗಿ ಬೆಳೆಯ ಬೇಕು. ನಮ್ಮ ದೇಶದ ಬಾವುಟದಿಂದ ಖಾದಿ ಮತ್ತು ಕೈ ಉತ್ಪನ್ನಗಳನ್ನು ಕಿತ್ತು ಹಾಕಲಾಗು ತ್ತಿದೆ. ಇನ್ನು ಮೇಲೆ ಈ ದೇಶಕ್ಕೆ ನೂಲುಗಾರರು, ಹೆಣ್ಣು ಮಕ್ಕಳು, ಬಡವರು, ಹಳ್ಳಿಯ ಜನರು, ರೈತರ ಅಗತ್ಯವಿಲ್ಲ. ಏಕೆಂದರೆ ಅವರ ಆರ್ಥಿಕತೆಯಿಂದ ನಮಗೇನೂ ಉಪಯೋಗವಿಲ್ಲ. ನಮಗೆ ಲಾಭ ತರುತ್ತಿರುವವರು ರಿಲೆಯನ್ಸ್, ಅಂಬಾನಿ, ಆದಾನಿ ಇನ್ನಿತರರ ಕಂಪೆನಿಗಳು ಎಂದು ಸರ್ಕಾರ ಸಾಂಕೇತಿಕವಾಗಿ ಹೇಳುತ್ತಿದೆ. ಆದರೆ ನಾವು ಅದನ್ನು ಒಪ್ಪುವ ಪ್ರಶ್ನೆಯೇ ಇಲ್ಲ. ಹಳ್ಳಿಗಳು, ಕೈಮಗ್ಗ, ಖಾದಿ, ಮಡಕೆಗಳನ್ನು ನಾವು ಉಳಿಸಿಕೊಳ್ಳದಿದ್ದರೆ ದೇಶ ಉಳಿಯುವುದಿಲ್ಲ. ಶ್ರೀಲಂಕಾದ ಸ್ಥಿತಿ ನಮ್ಮ ದೇಶಕ್ಕೂ ಬರಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಬಳಗದ ಸಚ್ಚಿದಾನಂದ (ಸಚ್ಚು), ವಿಶ್ವಾದ್ಯಂತ ಕೈಯ್ಯಿಂದ ತಯಾರಿಸಿದ ಧ್ವಜ ಇರುತ್ತಿತ್ತು. ಆ ಧ್ವಜಕ್ಕೊಂದು ಮಹತ್ವ ಇದೆ. ಅದು ನಮ್ಮ ಕೈ ಕೆಲಸದ ಸಂಕೇತ. ಕುಶಲ ಕರ್ಮಿಗಳು ಚರಕದ ಮೂಲಕ ನೂಲು ತೆಗೆದು, ಅದನ್ನು ಮಗ್ಗದಲ್ಲಿ ನೇಯ್ದು, ಅದರಲ್ಲಿ ಧ್ವಜ ತಯಾರಿಸುತ್ತಿದ್ದರು. ಬಾವುಟ ಎಂಬುದು ನಮ್ಮ ದೇಶವನ್ನು ಪ್ರತಿನಿಧಿಸುವ ಸರ್ವೋಚ್ಛ ವಿಚಾರ. ಖಾದಿಯಲ್ಲೇ ಕೈ ನೂಲಿನಲ್ಲಿ ಧ್ವಜ ಮಾಡಬೇಕೆಂಬ ಕಾಯಿದೆ ಇತ್ತು. ಆದರೆ ಈಗ ಧ್ವಜ ಕಾಯಿದೆಗೆ ತಿದ್ದುಪಡಿ ತಂದಿದ್ದಾರೆ. ಧ್ವಜ ನಮ್ಮ ದೇಶದ ಸಂಕೇತವಾಗಿತ್ತು. ಈಗ ಯಾವ ವಸ್ತುವಿನಲ್ಲಾದರೂ ಧ್ವಜ ಮಾಡಬಹುದು ಎಂಬ ತಿದ್ದುಪಡಿ ಮಾಡಿದ್ದಾರೆ. ಅದರಿಂದ ಮುಂದೆ ಪ್ಲಾಸ್ಟಿಕ್ ಇನ್ನಿತರ ವಸ್ತುಗಳಿಂದಲೂ ಧ್ವಜ ಮಾಡಬಹುದು. ಹಾಗಾಗಿ ನಮ್ಮ ಕಳಕಳಿ ಏನೆಂದರೆ ಹಾಲಿ ಮಾಡಿರುವ ತಿದ್ದುಪಡಿ ಕೈಬಿಡಬೇಕು. ಚರಕದ ನೂಲಿನಿಂದ ತಯಾರಿಸಿದ ಖಾದಿ ಬಟ್ಟೆಯಿಂದಲೇ ರಾಷ್ಟ್ರ ಧ್ವಜ ತಯಾರಾಗಬೇಕು. ಅದಕ್ಕೆ ಖಾದಿ ಬಿಟ್ಟು ಬೇರೆ ವಸ್ತುಗಳನ್ನು ಬಳಸಬಾರದು. ಹಾಗಾಗಿ ನಾವು ಚರಕದ ಮೂಲಕ ನೂಲು ತೆಗೆಯುವ ಕಾರ್ಯಕ್ರಮದ ಮೂಲಕ ಸಭೆಗೆ ಚಾಲನೆ ನೀಡಿದ್ದೇವೆ. ಜೊತೆಗೆ ಈ ವಿಚಾರದ ಬಗ್ಗೆ ಜನಜಾಗೃತಿ ಮೂಡಿಸುವುದು ನಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಬಳಗದ ಸದಸ್ಯರಾದ ಬಾಲಚಂದ್ರ, ಸಂತೋಷ್ ಕೌಲಗಿ, ಸೌಮ್ಯ, ರಜನಿ, ಗೌರಿ ಮತ್ತು ಮಕ್ಕಳು ಇನ್ನಿತರರು ಉಪಸ್ಥಿತರಿದ್ದರು.

> "ಈಗಿನ ಸರ್ಕಾರ ಸಾಂಪ್ರದಾಯಿಕ ಆಚರಣೆಗಳು ಮತ್ತು ಮೌಲ್ಯಗಳನ್ನು ಹತ್ತಿಕ್ಕುತ್ತಿದೆ. ಕೈಯಿಂದ ನೂಲುವ, ಕೈಯಿಂದ ನೇಯ್ದ ಖಾದಿ ಧ್ವಜ ಮತ್ತು ಇತರ ರೀತಿಯ ಸಾಂಪ್ರದಾಯಿಕ ಆಚರಣೆಗಳ ಭಾರತೀಯ ಸಂಪ್ರದಾಯವನ್ನು ನಾವು ಸಂರಕ್ಷಿಸದಿದ್ದರೆ, ದಿವಾಳಿಯಾದ ಶ್ರೀಲಂಕಾದ ಸ್ಥಿತಿ ನಮಗೂ ಬರಬಹುದು. ಹೀಗಾಗಿ ನಾವು ಸ್ವಾತಂತ್ರ್ಯ ದಿನಾಚರಣೆಯ 15 ದಿನಗಳ ಮುನ್ನ ಜು.30ರಂದು ಧ್ವಜ ಸತ್ಯಾಗ್ರಹದ ಭಾಗವಾಗಿ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ.
> –ಪ್ರಸನ್ನ, ರಂಗಕರ್ಮಿ

ಮೈಸೂರು ಅರಮನೆ ಉತ್ತರ ದ್ವಾರದ ಶ್ರೀಚಂದ್ರಮೌಳೇಶ್ವರ ದೇವಸ್ಥಾನದ ಪುನರುಜ್ಜೀವನ ಕಾಮಗಾರಿ ಆರಂಭ

ಮುಜರಾಯಿ ಇಲಾಖೆಯ 16 ಲಕ್ಷ ರೂ. ಅನುದಾನದಲ್ಲಿ ಪುರಾತತ್ವ ಇಲಾಖೆಯಿಂದ ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡ ಸಂರಕ್ಷಣೆ

ಮೈಸೂರು, ಜು.3(ಆರ್‌ಕೆ)–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಳೆಯ ಪಾರಂಪರಿಕ ಕಟ್ಟಡಗಳು ಒಂದೊಂದಾಗಿ ಶಿಥಿಲಗೊಂಡು ಅಪಾಯದ ಅಂಚಿಗೆ ತಲುಪುತ್ತಿವೆ.

ಈಗಾಗಲೇ ಕುಸಿದಿರುವ ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ, ಅಗ್ನಿಶಾಮಕ ಠಾಣೆ, ಕೆ.ಆರ್.ಮಾರುಕಟ್ಟೆ ಸೇರಿದಂತೆ ಹಳೆ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸುವ ಅಥವಾ ಕೆಡವಿ ಹೊಸದಾಗಿ ನಿರ್ಮಿಸುವ ಗೋಜಿಗೇ ಹೋಗದಿರುವುದರಿಂದ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಮುಜರಾಯಿ ಇಲಾಖೆಗೆ ಸೇರಿದ ಈ ದೇವಸ್ಥಾನದ ಕಟ್ಟಡ ಶಿಥಿಲಗೊಂಡು ಛಾವಣಿ, ಪ್ಯಾರಾಪಿಟ್ ವಾಲ್‌ಗಳ ಪ್ಲಾಸ್ಟಿಂಗ್ ಕೆಲವೆಡೆ ಕಳಚಿ ಬಿದ್ದಿದ್ದು, ಇತ್ತೀಚೆಗೆ ಸುರಿದ ಮಳೆಯಿಂದಾಗಿ ನೀರು ಸೋರುತ್ತಿತ್ತು. ಕಟ್ಟಡ ದುಸ್ಥಿತಿಗೆ ತಲುಪಿ ಅಪಾಯ ಸಂಭವಿಸಲಿದೆ ಎಂಬುದನ್ನು ಅರಿತ ಇಲಾಖೆಯು ಕಟ್ಟಡದ ಸಂರಕ್ಷಣೆಗೆ ನಿರ್ಧರಿಸಿತ್ತು.

ಪಾರಂಪರಿಕ ಕಟ್ಟಡವಾಗಿರುವುದರಿಂದ ನುರಿತ ತಜ್ಞರ ಮೇಲ್ವಿಚಾರಣೆಯಲ್ಲಿ ವಿಶೇಷ ಕೌಶಲ್ಯ (Skill) ಹೊಂದಿರುವ ಕೆಲಸಗಾರರೇ ಕಾಮಗಾರಿ ಮಾಡಬೇಕಾಗಿರುವುದರಿಂದ ಶ್ರೀ ಚಂದ್ರಮೌಳೀಶ್ವರ ದೇವಾಲಯದ ಕೆಲಸವನ್ನು ಪುರಾತತ್ವ ಇಲಾಖೆಗೆ ಒಪ್ಪಿಸಿರುವ ಮುಜರಾಯಿ ಇಲಾಖೆಯು, 16 ಲಕ್ಷ ರೂ. ಅನುದಾನ ಮಂಜೂರು ಮಾಡಿದೆ.

ಮುಜರಾಯಿ ಇಲಾಖೆ ಕೋರಿಕೆ ಮೇರೆಗೆ ಅಂದಾಜು ಪಟ್ಟಿ (Estimate) ತಯಾರಿಸಿ 13,29,397 ರೂ.ಗಳಿಗೆ ಟೆಂಡರ್ ಅಂತಿಮಗೊಳಿಸಿರುವ ಪುರಾತತ್ವ ಇಲಾಖೆ ಸಂರಕ್ಷಣಾ ಇಂಜಿನಿಯರ್‌ಗಳು ಜೂನ್ 24ರಿಂದ ರಿಪೇರಿ ಕಾಮಗಾರಿಯನ್ನು ಆರಂಭಿಸಿದ್ದಾರೆ. 4 ಲಕ್ಷ ರೂ.ಗಳ ಮೊದಲ ಕಂತಿನ ಹಣ ಬಿಡುಗಡೆಯಾಗಿದ್ದು, ಮದ್ರಾಸ್ ತಾರಸಿಯನ್ನು ವೆದರ್ ಪ್ರೂಫ್ ಕಾಂಕ್ರೀಟ್‌ನಿಂದ ಸಮತಟ್ಟು ಮಾಡಿ ಅದರ ಮೇಲೆ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಯಲಹಂಕ ಟೈಲ್ಸ್ ಅಳವಡಿಸಲಾಗುವುದು.

ಪೇಟಿಂಗ್, ಪಾಯಿಂಟಿಂಗ್, ಪ್ಯಾರಾಪಿಟ್ ವಾಲ್, ಗೋಪುರ ರಿಪೇರಿ, ಗೋಡೆಗಳಿಗೆ ಹೊಸದಾಗಿ ಪ್ಲಾಸ್ಟಿಂಗ್ ಮಾಡುವುದೂ ಸೇರಿದಂತೆ ಶಿಥಿಲಾವಸ್ಥೆಯಲ್ಲಿರುವ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದ ಪಾರಂಪರಿಕ ಕಟ್ಟಡವನ್ನು ಪುನರುಜ್ಜೀವನಗೊಳಿಸುವ ಕಾರ್ಯ ಭರದಿಂದ ನಡೆಯುತ್ತಿದೆ. ಈ ಹಿಂದೆ ಕಟ್ಟಡ ನಿರ್ಮಾಣಕ್ಕೆ ಬಳಸಿರುವ ವಸ್ತುಗಳನ್ನೇ ಹಾಕಿ ಎಲ್ಲಿಯೂ ಪಾರಂಪರಿಕ ವಿನ್ಯಾಸಕ್ಕೆ ಧಕ್ಕೆ ಬಾರದಂತೆ ಕಟ್ಟಡವನ್ನು 4 ತಿಂಗಳೊಳಗಾಗಿ ಪುನರುಜ್ಜೀವನಗೊಳಿಸಲಾಗುವುದು ಎಂದು ಪುರಾತತ್ವ ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಭಾರ ಪಾರಂಪರಿಕ ಆಯುಕ್ತೆ ಬಿ.ಆರ್.ಪೂರ್ಣಿಮಾ ಅವರ ಮಾರ್ಗದರ್ಶನದಲ್ಲಿ ಇಲಾಖೆ ಕನ್ಸರ್ವೇಷನ್ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಸಿ.ಟಿ.ಮಹೇಶ, ಪ್ರಮೋದ, ಜೂನಿಯರ್ ಇಂಜಿನಿಯರ್ ಸತೀಶ್, ಪ್ರಥಮ ದರ್ಜೆ ಸಹಾಯಕ ಅನಿಲ್‌ಕುಮಾರ್ ದೇವಾಲಯ ಕಟ್ಟಡದ ಕಾಮಗಾರಿಯ ಮೇಲ್ವಿಚಾರಣೆ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.





ಇದೀಗ ನೆನೆಗುದಿಗೆ ಬಿದ್ದಿದ್ದ ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಕಮೀಷ್ನರ್ ಕಚೇರಿ ಹಳೇ ಪಾರಂಪರಿಕ ಕಟ್ಟಡವನ್ನು ಪಾರಂಪರಿಕ ಶೈಲಿ ವಿನ್ಯಾಸಕ್ಕೆ ಧಕ್ಕೆಯಾಗದಂತೆ ರಿಪೇರಿ ಮಾಡಿ ಸಂರಕ್ಷಿಸುವ ಕೆಲಸ ಕೈಗೆತ್ತಿಕೊಂಡಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು, ಮೈಸೂರು ಅರಮನೆ ಉತ್ತರ ದ್ವಾರ (ಬಲರಾಮ ಗೇಟ್)ದಲ್ಲಿರುವ ಶ್ರೀ ಚಂದ್ರಮೌಳೇಶ್ವರ ದೇವಾಲಯದ ಕಟ್ಟಡದ ಪುನರುಜ್ಜೀವನ ಕಾಮಗಾರಿಯನ್ನು ಆರಂಭಿಸಿದೆ.

ಎಂಎಲ್‌ಎ ಅನುದಾನದಡಿ ಸರ್ಕಾರಿ ಶಾಲೆಗಳಿಗೆ ಬಸ್!

ಬೆಂಗಳೂರು: ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವರದಾನವಾಗುವಂತಹ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದ್ದು, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಅಡಿಯಲ್ಲಿ ಸರ್ಕಾರಿ ಶಾಲೆಗಳಿಗೆ ಬಸ್ ಖರೀದಿಸಲು ಸೌಲಭ್ಯ ವನ್ನು ಕಲ್ಪಿಸಿದೆ. ಶಾಸಕರ ಸ್ಥಳೀಯ ಪ್ರದೇಶಾ ಭಿವೃದ್ಧಿ ನಿಧಿಯಡಿ ಖರೀದಿಸಲಾಗುವ ಸರ್ಕಾರಿ ಶಾಲಾ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಉಚಿತ ವಾಗಿ ಮನೆ–ಶಾಲೆಗಳ ನಡುವೆ ಸಂಚರಿಸಬಹುದಾಗಿದೆ. ಸರ್ಕಾರದ ಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಅಧಿಸೂಚನೆ ಪ್ರಕಾರ, ಪೆಟ್ರೋಲ್ ಖರ್ಚು ಸೇರಿದಂತೆ ಬಸ್‌ಗಳ ನಿರ್ವಹಣೆಯ ಎಲ್ಲಾ ಹೊಣೆಗಾರಿಕೆಯನ್ನು ಶಾಲಾಭಿವೃದ್ಧಿ, ನಿಗಾ ಸಮಿತಿಗೆ ವಹಿಸಲಾಗಿದೆ. ಎಲ್ಲಾ ಸರ್ಕಾರಿ ಶಾಲೆಗಳಿಗೂ ಬಸ್ ಖರೀದಿಗೆ ಅನುದಾನ ನೀಡುವಷ್ಟು ಆರ್ಥಿಕ ಅನುಕೂಲತೆ ಇಲ್ಲದೇ ಇರುವ ಹಿನ್ನೆಲೆಯಲ್ಲಿ ನೆರೆ ಗ್ರಾಮ ಅಥವಾ ವಿಧಾನಸಭಾ ಕ್ಷೇತ್ರಗಳ ಮಕ್ಕಳಿಗೂ ಶಿಕ್ಷಣ ನೀಡುತ್ತಿರುವಂತಹ ಹೆಚ್ಚಿನ ಶಾಲೆಗಳಿಗೆ ಬಸ್ ಖರೀದಿಸಲು ಸಾಧ್ಯವಾಗಲಿದೆ. ಮೇ ತಿಂಗಳಲ್ಲಿ ನಡೆದ ಸಭೆಯಲ್ಲಿ ಸಿಎಂ ಬೊಮ್ಮಾಯಿ ಈ ಬಗ್ಗೆ ಪ್ರಸ್ತಾಪಿಸಿದ್ದರು.

ನಕಲಿ ದಾಖಲೆ ಸೃಷ್ಟಿಸಿ ಕೊಡಗು ಬೆಳೆಗಾರರ ಜಮೀನು ಮೈಸೂರು ವ್ಯಕ್ತಿಗೆ ಮಾರಾಟ

ಜಮೀನು ಖರೀದಿಸಿದ ವ್ಯಕ್ತಿಗೆ ಹಣವನ್ನು ಕಳೆದುಕೊಂಡು ಕ್ರಿಮಿನಲ್ ಕೇಸ್ ಎದುರಿಸುತ್ತಿರುವ ಪೀಕಲಾಟ

ಮೈಸೂರು, ಜು.3– ಕೊಡಗಿನ ಬೆಳೆಗಾರರೊಬ್ಬರಿಗೆ ಸೇರಿದ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಮೈಸೂರಿನ ಬೋಗಾದಿಯ ವ್ಯಕ್ತಿಯೋರ್ವರಿಗೆ ಮಾರಾಟ ಮಾಡಿರುವ ಬಗ್ಗೆ ವರದಿಯಾಗಿದೆ. ಈ ಪ್ರಕರಣದಲ್ಲಿ ಕೊಡಗಿನ ಬೆಳೆಗಾರರು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ ವ್ಯಕ್ತಿ ಮತ್ತು ಖರೀದಿಸಿದವರ ವಿರುದ್ಧವೂ ಕ್ರಿಮಿನಲ್ ಕೇಸ್ ದಾಖಲಿಸಿದ್ದು, ಜಮೀನು ಖರೀದಿಸಿದವರು ಹಣವನ್ನು ಕಳೆದುಕೊಂಡು ಕ್ರಿಮಿನಲ್ ಕೇಸ್ ಎದುರಿಸುವ ಪರಿಸ್ಥಿತಿಗೆ ಒಳಗಾಗಿದ್ದಾರೆ.

ಬೋಗಾದಿ ನಿವಾಸಿ ಎಚ್.ವಿ.ದೀಕ್ಷಿತ್(46) ವಂಚನೆಗೊಳಗಾದವರಾಗಿದ್ದು, ಜಯಪುರ ಹೋಬಳಿ ಮಾದಳ್ಳಿ ಗ್ರಾಮದ ಪಾಪಣ್ಣ ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಿದ ಆರೋಪಕ್ಕೆ ಒಳಗಾದವನು.

ವಿವರ: ಮಾದಳ್ಳಿ ಗ್ರಾಮದ ದೇವೀರಮ್ಮ ಮತ್ತು ಕುಟುಂಬದವರು ಮಾದಳ್ಳಿ ಸರ್ವೆ ನಂ.127/2ರಲ್ಲಿನ್ನ 2 ಎಕರೆ ಜಮೀನನ್ನು ಕೊಡಗಿನ ನಾಪೋಕ್ಲು ಬಳಿಯ ಬೇತು ಗ್ರಾಮದ ಬೆಳೆಗಾರ ಎಂ.ಡಿ.ಅಯ್ಯಣ್ಣ ಅವರಿಗೆ 2003ರ ಸೆ.4ರಂದು ಮಾರಾಟ ಮಾಡಿದ್ದರು. ಅದರಂತೆ ಕಂದಾಯ ದಾಖಲೆಗಳು ಅಯ್ಯಣ್ಣ ಅವರ ಹೆಸರಿಗೆ ವರ್ಗಾವಣೆಯಾಗಿದ್ದವು. ಆದರೆ 2021ರ ಅ.30ರಂದು ನೋಂದಣಾಧಿಕಾರಿಗಳ ಕಚೇರಿಯ ದಾಖಲೆಗಳಲ್ಲಿ ಅಯ್ಯಣ್ಣ ಅವರ ಹೆಸರಿಗೆ ಬದಲಾಗಿ ವಿ.ದೀಕ್ಷಿತ್ ಮತ್ತು ಎಸ್.ಶಿವಕುಮಾರ್ ಅವರ ಹೆಸರುಗಳು ನಮೂದಾಗಿತ್ತು. ಈ ಜಮೀನನ್ನು ದೇವೀರಮ್ಮ ಅವರ 2ನೇ ಪುತ್ರ ಪಾಪಣ್ಣ ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದು ಬಂದಿತ್ತು. ಈ ಸಂಬಂಧ ಅಯ್ಯಣ್ಣ ಅವರು 2021ರ ಡಿ.8ರಂದು ಜಯಪುರ ಠಾಣೆಯಲ್ಲಿ ಜಮೀನು ಮಾರಿದ ಪಾಪಣ್ಣ ಮತ್ತು ಖರೀದಿಸಿದ ದೀಕ್ಷಿತ್ ಹಾಗೂ ಶಿವಕುಮಾರ್ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿದ್ದರು.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದೀಕ್ಷಿತ್ ಅವರು ಪಾಪಣ್ಣ ವಿರುದ್ಧ ಮೈಸೂರಿನ ವಿಜಯನಗರ ಠಾಣೆಯಲ್ಲಿ ಜು.1ರಂದು ಪ್ರಕರಣ ದಾಖಲಿಸಿದ್ದಾರೆ. ಮಾದಳ್ಳಿ ಸರ್ವೆ ನಂ.127/2ರಲ್ಲಿನ 2 ಎಕರೆ ಜಮೀನನ್ನು ಪಾಪಣ್ಣ ತಮಗೆ 2021ರ ಅ.30ರಂದು ಮಾರಾಟ ಮಾಡಿ ಮೈಸೂರು ಪಶ್ಚಿಮ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾವಣೆ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ತಮ್ಮ ಬಳಿ ಅವರು 10 ಲಕ್ಷ ರೂ. ಪಡೆದಿದ್ದರು. ಉಳಿಕೆ 22 ಲಕ್ಷ ರೂ.ಗಳಿಗೆ ಚೆಕ್ ಅನ್ನು ನೀಡಿದ್ದೆ. ಆದರೆ ಕೊಡಗಿನ ಅಯ್ಯಣ್ಣ ಅವರು ತಾವೂ ಸೇರಿದಂತೆ ಪಾಪಣ್ಣ ವಿರುದ್ಧ ಜಯಪುರ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿದ್ದರಿಂದ ಚೆಕ್‌ಗೆ ಬ್ಯಾಂಕ್‌ನಲ್ಲಿ ಸ್ಟಾಪ್ ಪೇಮೆಂಟ್ ಮಾಡಿಸಿದ್ದೇನೆ. ನಕಲಿ ದಾಖಲೆ ಸೃಷ್ಟಿಸಿ ತನಗೆ ಜಮೀನು ಮಾರಾಟ ಮಾಡಿರುವ ಪಾಪಣ್ಣ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಕೋರಿದ್ದಾರೆ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು, ಜು.3(ಜಿಎ)– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಜನ ಚೈತನ್ಯ ಫೌಂಡೇಷನ್ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಮೈಸೂರಿನ ವಿದ್ಯಾರಣ್ಯಪುರಂನ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಮಕ್ಕಳು ಓದಿನ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ ಸೇರಿದಂತೆ ಇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಪೋಷಕರು ಅದಕ್ಕೆ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾಹಿತಿ ಪ್ರೊ.ಹೆಚ್.ಗೋವಿಂದಯ್ಯ, ಕೆಪಿಟಿಸಿಎಲ್ ನಿವೃತ್ತ ಇಂಜಿನಿಯರ್ ಎಂ.ಸ್ವಾಮಿಲಿಂಗಪ್ಪ, ಲೇಖಕ ಡಾ.ಅಮ್ಮಸಂದ್ರ ಸುರೇಶ್, ನಿವೃತ್ತ ಇಂಜಿನಿಯರ್ ಎನ್.ಶ್ರೀನಿವಾಸಲು, ಲೆಕ್ಕ ಪರಿಶೋಧಕ ಎಂ.ಎನ್.ಸಂಪತ್‌ಕುಮಾರ್ ಹಾಗೂ ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಭಾರೀ ಬೆಲೆಬಾಳುವ ಆಸ್ತಿ 22 ವರ್ಷದ ನಂತರ ಶಿಕ್ಷಣ ಇಲಾಖೆ ವಶಕ್ಕೆ

ಮೈಸೂರು, ಜು.3(ಎಸ್‌ಪಿಎನ್)– ಕಳೆದ 22 ವರ್ಷಗಳಿಂದ ಖಾಸಗಿ ಶಾಲಾ ಆಡಳಿತ ಮಂಡಳಿ ವಶದಲ್ಲಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಜಾಗವನ್ನು ಮರಳಿ ವಶಕ್ಕೆ ಪಡೆಯಲಾಗಿದೆ ಎಂದು ಡಿಡಿಪಿಐ ರಾಮಚಂದ್ರರಾಜೇ ಅರಸ್ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕಳೆದ 22 ವರ್ಷಗಳ ಹಿಂದೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರ ಮೇಲೆ ಫರೂಕಿಯ ವಿದ್ಯಾಸಂಸ್ಥೆಗೆ ಲಷ್ಕರ್ ಮೊಹಲ್ಲಾದ ನಿಜಾಮಿಯ ಶಾಲೆ ಪಕ್ಕದಲ್ಲಿದ್ದ 11,740 ಚದರಡಿ ಖಾಲಿ ಜಾಗ ಮತ್ತು 12 ಕೊಠಡಿ ನಿರ್ಮಿಸಿದ್ದ ಸ್ಥಳವನ್ನು 2 ವರ್ಷದ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ತದನಂತರ ಆ ಆಡಳಿತ ಮಂಡಳಿಯವರು ಈ ಜಾಗ ಗುತ್ತಿಗೆ ಕರಾರು ರದ್ದಾದ ತಕ್ಷಣ ಇಲಾಖೆಗೆ ನೀಡದೇ, ಹೈಕೋರ್ಟ್‌ನಲ್ಲಿ ಜಾಗ ಸಂಬಂಧ ದಾವೆ ಹೂಡಿದ್ದರು. ಹೈಕೋರ್ಟ್‌ನಲ್ಲಿ ವಿಚಾರಣೆ ನಡೆದು ಇಲಾಖೆ ಪರವಾಗಿ ತೀರ್ಪು ಬಂದಿತ್ತು ಎಂದರು.

ಈ ಜಾಗ ಸಂಬಂಧ ತೀರ್ಪು ಬಂದು ಹಲವು ವರ್ಷ ಕಳೆದಿದ್ದರೂ, ಹಿಂದಿನ ಅಧಿಕಾರಿಗಳು ವಶಕ್ಕೆ ಪಡೆಯುವ ಗೋಜಿಗೆ ಹೋಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಗಮನಕ್ಕೆ ತಂದು, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಜಾಗದ ಸಂಬಂಧ ವಿವರಣೆ ನೀಡಲಾಗಿತ್ತು. ಕೊನೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಕೋಟ್ಯಾಂತರ ರೂ. ಬೆಲೆಬಾಳುವ ಜಾಗವನ್ನು ಇಲಾಖೆ ವಶಕ್ಕೆ ಪಡೆಯಲು ಆದೇಶಿಸಿದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಭದ್ರತೆಯಲ್ಲಿ ಶನಿವಾರ ಜಾಗವನ್ನು ಮರಳಿ ಇಲಾಖೆ ವಶಕ್ಕೆ ಪಡೆಯಲಾಗಿದೆ ಎಂದರು.

ಟಿಪ್ಪರ್ ಹರಿದು ಬೈಕ್‌ನ ಹಿಂಬದಿ ಸವಾರ ಸಾವು

ಮೈಸೂರು, ಜು.3–ಟಿಪ್ಪರ್ ಹರಿದು ದ್ವಿಚಕ್ರ ವಾಹನದ ಹಿಂಬದಿ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ರಿಂಗ್ ರೋಡ್ ಬೋಗಾದಿ ರಸ್ತೆ ಸಿಗ್ನಲ್ ಬಳಿ ಜು.1ರಂದು ಬೆಳಗ್ಗೆ ಸಂಭವಿಸಿದೆ. ಮಂಡ್ಯದ ಸಿದ್ದರಾಮು (58) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಎಲೆಕ್ಟ್ರಾನಿಕ್ ಕೆಲಸಕ್ಕಾಗಿ ಮೈಸೂರಿನ ಚಾಮುಂಡೇಶ್ವರಿ ನಗರದ ಎಲೆಕ್ಟ್ರೀಷಿಯನ್ ಆರ್.ಪ್ರವೀಣ್(42) ಅವರು ಬಜಾಜ್ ಡಿಸ್ಕವರಿ ಬೈಕ್‌ನಲ್ಲಿ (ಕೆಎ 45 ವೈ 4359) ಮಂಡ್ಯದಿಂದ ರಾಜರಾಜೇಶ್ವರಿ ನಗರಕ್ಕೆ ಕರೆದೊಯ್ಯುತ್ತಿದ್ದರು. ಜೂ.1ರಂದು ಬೆಳಗ್ಗೆ 9.35ರ ಸುಮಾರಿನಲ್ಲಿ ಇವರ ಬೈಕ್ ಬೋಗಾದಿ ರಸ್ತೆಯ ಸಿಗ್ನಲ್ ದಾಟಿ ಮುಂದೆ ಹೋಗುತ್ತಿದ್ದ ವೇಳೆ ವೇಗವಾಗಿ ಬಂದ ಟಿಪ್ಪರ್ (ಕೆಎ 42 ಎ 7598) ಇವರ ಬೈಕನ್ನು ಓವರ್ ಟೇಕ್ ಮಾಡುವ ವೇಳೆ ಟಿಪ್ಪರ್‌ನ ಒಂದು ಭಾಗ ಬೈಕ್‌ನ ಹ್ಯಾಂಡಲ್‌ಗೆ ಟಚ್ ಆಗಿ ಸಿದ್ದರಾಮು ಅವರು ಎಡ ಭಾಗಕ್ಕೆ ಬಿದ್ದಾಗ ಅವರ ಮೇಲೆ ಟಿಪ್ಪರ್‌ನ ಚಕ್ರ ಹರಿದಿದೆ. ಬಲ ಭಾಗಕ್ಕೆ ಬಿದ್ದ ಪ್ರವೀಣ್ ಅವರೂ ಕೂಡ ಗಾಯಗೊಂಡಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಸಿದ್ದರಾಮು ಅವರನ್ನು ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಅವರು ಮೃತಪಟ್ಟಿದ್ದಾರೆ. ಅಪಘಾತ ಸಂಭವಿಸುತ್ತಿದ್ದ ಟಿಪ್ಪರ್ ಚಾಲಕ ಕಿರಣ್ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆಯಿಂದ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಪ್ರತಿಭಾ ಪುರಸ್ಕಾರ

ಮೈಸೂರು, ಜು.3 (ಆರ್‌ಕೆಬಿ)–ಕುವೆಂಪುನಗರದ ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ 8ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಜು.5ರಿಂದ 3 ದಿನಗಳ ಕಾಲ ನಡೆಯಲಿದೆ.

ಜು.5ರಂದು ಬೆಳಗ್ಗೆ 9ಕ್ಕೆ ಚಾಮುಂಡೇಶ್ವರಿ ಅಮ್ಮನವರ ಮೂರ್ತಿಯನ್ನು ಕೆಹೆಚ್‌ಬಿ ಕಾಲೋನಿ 2ನೇ ಹಂತದಲ್ಲಿರುವ ಶ್ರೀ ಉಮಾಮಹೇಶ್ವರಿ ದೇವಸ್ಥಾನದಿಂದ ಮೆರವಣಿಗೆ ಮೂಲಕ ಸಿಐಟಿಬಿ 2ನೇ ಹಂತದ ಎಂ.ಬ್ಲಾಕ್ ಗಣಪತಿ ದೇವಸ್ಥಾನದ ಹಿಂಭಾಗ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು.

ಅಂದು ಸಂಜೆ 7 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಸಂಸದರು, ಶಾಸಕರು, ಮೇಯರ್, ಮುಡಾ ಅಧ್ಯಕ್ಷರು ಮತ್ತು ಸಮಾಜದ ಗಣ್ಯರು ಭಾಗವಹಿಸುವರು. ನಂತರ ಬಡಾವಣೆಯ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ಜು.6ರಂದು ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಜನಪದ ಕಲಾವಿದ ಮಹಾರಾಜ್ ಲಕ್ಷ್ಮಣರಾವ್ ಘೋರಾತ ಮತ್ತು ತಂಡದಿಂದ ಶ್ರೀ ಅಂಭಾಭವಾನಿ ದೇವಿಯ ಮಹಾಗೊಂದಳಿ ಪೂಜೆ ಏರ್ಪಡಿಸಿದೆ.

ಸಂಜೆ 7.30ಕ್ಕೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ಮಾಜಿ ಶಾಸಕರು, ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ. ಜು.7ರಂದು ಮಧ್ಯಾಹ್ನ 12 ಗಂಟೆಗೆ ದೇವಿಯ ವಿಗ್ರಹ ವಿಸರ್ಜನೆಯಾಗಲಿದೆ ಎಂದು ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಜೆ.ರಾಜೇಶ್ ಕುತ್ನೀಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಜಯಂತಿ

ಮೈಸೂರು,ಜು.3(ಆರ್‌ಕೆಬಿ)– ಮೈಸೂರಿನ ಗೌರೀಶಂಕರನಗರದ ಗೌರೀಶಂಕರ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಸೋಮವಾರ ಮಧ್ಯಾಹ್ನ 2.30ಕ್ಕೆ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಜಯಂತಿ ಅಂಗವಾಗಿ ವಚನ ಸಾಹಿತ್ಯ ಸಂಕರ್ಷಣಾ ದಿನವನ್ನು ಆಚರಿಸಲಾಗುವುದು.

ಶ್ರೀ ಗೌರೀಶಂಕರ ಹಿರಿಯ ಪ್ರಾಥಮಿಕ ಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದೆ. ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಅಧ್ಯಕ್ಷತೆ ವಹಿಸುವರು. ಸಾಹಿತಿ ಬನ್ನೂರು ಕೆ.ರಾಜು, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ವಚನ ಗಾಯಕ ಉಮಾಪತಿ, ಮುಖ್ಯ ಶಿಕ್ಷಕ ಸಿ.ಸಂಪತ್ತು, ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಇತರರು ಭಾಗವಹಿಸುವರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.3(ಎಂಕೆ)–ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. 2022ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಜು.15ರೊಳಗೆ ಅರ್ಜಿ ಸಲ್ಲಿಸಬೇಕಾಗಿದೆ. https://bit.ly/ksgea prathi bapuraskara2022 ಲಿಂಕ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿದ್ದು, ವಿದ್ಯಾರ್ಥಿಯ ತಂದೆ–ತಾಯಿ ಅಥವಾ ಪೋಷಕರು ಕಡ್ಡಾಯವಾಗಿ ಸರ್ಕಾ ರದ ಖಾಯಂ ನೌಕರರಾಗಿರಬೇಕು.

ನಿಧನ

ಕಾರ್ತಿಕ್ ಕುಮಾರ್



ಮೈಸೂರು,ಜು.3–ಸಾಫ್ಟ್‌ವೇರ್ ಇಂಜಿನಿಯರ್ ಮತ್ತು ಮಂಚೇಗೌಡನಕೊಪ್ಪಲು ನಿವಾಸಿ ಎಂ.ಬಿ. ಕಾರ್ತಿಕ್ ಕುಮಾರ್(29) ಅವರು ತೀವ್ರ ಹೃದಯಾಘಾತದಿಂದ ಭಾನುವಾರ ನಿಧನರಾದರು. ದಿವಂಗತರು ತಂದೆ ಬೆಟ್ಟೇಗೌಡ, ತಾಯಿ ಮೀನಾಕ್ಷಿ, ಸಹೋದರ ನಿತಿನ್, ಅತ್ತಿಗೆ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಕ್ರಿಕೆಟ್ ಆಟಗಾರರಾದ ಕಾರ್ತಿಕ್ ಕುಮಾರ್ ಒಳ್ಳೆಯ ಸ್ನೇಹಜೀವಿಯಾಗಿದ್ದು, ಉತ್ತಮ ದೇಹದಾರ್ಢ್ಯವನ್ನು ಹೊಂದಿ ಆರೋಗ್ಯವಂತರಾಗಿದ್ದರು. ಇಂದು ಮುಂಜಾನೆ ಎದೆ ನೋವು ಎಂದ ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ನಿಧನರಾದರು. ಹೆಬ್ಬಾಳಿನಲ್ಲಿರುವ ಸಿಐಟಿಬಿ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ಶಂಕರ್



ತಿ.ನರಸೀಪುರ ತಾಲೂಕಿನ ವ್ಯಾಸರಾಜಪುರ ಗ್ರಾಮದ ನಿವಾಸಿ 46 ವರ್ಷದ ಪಿ.ಶಂಕರ್(ಶೇಖರ್) ಶನಿವಾರ ಹೃದಯಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಸ್ವಗ್ರಾಮದಲ್ಲಿ ಶನಿವಾರ ಸಂಜೆ ನೆರವೇರಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.07.2022 ಸೋಮವಾರ, ಮಳೆ ನಕ್ಷತ್ರ : ಆರಿದ್ರ, 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥಿ, ನಕ್ಷತ್ರ : ಮಖೆ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಧಾರ್ಮಿಕ ಇಲಾಖೆ (ಕರ್ನಾಟಕ ಸರ್ಕಾರ):** ಅರಮನೆ ಆವರಣದಲ್ಲಿರುವ ಕೋಟೆ ತ್ರಿನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಲೋಕಕಲ್ಯಾಣಾರ್ಥವಾಗಿ ಶ್ರೀ ಗಿರಿಜಾ ಮಹೋತ್ಸವ. ಆಷಾಢ ಶುದ್ಧ ಪಂಚಮಿ ಸೋಮವಾರ ಹರಿದ್ರಾ ಕುಂಕುಮ ಪ್ರಧಾನ ಕಾರ್ಯಕ್ರಮ. ಸ್ಥಳ: ಅರಮನೆ ಆವರಣದಲ್ಲಿರುವ ದೇವಸ್ಥಾನ, ಬೆಳಗ್ಗೆ: 7 ಗಂಟೆಗೆ.

■ **ವಿಜಯ ವಿಠಲ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ :** ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ (2021–22) ಕಾರ್ಯಕ್ರಮ, ಉದ್ಘಾಟನೆ: ರಾಮಕೃಷ್ಣ ವಿದ್ಯಾಶಾಲಾ ಪ್ರತಿನಿಧಿ ಸ್ವಾಮಿ ಯುಕ್ತೇಷಾನಂದಾಜಿ, ಅಧ್ಯಕ್ಷತೆ: ವಿಜಯ ವಿಠಲ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಆರ್. ವಾಸುದೇವ ಭಟ್, ಸ್ಥಳ: ವಿದ್ಯಾ ಸಂಸ್ಥೆಯ ಆವರಣ, ಸರಸ್ವತಿಪುರಂ, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಪೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಸಂತ ಫಿಲೋಮಿನಾ ಕಾಲೇಜು ಕನ್ನಡ ಮತ್ತು ಇತಿಹಾಸ ವಿಭಾಗ, ನವಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಉದ್ಘಾಟನೆ: ಕಾಲೇಜು ಉಪನ್ಯಾಸಕ ರೆ.ಫಾ. ಡಾ. ಬರ್ನಾರ್ಡ್ ಪಿ. ಬಾರ್ನಿಸ್, ನಾಲ್ಕು ಕೃತಿಗಳ ಲೋಕಾರ್ಪಣೆ: ಮೈಸೂರು ವಿವಿ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷ ಡಾ. ವಿಜಯ್ ಶೇಷಾದ್ರಿ, ಅಧ್ಯಕ್ಷತೆ: ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲರಾದ ಡಾ. ರವಿ, ಜೆ.ಡಿ. ಸಲ್ಡಾನ್ಹಾ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮೀಣಿಶ ವಿಜಯ'ದ ವಿಶೇಷ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ: 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ: ಬಾ.ಹ.ರಾಮಕುಮಾರಿ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್. ಶ್ರೀಪಾದ್, 6.40 ಭಾವಗೀತೆ, 6.50 ವನಮಹೋತ್ಸವ: ಪ್ರಾಯೋಜಕರು–ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ–ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ. ಭಾಗವಹಿಸುವವರು–ಎಂ. ದ್ವಾರಕಾನಾಥ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, **ಮಧ್ಯಾಹ್ನ:** 12.05 ವನಿತಾ ವಿಹಾರ: 12.30 ಭಕ್ತಿಗೀತೆಗಳು–ಗಿರಿಜಾ ರಾಜ್‌ಕುಮಾರ್, 12.45 ನಮ್ಮ ಆರೋಗ್ಯ 'ಲ್ಯಾಪರೋಸ್ಕೋಪಿಕ್ ಅಥವಾ ಕೀ ಹೋಲ್ ಸರ್ಜರಿ' ಕುರಿತು, ಡಾ.ಅರವಿಂದ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಎನ್.ಗಾಯಿತ್ರಿ, 3.00ಆರ್.ಕೆ.ಪದ್ಮನಾಥ–ವೀಣಾವಾದನ, 4.00 ಮಹಿಳಾರಂಗ– 'ಡಾಕ್ಟರ್ ಸಮಯ' ಭಾಗವಹಿಸುವವರು ಡಾ.ಚೈತನ್ಯಾ ಎಸ್.ಜಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ರೇಷ್ಮೆ ಹಾಗೂ ತರಕಾರಿ ಕೃಷಿಯಲ್ಲಿನ ಅನುಭವ ಕುರಿತು ಕೆ.ಸಿ.ಅನಂತಕುಮಾರ್ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ

ಮೈಸೂರು, ಜು.3(ಎಂಕೆ)– ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ 2020–21ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು, ಚಾ.ನಗರ, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಮಮಂದಿರದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಮೈಸೂರಿನ ಶ್ರೇಷಾ ಎಸ್.ನೆಕ್ಕರ್, ಪಿ.ಆರ್.ಸಹನಾ, ಎಸ್.ಶ್ರೀಚರಣ್, ಆರ್.ಹರ್ಷ, ಚಾ.ನಗರದ ಆರ್.ಲಿಖಿತ್ ಶರಣ್, ಎನ್.ಶ್ರೀಪ್ರಿಯಾ, ಮಂಡ್ಯದ ಎಸ್.ದೀಕ್ಷಾ, ಬಿ.ಎಸ್.ಯಶ್ ಭಾರಧ್ವಾಜ್, ಹಾಸನದ ಹೆಚ್.ವಿ.ಚತುರ್ಥಿ, ಹೆಚ್.ಬಿ.ಪ್ರಮತಿ, ಎಂ.ಆಶಿತಾ, ಡಿ.ಜೆ.ನವನಿಧಿ, ಅನನ್ಯ ಜಿ.ಭಾರಧ್ವಾಜ್ ಹಾಗೂ ಕೊಡಗಿನ ಯು.ಎನ್.ಮಯೂರಿ, ಜಿ.ಎಂ. ಸಿಂಚನ ಭಟ್ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ ಮೊದಲ ಮೂರು ಸ್ಥಾನ ಪಡೆದವರಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್.ಸಚ್ಚಿದಾನಂದ ಮೂರ್ತಿ, ಬ್ರಾಹ್ಮಣರು ಭಿನ್ನಾಭಿಪ್ರಾಯಗಳಿದ್ದರೆ ಬದಿಗೊತ್ತಿ ಒಂದಾಗಬೇಕು. ಸರ್ಕಾರ ನಮಗಾಗಿ ಸಾಕಷ್ಟು ಯೋಜನೆ ನೀಡಿದೆ. ಅದರ ಸದುಪಯೋಗಪಡೆಯಬೇಕು. ಬ್ರಾಹ್ಮಣರನ್ನು ಬೈಯುವವರು ಇರುತ್ತಾರೆ. ಅವರಿಗೆ ಬುದ್ಧಿ ಇಲ್ಲ. ಅವರ ಮನೆಗಳಲ್ಲಿ ಯಾವುದೇ ಶುಭ ಕಾರ್ಯ ನಡೆಯಬೇಕಾದರೆ ಬ್ರಾಹ್ಮಣರಿಲ್ಲದೆ ನಡೆಯುವುದಿಲ್ಲ. ಅವರ ಮಕ್ಕಳು, ಮೊಮ್ಮಕ್ಕಳಿಗೆ ಏನಾದರೂ ಆದರೆ, ಆಗಬೇಕಾದರೆ ಬ್ರಾಹ್ಮಣರ ಬಳಿಯೇ ಬರುತ್ತಾರೆ ಎಂದರು.

ಬ್ರಾಹ್ಮಣರು ಒಂದಾಗಲು ಇದು ಒಳ್ಳೆಯ ಸಂದರ್ಭ. ಪ್ರಧಾನಿಗಳು ಬ್ರಾಹ್ಮಣರಿಗೆ ಶೇ.10ರಷ್ಟು ಮೀಸಲಾತಿ ನೀಡಿದ್ದಾರೆ. ಅಲ್ಲದೆ ಸರ್ಕಾರ ಸಾಕಷ್ಟು ಯೋಜನೆ ನೀಡಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಮಂಡಳಿಗೆ ಸರ್ಕಾರ 60 ಲಕ್ಷ ನೀಡುವುದಾಗಿ ಹೇಳಿತ್ತು ಈಗ 32 ಲಕ್ಷ ಬಿಡುಗಡೆಯ ಹಂತದಲ್ಲಿದೆ. ಬೆಂಗಳೂರಿನಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಲಕ್ಷ ರೂಪಾಯಿಗೆ ಮನೆ ನೀಡಲಾಗುವುದು ಎಂದರು.

ಶಾಸಕ ಎಸ್.ಎ. ರಾಮದಾಸ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಬ್ರಾಹ್ಮಣ, ಅಭಿವೃದ್ಧಿ ಮಂಡಳಿ ನಿರ್ದೇಶಕ ಕೆ.ಎನ್. ಛಾಯಾಪತಿ, ನಗರ ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ಬ್ರಾಹ್ಮಣ ಸಮಾಜದ ಹಿರಿಯ ಮುಖಂಡ ಕೆ.ರಘುರಾಂ ವಾಕಪೇಯಿ, ನಗರ ಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಮಂಡಳಿ ನಿರ್ದೇಶಕಿ ವತ್ಸಲಾ ನಾಗೇಶ್, ಯುವ ಮುಖಂಡರಾದ ರಂಗನಾಥ್, ವಿಕ್ರಮ ಅಯ್ಯಂಗಾರ್, ಅಜಯ್‌ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.



ಬ್ಯಾನರ್‌ನಲ್ಲಿ ಯಡವಟ್ಟು...

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರದ ಕೆಳಗೆ ಅವರ ಹೆಸರು ಬದಲು ಅವರ ತಂದೆಯಾದ ಮಾಜಿ ಸಿಎಂ ಎಸ್.ಆರ್.ಬೊಮ್ಮಾಯಿ ಅವರ ಹೆಸರನ್ನು ಹಾಕಲಾಗಿತ್ತು. ಅಲ್ಲದೆ ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್.ಸಚ್ಚಿದಾನಂದ ಮೂರ್ತಿ ಎಂದು ತಪ್ಪಾಗಿ ಹಾಕಲಾಗಿತ್ತು. ಇದನ್ನು ಗಮನಿಸಿದ ಕೆಲವರು ಮಂಡಳಿ ಯಡವಟ್ಟಿಗೆ ಕಿಡಿಕಾರಿದರು.

ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ ಪರಿಸರ ದಿನಾಚರಣೆ

ಮೈಸೂರು, ಜು.3(ಎಂಕೆ)– ಮೈಸೂರಿನ ಕುವೆಂಪುನಗರದ ತಪೋನಂದನ ಉದ್ಯಾನದಲ್ಲಿ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ 1 ಸಾವಿರ ಸಸಿಗಳನ್ನು ವಿತರಣೆ ಮಾಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಡಯಾಬಿಟಿಸ್ ಹಾಗೂ ಔಷಧಿಯ ಗುಣಗಳುಳ್ಳ 'ಕೃಷ್ಣ ತುಳಸಿ', 'ಅಮೃತಬಳ್ಳಿ', 'ಇನ್ಸೂಲಿನ್', 'ಕರಿಬೇವು', 'ಅಲೂವೇರ', 'ರೂಕಳಿ', 'ಪಪ್ಪಾಯಿ', 'ದಾಳಿಂಬೆ', 'ನಿಂಬೆಗಿಡ', 'ದಾಸವಾಳ', 'ಪಾರಿಜಾತ', 'ಅಡುಸೋಗೆ' ಸೇರಿದಂತೆ ವಿವಿಧ ಬಗೆಯ 1 ಸಾವಿರ ಸಸಿಗಳನ್ನು ವಿತರಿಸಲಾಯಿತು.

ಲಕ್ಷ ಗಿಡನೆಡಲು ಸಹಕರಿಸಿ: ಹೆಚ್.ವಿ. ರಾಜೀವ್ ಸ್ನೇಹ ಬಳಗದ ಸಂಚಾಲಕ ಹುಡ್ಕೋ ಆರ್.ಕುಮಾರ್ ಮಾತನಾಡಿ, ಮೈಸೂರನ್ನು ಹಸಿರಾಗಿರುವುದು ನಮ್ಮ ಗುರಿಯಾಗಿದ್ದು, ಜನ್ಮದಿನ, ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಸಸಿ ನೀಡುವ ಮೂಲಕ ಪರಿಸರ ಸಂರಕ್ಷಣೆಗೆ ತಮ್ಮೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರಲ್ಲದೆ, ಕಳೆದ ಆರು ವರ್ಷಗಳಿಂದಲೂ ಬಳಗ ಉಚಿತವಾಗಿ ಸಸಿಗಳನ್ನು ವಿತರಿಸುತ್ತಿದೆ. ನಾಗರಿಕರು ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವದಂದು ಕರೆ ಮಾಡಿದರೆ ನಾವೇ ಬಂದು ಗಿಡಗಳನ್ನು ಹಾಕಿಕೊಡುತ್ತೇವೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್. ಜಯಲಕ್ಷ್ಮಿ ರಾಜೀವ್, ಲಯನ್ ಜೆ.ಲೋಕೇಶ್, ವಿ.ಕೆ.ಜಯಭಾರತಿ, ಎನ್.ಜಿ.ಗಿರೀಶ್, ಎಂ.ಎಸ್.ರಾಮಪ್ರಸಾದ್, ಶಂಕರ್, ಆನಂದ್, ಮಹೇಶ್, ಪುರುಷೋತ್ತಮ್ ಮತ್ತಿತರರಿದ್ದರು.





ಮೈಸೂರಿನ 35ನೇ ವಾರ್ಡಿನಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ 1.44 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್ ಸೇಟ್ ಭಾನುವಾರ ಚಾಲನೆ ನೀಡಿದರು. ಈ ವೇಳೆ ಕಾರ್ಪೋರೇಟರ್ ಸಾತ್ವಿಕ್ ಸಂದೇಶ್‌ಸ್ವಾಮಿ, ಮಾಜಿ ಉಪಮೇಯರ್ ಶ್ರೀಧರ್, ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷ ಸತ್ಯರಾಜು, ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ಕಾರ್ಯಾಧ್ಯಕ್ಷ ಎಕ್ಬಾಲ್ ಪಾಷಾ, ಅಜೀಜ್ ಸೇಟ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ಎನ್.ಎಸ್.ಯು.ಐ ಉಪಾಧ್ಯಕ್ಷ ಅದ್ನಾನ್, ಯುವಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಮುಖಂಡರಾದ ಎಂ.ರಸೂಲ್, ರೆಹಮತ್ ಖಾನ್, ಅಣ್ಣಯ್ಯ, ರಾಚಯ್ಯ, ಶಕ್ತಿನಗರ ಹಿತರಕ್ಷಣಾ ವೇದಿಕೆ ಹಾಗೂ ಕಾವೇರಿ ಪಾರ್ಕ್ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ತಾಪಂ ಕೆಡಿಪಿ ಸಭೆ

ಮೈಸೂರು, ಜು.3– ಮೈಸೂರು ತಾಲೂಕು ಪಂಚಾಯಿತಿ ವತಿಯಿಂದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಯೋಜನಾ ಕಾರ್ಯಕ್ರಮ(20 ಅಂಶ)ಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಸೋಮವಾರ (ಜು.4) ಬೆಳಗ್ಗೆ 10 ಗಂಟೆಗೆ ಮೈಸೂರು ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತಮಿಳುನಾಡಿನ ನಾಮಕಲ್‌ನಲ್ಲಿ ಇತ್ತೀಚೆಗೆ ನಡೆದ ದಕ್ಷಿಣ ಭಾರತ ಕುಸ್ತಿ ಚಾಂಪಿಯನ್‌ಶಿಪ್‌ನ 87 ಕೆಜಿ ವಿಭಾಗದಲ್ಲಿ ಮೈಸೂರಿನ ಎಸ್.ರಾಕೇಶ್ ಚಕ್ರವರ್ತಿ ಚಿನ್ನದ ಪದಕ ಗಳಿಸಿದ್ದಾರೆ. ಇವರು ಸುಣ್ಣದಕೇರಿಯ ಬಿ.ಶಂಕರ್ ಚಕ್ರವರ್ತಿ ಮತ್ತು ಜೆ. ಲತಾ ದಂಪತಿ ಪುತ್ರ. ಮೈಸೂರು ವಿವಿಯ ನಿವೃತ್ತ ಕುಸ್ತಿ ತರಬೇತುದಾರ ಎಲ್.ಮಂಜಪ್ಪ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ವಿದ್ಯಾರ್ಥಿನಿಗೆ 1.23 ಲಕ್ಷ ಆನ್‌ಲೈನ್ ವಂಚನೆ

ಬೇಲೂರು, ಜು.2–ಸ್ನಾಪ್ ಡೀಲ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ದಿನಕ್ಕೆ 5 ಸಾವಿರದಿಂದ 50 ಸಾವಿರದವರೆಗೆ ಸಂಪಾದಿಸಬಹುದು ಎಂದು ನಂಬಿಸಿ ವಿದ್ಯಾರ್ಥಿನಿಗೆ 1.23 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ವರದಿಯಾಗಿದೆ.

ಬೇಲೂರು ತಾಲೂಕು ಕನ್ನಾನಾಯಕನಹಳ್ಳಿ ನಿವಾಸಿ ವಿದ್ಯಾರ್ಥಿನಿ ಕೆ.ಎಸ್.ಪೂಜಾ(21) ಪಾರ್ಟ್ ಟೈಮ್ ಜಾಬ್‌ಗಾಗಿ ಗೂಗಲ್‌ನಲ್ಲಿ ಸರ್ಚ್ ಮಾಡುತ್ತಿದ್ದಾಗ ವಾಟ್ಸಾಪ್ ನಂಬರ್‌ವೊಂದು ದೊರೆತಿದೆ. ಆ ನಂಬರ್ ಅನ್ನು ಸಂಪರ್ಕಿಸಿದಾಗ ಮಾತನಾಡಿದ ವ್ಯಕ್ತಿ ತಾನು ಸ್ನಾಪ್ ಡೀಲ್ ಕಂಪನಿಯ ಸಹಾಯಕನೆಂದು ಪರಿಚಯಿಸಿಕೊಂಡು ಈ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ದಿನಕ್ಕೆ 5 ರಿಂದ 50 ಸಾವಿರ ರೂ. ಗಳಿಸಬಹುದು ಎಂದು ತಿಳಿಸಿ, ಲಿಂಕ್‌ವೊಂದನ್ನು ಕಳುಹಿಸಿದ್ದಾನೆ. ಆ ಲಿಂಕ್ ಮೂಲಕ ಪೂಜಾ ಮೇ 17ರಂದು 100 ರೂ. ವರ್ಗಾವಣೆ ಮಾಡಿದಾಗ ಅದರ ಜೊತೆಗೆ 120 ರೂ. ಸೇರಿಸಿ ಇವರ ಖಾತೆಗೆ ಮರುಪಾವತಿಯಾಗಿದೆ. ಹೀಗಾಗಿ ಈ ಲಿಂಕ್‌ಗೆ ಹಣ ಪಾವತಿ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿದ ವಿದ್ಯಾರ್ಥಿನಿ, ಹಂತ ಹಂತವಾಗಿ 1,23,417 ರೂ.ಗಳನ್ನು ವರ್ಗಾಯಿಸಿದ್ದಾರೆ. ಆದರೆ ಅವರಿಗೆ ಯಾವುದೇ ರೀತಿಯ ಹಣ ವಾಪಸ್ಸಾಗಿಲ್ಲ. ಈ ಸಂಬಂಧ ಹಾಸನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಬಿಲ್ ಹೆಸರಲ್ಲಿ ವಂಚನೆ ಬಿಲ್ ಪಾವತಿ ಮಾಡದಿದ್ದರೆ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿ ಮೊಬೈಲ್‌ಗೆ ಮೆಸೇಜ್ ರವಾನಿಸಿ 1.40 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಿರುವ ಬಗ್ಗೆ ಹಾಸನ ನಗರದ ಅಗ್ರಹಾರ ಬೀದಿಯಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಪಿ.ಡಿ.ಹರೀಶ್ ವಂಚನೆಗೊಳಗಾದವರು.

ಜೂ.5ರಂದು ಇವರ ಮೊಬೈಲ್‌ಗೆ ಬಿಲ್ ಪಾವತಿಸದಿದ್ದರೆ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತೇವೆ ಎಂದು ಎರಡು ಮೊಬೈಲ್ ನಂಬರ್‌ಗಳಿಂದ ಸಂದೇಶ ಬಂದಿದ್ದು, ಹೆಚ್ಚಿನ ಮಾಹಿತಿಗಾಗಿ 7667063339 ನಂಬರ್ ಅನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ. ಹರೀಶ್ ಅವರು ಸದರಿ ನಂಬರ್ ಅನ್ನು ಸಂಪರ್ಕಿಸಿದಾಗ, ಮಾತನಾಡಿದ ವಂಚಕ ತಾನು ಕಳುಹಿಸುವ ಮೊಬೈಲ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡು ಅಲ್ಲಿ ಬರುವ ಸೂಚನೆಗಳನ್ನು ಪಾಲಿಸಿ ಗೂಗಲ್ ಪೇ ಮೂಲಕ ಹಣ ವರ್ಗಾವಣೆ ಮಾಡುವಂತೆ ತಿಳಿಸಿದ್ದಾರೆ. ಅದರಂತೆ ಎರಡು ಹಂತಗಳಲ್ಲಿ ಹರೀಶ್ ಅವರು ಒಟ್ಟು 1.40 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ನಂತರ ಚೆಸ್ಕಾಂ ಅಧಿಕಾರಿಗಳನ್ನು ವಿಚಾರಿಸಿದಾಗ ಇವರು ಮೋಸ ಹೋಗಿರುವುದು ಅರಿವಾಗಿದೆ. ಈ ಸಂಬಂದ ಹಾಸನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಮತಾಗೆ ಭದ್ರತೆಯ ಭೀತಿ

ಸಿಎಂ ನಿವಾಸಕ್ಕೆ ನುಗ್ಗಿ ರಾತ್ರಿಯಿಡೀ ಕಾಲ ಕಳೆದ ವ್ಯಕ್ತಿ

ಕೋಲ್ಕತ್ತಾ, ಜು.3– ದಕ್ಷಿಣ ಕೋಲ್ಕತ್ತಾದ ಕಾಲಿಘಾಟ್ ಪ್ರದೇಶದಲ್ಲಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಿವಾಸದಲ್ಲಿ ಭಾರೀ ಭದ್ರತಾ ಲೋಪ ಉಂಟಾಗಿದೆ. ತಡರಾತ್ರಿ ಅಪರಿಚಿತ ವ್ಯಕ್ತಿಯೊಬ್ಬ ಸಿಎಂ ನಿವಾಸಕ್ಕೆ ನುಗ್ಗಿ, ರಾತ್ರಿ ಇಡೀ ಅಲ್ಲೆ ಕಳೆದಿರುವ ಆತಂಕಕಾರಿ ಘಟನೆ ನಡೆದಿದೆ.



ಶನಿವಾರ ತಡರಾತ್ರಿ 1 ಗಂಟೆ ಸುಮಾರಿಗೆ ಅಪರಿಚಿತ ವ್ಯಕ್ತಿ ಮನೆಯ ಗೋಡೆ ಏರಿ ಒಳಗೆ ಹೋಗಿದ್ದಾನೆ ಅಲ್ಲದೇ, ಸಿಎಂ ನಿವಾಸದಲ್ಲೇ ರಾತ್ರಿಯಿಡೀ ನಿಶಬ್ಧವಾಗಿ ಕುಳಿತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಇಂದು ಬೆಳಗ್ಗೆ ಭದ್ರತಾ ಸಿಬ್ಬಂದಿ ಆತನನ್ನು ಗಮನಿಸಿದ್ದು, ಬಳಿಕ ಪೊಲೀಸರು ಆರೋಪಿಯನ್ನು ಬಂಧಿಸಿ, ವಿಚಾರಣೆಗೊಳಪಡಿಸಿದ್ದಾರೆ. ಸಿಎಂ ಮಮತಾ ನಿವಾಸ ಭಾರಿ ಭದ್ರತಾ ವಲಯದಲ್ಲಿದೆ. ಅವರಿಗೆ 'ಝಡ್ ಪ್ಲಸ್' ಭದ್ರತೆಯೂ ಇದೆ. ಆದರೂ, ಮಧ್ಯರಾತ್ರಿಯಲ್ಲಿ ವ್ಯಕ್ತಿ ಸಿಎಂ ಮನೆಗೆ ಹೇಗೆ ಪ್ರವೇಶಿಸಿದ್ದಾನೆ ಎಂಬುದೇ ಭದ್ರತಾ ಸಿಬ್ಬಂದಿಗೂ ದೊಡ್ಡ ಪ್ರಶ್ನೆಯಾಗಿದೆ.

ನಕ್ಕರೆ ಅದೇ ಸ್ವರ್ಗ

ಶಿಕ್ಷಕಿ : ಲೋ ಗುಂಡ, ಸ್ಕೂಲಿಗೆ ಯಾಕೆ ನಡೆದುಕೊಂಡು ಬರ್‍ತಾ ಇದ್ದೀಯ, ಸರ್ಕಾರ ಕೊಟ್ಟ ಸೈಕಲ್ ಏನಾಯ್ತು?

ಗುಂಡ : ನಾಲ್ಕು ಜನರಿಗೆ ಉಪಯೋಗವಾಗಲಿ ಅಂತ ಬಾಡಿಗೆಗೆ ಬಿಟ್ಟಿದ್ದೇನೆ, ಮೇಡಂ.

ಮೈಸೂರು ಮಿತ್ರ

ಸೋಮವಾರ, 4 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮನೆ ದೇವರಿಗೆ ಹೋಗುವುದಕ್ಕಿಂತಲೂ ಮನ ದೇವರಿಗೆ ಸಮರ್ಪಿಸಿ ಸಾಕು.

– ಶ್ರೀ ಗುರು ಪುಟ್ಟರಾಜ ಗವಾಯಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ.

ಅಡುಗೆ ಎಣ್ಣೆ ದರ ಕುಸಿತ

18 ರಿಂದ 20 ರೂ.ಗಳಷ್ಟು ಇಳಿಕೆ



ಮೈಸೂರು, ಜು.3(ಎಂಕೆ)– ದೇಶದಲ್ಲೆಡೆ 200ರ ಗಡಿ ದಾಟಿದ್ದ ಖಾದ್ಯ ತೈಲಗಳ ಬೆಲೆ ಇಳಿಕೆಯಾಗಿದ್ದು, ಬಹು ಬೇಡಿಕೆಯ ಅಡುಗೆ ಎಣ್ಣೆ ಬ್ರಾಂಡ್‌ಗಳ ಬೆಲೆಯಲ್ಲಿ 18 ರಿಂದ 20 ರೂ., ನಷ್ಟು ಕಡಿಮೆಯಾಗಿದೆ.

ವಿದೇಶಿ ಮಾರುಕಟ್ಟೆಗಳಲ್ಲಿ ಖಾದ್ಯ ತೈಲಗಳ ದರ ಕುಸಿತದ ಹಿನ್ನೆಲೆ ದೇಶದಲ್ಲಿಯೂ ಅಡುಗೆ ಎಣ್ಣೆ ಮತ್ತು ಎಣ್ಣೆಕಾಳುಗಳ ಬೆಲೆ ಇಳಿಕೆಯಾಗಿದ್ದು, ಇನ್ನಷ್ಟು ಇಳಿಕೆಯಾಗುವ ಸಾಧ್ಯತೆಯಿದೆ. ಸೋಯಾಬೀನ್ ತೈಲ, ಪಾಮ್ ಆಯಿಲ್ ಬೆಲೆಗಳಲ್ಲೂ ಕುಸಿತ ಕಂಡಿದ್ದು, ಸಾಸಿವೆ, ಕಡಲೆಕಾಯಿ ಎಣ್ಣೆ, ಎಣ್ಣೆಕಾಳುಗಳು, ಸೋಯಾಬೀನ್ ಎಣ್ಣೆಕಾಳುಗಳು ಮತ್ತು ಹತ್ತಿಬೀಜದ ಎಣ್ಣೆಯು ಸ್ವದೇಶಿ ಎಣ್ಣೆಗಳ ಬೇಡಿಕೆಯ ನಡುವೆ ಸುಧಾರಣೆ ಕಾಣುತ್ತಿದೆ.

ಸೂರ್ಯಕಾಂತಿ ಎಣ್ಣೆಯ ಬ್ರಾಂಡ್‌ಗಳಾದ ಸನ್‌ಪ್ಯೂರ್ ಎಣ್ಣೆ 1 ಲೀಟರ್‌ಗೆ 190–195 ರೂ., ಇದ್ದದ್ದು, ಈಗ 170–175 ರೂ.ಆಗಿದೆ. ಇನ್ನೂ ಗೋಲ್ಡ್ ವಿನ್ನರ್, ಇಮಾಮಿ ಸನ್‌ಫ್ಲವರ್ ಆಯಿಲ್, ಫಾರ್ಚೂನ್ ಮತ್ತು ಫ್ರೀಡಂ ಸನ್ ಫ್ಲವರ್ ಆಯಿಲ್‌ಗಳ ಬೆಲೆಯಲ್ಲೂ ಇಳಿಕೆಯಾಗಿದ್ದು, ಮಳೆಯ ಕಾರಣದಿಂದ ಕೆಲ ಅಂಗಡಿ ಮಳಿಗೆಗಳಲ್ಲಿ ಸ್ಟಾಕ್ ಬರುತ್ತಿಲ್ಲವೆಂದು ಹೇಳಲಾಗುತ್ತಿದೆ.

ಪಾಮ್ ಆಯಿಲ್ ಮತ್ತು ದೀಪದ ಎಣ್ಣೆ ಸುಮಾರು 160 ರೂ.ನಿಂದ 130–140 ರೂ.ಗೆ ಇಳಿಕೆಯಾಗಿದ್ದರೆ, ಪ್ಯಾರಾಚೂಟ್ ಕೊಬ್ಬರಿ ಎಣ್ಣೆಯ ಬೆಲೆಯೂ ಕಡಿಮೆಯಾಗಿದೆ ಎನ್ನಲಾಗಿದೆ. ಇನ್ನುಳಿದಂತೆ ಹರಳೆಣ್ಣೆ ಮತ್ತು ಕಡಲೆಕಾಯಿ ಎಣ್ಣೆ 190 ರೂ. ನಿಂದ 170–180 ರೂ.ಗೆ ಕಡಿಮೆಯಾಗಿರುವುದು ಗ್ರಾಹಕರಿಗೆ ಕೊಂಚ ನಿರಾಳ ತಂದಿದೆ.

ತುಪ್ಪ: ಸೂರ್ಯಕಾಂತಿ ಎಣ್ಣೆ ಜೊತೆಗೆ ತುಪ್ಪದ ಬೆಲೆಯೂ ಇಳಿಕೆಯಾಗಿದ್ದು, ವನಸ್ಪತಿ ತುಪ್ಪ ಕೆಲ ದಿನಗಳ ಹಿಂದೆ ಕೆ.ಜಿಗೆ 180–190 ರೂ. ಇದ್ದದ್ದು, 160 ರೂ.ಆಗಿದ್ದು, ಬರೋಬ್ಬರಿ ಸುಮಾರು 30 ರೂ. ಇಳಿಕೆಯಾಗಿದೆ. ಹಾಗೆಯೇ ಜಿಆರ್‌ಬಿ ತುಪ್ಪದ ಬೆಲೆಯಲ್ಲಿ ಕೊಂಚ ಇಳಿಕೆಯಾಗಿದೆ.

ತಲೆಬಿಸಿ ಕಡಿಮೆಯಾಗುತ್ತಿದೆ: ಗಗನಕ್ಕೇರಿದ್ದ ಅಡುಗೆ ಎಣ್ಣೆ ಬೆಲೆ ಸ್ವಲ್ಪ ಕಡಿಮೆಯಾಗಿರುವುದು ಗ್ರಾಹಕರಿಗೆ ತಲೆಬಿಸಿ ಕಡಿಮೆ ಮಾಡಿದೆ. ವರ್ಷದಿಂದಲೂ ಗ್ರಾಹಕರ ಜೊತೆಗೆ ಎಣ್ಣೆ ಬೆಲೆ ಹೇಳಿ ಗುದ್ದಾಡುವುದೇ ಕೆಲಸವಾಗಿತ್ತು. ಎಂದು ದೇವರಾಜ ಮಾರುಕಟ್ಟೆ ಶ್ರೀ ವೆಂಕಟೇಶ್ವರ ಟ್ರೇಡರ್ಸ್ (ಎಣ್ಣೆ ಮಾರಾಟ ಅಂಗಡಿ)ನ ಮಾಲೀಕರಾದ ಶಾಲಿನಿ, ಸುಹಾಸ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮೇಲ್ಮನೆಯ ಮೂವರು ಸದಸ್ಯರು ಇಂದು ನಿವೃತ್ತಿ





ನಿರಾಣಿ ಹಣಮಂತ ಅರುಣ್ ಶಹಾಪುರ ಶ್ರೀಕಂಠೇಗೌಡ

ಬೆಂಗಳೂರು, ಜು.3– ವಿಧಾನ ಪರಿಷತ್‌ನ ಮೂವರು ಸದಸ್ಯರು ನಾಳೆ (ಸೋಮವಾರ) ನಿವೃತ್ತಿಯಾಗಲಿದ್ದಾರೆ. ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾಯಿತರಾಗಿದ್ದ ನಿರಾಣಿ ಹಣಮಂತ ರುದ್ರಪ್ಪ, ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾಗಿದ್ದ ಅರುಣ್ ಶಹಾಪುರ, ಪದವೀಧರ ಕ್ಷೇತ್ರದಿಂದ ಚುನಾಯಿತರಾಗಿದ್ದ ಕೆಟಿ.ಶ್ರೀಕಂಠೇಗೌಡ ಅವರು ನಾಳೆ ವಿಧಾನ ಪರಿಷತ್ ಸದಸ್ಯತ್ವದಿಂದ ನಿವೃತ್ತಿ ಹೊಂದುತ್ತಿದ್ದಾರೆ.

ವಿಧಾನ ಪರಿಷತ್ ಸಭಾಪತಿಯಾಗಿದ್ದ ಬಸವರಾಜ ಹೊರಟ್ಟಿ ತಮ್ಮ ಸದಸ್ಯ ಸ್ಥಾನಕ್ಕೆ ಈಗಾಗಲೇ ರಾಜೀನಾಮೆ ನೀಡಿರುವುದರಿಂದ ಆ ಸ್ಥಾನ ತೆರವಾಗಿದೆ. ಈ ನಾಲ್ಕೂ ಸ್ಥಾನಗಳಿಗೆ ಕೇಂದ್ರ ಚುನಾವಣಾ ಆಯೋಗ ಇತ್ತೀಚೆಗೆ ಚುನಾವಣೆ ನಡೆಸಿದ್ದು, ಬಿಜೆಪಿಯಿಂದ ಬಸವರಾಜ ಹೊರಟ್ಟಿ, ನಿರಾಣಿ ಹಣಮಂತ ರುದ್ರಪ್ಪ ಅವರು ಚುನಾಯಿತರಾಗಿದ್ದಾರೆ.

ಕಾಂಗ್ರೆಸ್‌ನಿಂದ ಪ್ರಕಾಶ್ ಹುಕ್ಕೇರಿ ಹಾಗೂ ಮಧು ಜಿ.ಮಾದೇಗೌಡ ಚುನಾಯಿತರಾಗಿದ್ದಾರೆ. ನಾಲ್ಕೂ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಶೂನ್ಯ ಸಂಪಾದನೆ ಮಾಡಿ ಮುಖಭಂಗ ಅನುಭವಿಸಿತ್ತು.

ಇದರಿಂದ ವಿಧಾನ ಪರಿಷತ್‌ನಲ್ಲಿ ಪಕ್ಷಗಳ ಬಲಾಬಲದಲ್ಲಿ ವ್ಯತ್ಯಾಸವಾಗಲಿದೆ. ಆಡಳಿತಾರೂಢ ಬಿಜೆಪಿ 37, ಕಾಂಗ್ರೆಸ್ 26 ಹಾಗೂ ಜೆಡಿಎಸ್ 10 ಸ್ಥಾನಗಳನ್ನು ಹೊಂದಿದ್ದು, ಸದಸ್ಯರ ನಿವೃತ್ತಿ ನಂತರ ಜೆಡಿಎಸ್ 2 ಸ್ಥಾನಗಳನ್ನು ಕಳೆದುಕೊಂಡು 7 ಸ್ಥಾನಕ್ಕೆ ಕುಸಿಯಲಿದ್ದು, ಎಂದಿನಂತೆ ಮೂರನೆ ಸ್ಥಾನದಲ್ಲಿದೆ. ಬಿಜೆಪಿ ಮೇಲ್ಮನೆಯಲ್ಲಿ ಬಹುಮತ ಪಡೆಯುವುದರಿಂದ ಖಾಲಿ ಇರುವ ವಿಧಾನ ಪರಿಷತ್ ಸಭಾಪತಿ, ಉಪಸಭಾಪತಿ ಸ್ಥಾನಗಳನ್ನು ಬಿಜೆಪಿ ಸುಲಭವಾಗಿ ಪಡೆಯಲಿದೆ. ಎರಡನೆ ಅತಿದೊಡ್ಡ ಪಕ್ಷವಾಗಿರುವ ಕಾಂಗ್ರೆಸ್ ಪ್ರತಿಪಕ್ಷ ಸ್ಥಾನದಲ್ಲಿ ಮುಂದುವರೆಯಲಿದೆ.

ನಿಮ್ಮ ಪತ್ರಗಳು

ಗೋಮಾತೆಯ ಗೋಳು ಕೇಳುವವರ್‍ಯಾರೂ...!

ಮಾನ್ಯರೆ,

ಅನೇಕ ದಿನಗಳಿಂದ ಮೂಕಜೀವಿಗಳ ಮೇಲೆ ನಡೆಯುತ್ತಿರುವ ಕ್ರೂರ ಮತ್ತು ದೌರ್ಜನ್ಯಗಳ ಕುರಿತು ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇವೆ. ನಮ್ಮ ಎರಡನೇ ತಾಯಿಯಾದ ಗೋಮಾತೆಯನ್ನಂತೂ ಕೇಳುವವರೇ ಇಲ್ಲ. ವರ್ಷಕ್ಕೊಮ್ಮೆ ಗೋಮಾತೆಯನ್ನು ಪೂಜಿಸಿದರೆ ಸಾಕೆ? ಸಕಲರೂ ಗೋಮಾತೆಯನ್ನು ಪ್ರೀತಿಯಿಂದ ಕಾಣಬೇಕು. ಅವುಗಳು ಬಯಸುವುದು ಪ್ರೀತಿಯ ವರ್ತನೆ, ಒಳ್ಳೆಯ ಆಹಾರ. ಬೀಡಾಡಿ ಹಸುಗಳಂತೂ ಕಸದ ತೊಟ್ಟಿಯ ಬಳಿಯೇ ಕಸ, ಕಡ್ಡಿ, ಪ್ಲಾಸ್ಟಿಕ್, ಕೊಳೆತ ತರಕಾರಿ ಇತ್ಯಾದಿ ತಿನ್ನುವ ಸಚಿತ್ರ ಲೇಖನಗಳೂ 'ಮೈಸೂರು ಮಿತ್ರ'ದಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇವೆ. ಹಸು ಸಾಕುವವರು ದಯವಿಟ್ಟು ಇದಕ್ಕೆ ಆಸ್ಪದ ಕೊಡಬೇಡಿ. ಹಸುವಿನ ಹೊಟ್ಟೆಗಳೂ ಕಸದ ಬುಟ್ಟಿಗಳಾಗಿ, ಯಾತನೆ ಪಡುವಂತಾಗುತ್ತವೆ. ಇದು ನ್ಯಾಯವೇ.



ಹಸು–ಕರುಗಳು, ಮೂಕಜೀವಿಗಳು, ಪಕ್ಷಿ ಸಂಕುಲಗಳು ಪಡುವ ಮೂಕವೇದನೆ ಯಾರಿಗೂ ಅರಿವಾಗದೆ? ಇತ್ತೀಚೆಗೆ ಪಶುಸಂಗೋಪನಾ ಇಲಾಖೆಯಿಂದ ಪ್ರಾಣಿಗಳನ್ನು ನೋಯಿಸದೆ ಸಾಯಿಸಬೇಕು (ಮಾಂಸಕ್ಕಾಗಿ) ಎಂಬ ಆದೇಶ ಬಗ್ಗೆ ಮಾಹಿತಿಗಳು ಬಂದಿವೆ. ಆದರೆ ಅದನ್ನು ಪಾಲಿಸುವವರು ಯಾರು? ಗಮನಿಸುವವರು ಯಾರು? ಅಲ್ಲದೆ ಅತಿಯಾದ ದಯನೀಯ, ಕಾರುಣ್ಯ ವಿಷಯವೇನೆಂದರೆ ಗಂಡು ಕರುವನ್ನು ಹುಟ್ಟಿದ ತಕ್ಷಣ ತಾಯಿಯಿಂದ ಬೇರ್ಪಡಿಸಿ ಲಾರಿಗಳಲ್ಲಿ ತೆಗೆದುಕೊಂಡು ಹೋಗಿ ಎಲ್ಲಿಯೋ ಎಸೆದು ಬರುವುದು. ಗಂಡು ಕರುಗಳು ಎಳೆ ವಯಸ್ಸಿನಲ್ಲಿ ಕಸಾಯಿಖಾನೆ ಪಾಲಾಗುವುದು ಎಷ್ಟು ಸರಿ. ತಾಯಿ–ಕರು ಸಾಂಗ್ಯ ಬೇಡವೇ? ಅವುಗಳ ಬೇಸರದ ನಿಟ್ಟುಸಿರು ಭೂಮಂಡಲದ ನರಸಂತತಿಗೆ ತಾಕದೇ?

ರುಚಿಯಾದ ಹಾಲು–ಮೊಸರು, ಪನ್ನೀರು, ಬೆಣ್ಣೆ ತುಪ್ಪ ಇತ್ಯಾದಿಗಳಿಗೆ ಮಾತ್ರ ಹಸು ಬೇಕೆ? ಮುಖ್ಯಮಂತ್ರಿಗಳಲ್ಲಿ ದಯೆಯ ವಿನಂತಿ. ದಯವಿಟ್ಟು ಅಲ್ಲಲ್ಲಿ ಒಳ್ಳೆಯ ಹುಲ್ಲುಗಾವಲುಗಳನ್ನು ನಿರ್ಮಿಸಿ, ಅಲ್ಲಿ ದನ–ಕರುಗಳು ಮೇಯಲು ಅವಕಾಶ ಮಾಡಿಕೊಡಿ. ಮುಳ್ಳುಕಂಟಿಗಳಲ್ಲಿ ಬೆಳೆದ ಹುಲ್ಲೇ ಹಸುಕರುಗಳಿಗೆ ಸೀಮಿತವೇ? ದಯವಿಟ್ಟು ಪರಿಶೀಲಿಸಿ.

– ನೊಂದ ಮನಸ್ಸಿನಿಂದ, ಜಯಂತಿ ಎನ್. ಶ್ಯಾನ್‌ಭೋಗ್, ಕಲ್ಯಾಣಗಿರಿ, ಮೈಸೂರು.

ಶಾಲೆಯ ಸಭಾಂಗಣದ ಕಟ್ಟಡ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗಾಂಧಿನಗರದ 2ನೇ ಮುಖ್ಯರಸ್ತೆಯಲ್ಲಿ ಸುಮಾರು 50 ವರ್ಷಗಳಷ್ಟು ಹಳೆಯದಾದ ಆದಿಜಾಂಬವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು, ಇಲ್ಲಿ ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ಇದೇ ಶಾಲೆಯ ಆವರಣದ ಕಟ್ಟಡದಲ್ಲಿ ಎರಡು ಅಂಗನವಾಡಿ ಕೇಂದ್ರಗಳೂ ಕಾರ್ಯನಿರ್ವಹಿಸುತ್ತಿವೆ. ಈ ಶಾಲೆಯಲ್ಲಿ ಕಲ್ನಾರ್ ಶೀಟ್ ಮೇಲ್ಛಾವಣಿಯುಳ್ಳ ಬೃಹತ್ ಸಭಾಂಗಣದ ಕಟ್ಟಡವಿದ್ದು, ಹಲವು ವರ್ಷಗಳಿಂದ ಶಿಥಿಲಗೊಂಡು ಬಾಗಿಲು, ಕಿಟಕಿಗಳು ಮುರಿದು ಬಿದ್ದಿದೆ. ಛಾವಣಿಯ ಮೇಲೆ ಗಿಡ ಗಂಟಿಗಳು ಬೆಳೆದು, ಕ್ರಿಮಿಕೀಟಗಳು, ವಿಷ ಜಂತುಗಳು ವಾಸಸ್ಥಾನವಾಗಿ ಪಾಳು ಬಿದ್ದಿದೆ. ಈ ಹಿಂದೆ ಕಟ್ಟಡದಲ್ಲಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿ ಗಳು, ಪೋಷಕರು ಸಭೆ–ಸಮಾರಂಭಗಳು, ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು. ಆದರೆ ಇಂದು ಸಭಾಂಗಣದ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆ ಯಲ್ಲಿರುವುದರಿಂದ ಮಕ್ಕಳ ಶೈಕ್ಷಣಿಕ ಕಾರ್ಯ ಚಟುವಟಿಕೆ ಸ್ಥಗಿತಗೊಂಡಿದೆ. ಈ ಕೂಡಲೇ ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಸ್ಥಳೀಯ ವಿಧಾನಸಭಾ ಕ್ಷೇತ್ರದ ಶಾಸಕರು ತಮ್ಮ ಅನುದಾನದಲ್ಲಿ ಶಾಲೆಯ ಸಭಾಂಗಣದ ಕಟ್ಟಡ ದುರಸ್ತಿ ಗೊಳಿಸಿ ಮಕ್ಕಳ ಪಠ್ಯೇತರ ಚಟುವಟಿಕೆಗಳಿಗೆ ಉಪಯೋಗವಾಗುವಂತಾಗಲಿ ಎಂಬುದೇ ನಮ್ಮ ಮನವಿ.

– ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.

ಶ್ಮಶಾನ ಭೋಜನ!

ಮಾನ್ಯರೆ,

ಬದುಕು ವಿಚಿತ್ರ (ಸಾವು ಕೂಡ!). ನನ್ನ ಬದುಕಿನಲ್ಲಿ, ಈ ಅಪರ ವಯಸ್ಸಿನಲ್ಲಿ ಒಂದು ವಿಚಿತ್ರ ವಿದ್ಯಮಾನ ಜರುಗಿತು. ನಾನು ಇದೇ ಜೂ. ೨೨ರಂದು ಶ್ಮಶಾನಕ್ಕೆ ಹೋಗಿ, (ಶ್ಮಶಾನ ವೈರಾಗ್ಯಕ್ಕೆ 'ತುತ್ತಾ'ಗದೆ) ಬರಬೇಕಾಯಿತು; ಮಾತ್ರವಲ್ಲ ಚೊಕ್ಕ ಭೋಜನವನ್ನು ಸವಿದುದಾಯಿತು! ಸಂದರ್ಭ: ಮಿತ್ರ ಕೆ.ಎಸ್. ಶಿವರಾಂ ಅವರ ಹುಟ್ಟುಹಬ್ಬದ ಆಚರಣೆ.

"ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು" ಎಂಬುದು ಡಿ.ವಿ.ಜಿ. ಉಕ್ತಿ. ವಿಪರ್ಯಾಸವೆಂದರೆ ಮದುವೆನೆ, ಅರ್ಥಾತ್ ದಾಂಪತ್ಯದಲ್ಲೇ ಮಸಣದ ಅಂಶಗಳಿರುವುದು ಸಾಧ್ಯ!

ವಸ್ತುತಃ ಶ್ಮಶಾನ ಶ್ಮಶಾನವಲ್ಲ, ರುದ್ರಭೂಮಿ; ಸಾವು ಸಾವಲ್ಲ, ಶಿವೈಕ್ಯ. ಕುವೆಂಪು 'ಕರ್ನಾಟಕ ಹೃದಯಶಿವ'ನಿಗೆ ಮೊರೆಯಿಟ್ಟವರಲ್ಲವೆ? ಆ 'ಹೃದಯಶಿವ' ಶ್ಮಶಾನದಲ್ಲೂ ಇರಬಹುದು. ಆದ್ದರಿಂದ, ಕನ್ನಡಿಗರು ಶ್ಮಶಾನಕ್ಕೆ ಅಂಜಬೇಕಿಲ್ಲ!

ಮುಖ್ಯವಾದ ಮಾತೆಂದರೆ, ಶ್ಮಶಾನ ಸಮಾನತಾ ವೇದಿಕೆ ಅಥವಾ ಯಾಮಿಕೆ. ಸಾವು ಸಮತಾವಾದಿ. "Death, the levellor ಎಂಬುದು ಆಂಗ್ಲ ಕವಿಯೊಬ್ಬನ ಉಕ್ತಿ.

(ಒಂದು ಭಾಷಾ ವಿಶೇಷ: ಬಹುಮಂದಿ ಬಳಸುವ 'ಸ್ಮಶಾನ' ಸರಿಯಾದ ರೂಪವಲ್ಲ. 'ಶ್ಮಶಾನ' ಸರಿ. ಅದು ಸಂಸ್ಕೃತದ 'ಆತ್ಮ ಶಯನ'ದಿಂದ ಬಂದದ್ದು. ಆತ್ಮ ಎಂದರೆ ಕಲ್ಲು)

– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು, ಜು.3– ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ವತಿಯಿಂದ ವಿಶ್ವ ಯುವ ಕೌಶಲ್ಯ ದಿನಾಚರಣೆಯ ಪ್ರಯುಕ್ತ ಕೌಶಲ್ಯದ ಅವಶ್ಯಕತೆ ಹಾಗೂ ಪ್ರಾಮುಖ್ಯತೆಯ ಕುರಿತಂತೆ ಜಾಗೃತಿ ಮೂಡಿಸುವ, ಪ್ರೋತ್ಸಾಹ ನೀಡುವ ಮತ್ತು ವ್ಯಾಪಕ ಪ್ರಚಾರ ನಡೆಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಕೌಶಲ್ಯ ಸ್ಫೂರ್ತಿ ಕಾರ್ಯಕ್ರಮದಡಿ ಜುಲೈ 15 ರಂದು ಆಯೋಜಿಸಲಾಗಿದೆ.

ಅರ್ಹತೆ ಆಧಾರದ ಮೇಲೆ ಯಾವುದಾದರೂ ಒಂದು ವಿಷಯದ ಕುರಿತು 1000 ದಿಂದ 1200 ಪದಗಳ ಮಿತಿಯೊಳಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪ್ರಬಂಧ ಬರೆಯಲು ಅವಕಾಶವಿರುತ್ತದೆ. ಪದವಿಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೈಗಾರಿಕಾ ಶೈಕ್ಷಣಿಕ ಒಗ್ಗೂಡಿಕೆಯಿಂದ ಕೌಶಲ್ಯದ ಅಂತರವನ್ನು ಕಡಿಮೆ ಮಾಡುವುದು, ಶಕ್ತಿಯುತ ಹಾಗೂ ಸುಸ್ಥಿರ ಬೆಳವಣಿಗೆಗಾಗಿ ಕೌಶಲ್ಯಯುತ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಮಾರ್ಗಗಳು, ಕೌಶಲ್ಯ ಮತ್ತು ಸಾಮರ್ಥ್ಯಗಳ ಮೇಲೆ ಕೇಂದ್ರೀಕೃತವಾದ ಉನ್ನತ ಶಿಕ್ಷಣದ ಬಗ್ಗೆ ಮರುಚಿಂತನೆ.

೨ರಿಂದ 12ನೇ ತರಗತಿ ಮತ್ತು ಐ.ಟಿ.ಐ ವಿದ್ಯಾರ್ಥಿಗಳಿಗೆ ಯುವಕರಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ, ಶಿಕ್ಷಣದಲ್ಲಿ ಕೌಶಲ್ಯಾಭಿವೃದ್ಧಿಯ ಪ್ರಾಮುಖ್ಯತೆ. ಈ ವಿಷಯಗಳ ಕುರಿತು ಪ್ರಬಂಧ ಬರೆಯಲು ಅವಕಾಶವಿರುತ್ತದೆ. ಪ್ರಥಮ ಬಹುಮಾನ ರೂ 15000, ದ್ವಿತೀಯ ಬಹುಮಾನ ರೂ 10000, ಹಾಗೂ ತೃತೀಯ ಬಹುಮಾನ ರೂ 5000 ಗಳನ್ನು ವಿತರಣೆ ಮಾಡಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ನೊಂದಾವಣೆಗಾಗಿ, ಪ್ರಬಂಧ ಸಲ್ಲಿಕೆಗಾಗಿ ವೆಬ್ ಸೈಟ್ ವಿಳಾಸ https://www.koushalakar.com/app/skill-essay-compitation ನ್ನು ಸಂಪರ್ಕಿಸಬಹುದಾಗಿದೆ. ಪ್ರಬಂಧ ಸಲ್ಲಿಕೆಗೆ 2022ರ ಜುಲೈ 10 ಕೊನೆಯ ದಿನಾಂಕವಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಟಿಯು ಡೀನ್ ಫ್ಯಾಕಲ್ಟಿಯಾಗಿ ನೇಮಕಗೊಂಡ ಪ್ರೊ.ಬಿ.ಸದಾಶಿವೇಗೌಡರಿಗೆ ಸನ್ಮಾನ



ಮೈಸೂರು,ಜು.3(ಎಸ್‌ಬಿಡಿ)– ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ(ವಿಟಿಯು)ದ ಡೀನ್ ಫ್ಯಾಕಲ್ಟಿಯಾಗಿ ಆಗಿ ನಾಮನಿರ್ದೇಶನಗೊಂಡಿರುವ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ. ಸದಾಶಿವೇಗೌಡರನ್ನು ವಿಜಯನಗರ 2ನೇ ಹಂತ ಕ್ಷೇಮಾಭಿವೃದ್ಧಿ ಸಮಿತಿ ಸದಸ್ಯರು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಡಾ.ಸದಾಶಿವೇಗೌಡರು, ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಿಂದ ಬೆಳಗಾವಿ ವಿಟಿಯುವರೆಗೆ ನನ್ನ ಕಾರ್ಯವ್ಯಾಪ್ತಿ ವಿಸ್ತರಿಸಿದೆ. ವಿದ್ಯಾವರ್ಧಕ ಸಂಘ ನನಗೆ ಎಲ್ಲಾ ರೀತಿಯ ಸಹಕಾರ ಹಾಗೂ ಪ್ರೋತ್ಸಾಹ ನೀಡಿದೆ. ಅದರ ಫಲವಾಗಿ ಈ ಜವಾಬ್ದಾರಿ ಸಿಕ್ಕಿದ್ದು, ಸಂಘದ ಎಲ್ಲಾ ಪದಾಧಿಕಾರಿಗಳು, ಸಹೋದ್ಯೋಗಿಗಳಿಗೆ ಧನ್ಯವಾದ ತಿಳಿಸುತ್ತೇನೆ. ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿನ ನನ್ನ ಕಾರ್ಯವನ್ನು ಪರಿಗಣಿಸಿ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಚಾಮರಾಜ ಕ್ಷೇತ್ರದ ಉಪಾಧ್ಯಕ್ಷ ಕುಮಾರ್ ಗೌಡ, ಸಿಂಡಿಕೇಟ್ ಮಾಜಿ ಸದಸ್ಯ ಪ್ರೊ. ಗೋಪಾಲ್, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಧಿಕಾರಿ ಹೊನ್ನೇಗೌಡ, ಸ್ವಾಮಿ, ಪ್ರಭಾಕರ್, ಸುಬ್ಬಣ್ಣ ರಾಮೇಗೌಡ, ಜಗದೀಶ್, ಮೋಹನ್ ಮತ್ತಿತರರು ಉಪಸ್ಥಿತರಿದ್ದರು.



ಮಕ್ಕಳ ಗ್ರಾಮಸಭೆ ಮತ್ತು ಮಕ್ಕಳ ಸ್ನೇಹಿ ಗ್ರಾಮ ಪಂಚಾಯ್ತಿ ಅಭಿಯಾನದ ಅಂಗವಾಗಿ ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ತಾಲೂಕು ಕಾನೂನು ಸೇವಾ ಸಮಿತಿಯಿಂದ ಕಾನೂನು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನ್ಯಾಯಾಧೀಶರಾದ ರೂಪ ಅವರು ಕಾರ್ಯಕ್ರಮ ಉದ್ಘಾಟಿಸಿದರು. ನ್ಯಾಯಾಧೀಶರಾದ ವೈ.ಎಚ್.ದೇವರಾಜ, ಮಹಾದೇವಪ್ಪ, ಕಾರ್ಯನಿರ್ವಾಹಕ ಅಧಿಕಾರಿ ಬಿಂದುಶ್ರೀ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್.ಅನಂತರಾಜು, ಪಾಲಹಳ್ಳಿ ಗ್ರಾಪಂ ಅಧ್ಯಕ್ಷೆ ಕಲಾ, ಉಪಾಧ್ಯಕ್ಷ ನವೀನ್, ಸದಸ್ಯರು, ಪಿಡಿಓ ಆರ್.ರವಿ, ಸಿಬ್ಬಂದಿ ಕುಮಾರ್, ಅಂಗನವಾಡಿ ಮೇಲ್ವಿಚಾರಕಿ ಲಕ್ಷ್ಮೀ ದೇಶಪಾಂಡೆ, ಸಿಆರ್‌ಪಿ ನಾಗರಾಜು, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಶುಂಠಿ ಬೆಳೆಗೆ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ

ಕೇರಳದ ಶುಂಠಿ ಬೆಳೆಗಾರರ ಸಂಘದ ಅಧ್ಯಕ್ಷರಿಗೆ ಸಿ. ಚಂದನ್ ಗೌಡ ಮನವಿ



ಮೈಸೂರು, ಜು.3– ಕೇರಳ ರಾಜ್ಯದ ಶುಂಠಿ ಬೆಳೆಗಾರರ ಅಧ್ಯಕ್ಷ ಫಿಲಿಪ್ ಜಾರ್ಜ್ ಅವರನ್ನು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ ಭೇಟಿ ಮಾಡಿ ಸಾವಯವ ಕೃಷಿಗೆ ಸಂಬಂಧಿಸಿದಂತೆ ಚರ್ಚಿಸಿದರು.

ರಾಸಾಯನಿಕ ಮುಕ್ತ ಮಾಡುವುದರ ಜೊತೆಗೆ ಸಾವಯವದ ಸಾಂಪ್ರದಾಯಿಕ ಕೃಷಿಗೆ ಹೆಚ್ಚಿನ ಒತ್ತು ಕೊಟ್ಟು, ಶುಂಠಿ ಬೆಳೆಯನ್ನು ಬೆಳೆಯಬೇಕು ಎಂಬ ಪ್ರಸ್ತಾವನೆ ಹಾಗೂ ಮನವಿಗೆ ಸ್ಪಂದಿಸಿದ ಫಿಲಿಪ್ ಜಾರ್ಜ್, ಕೇರಳದಲ್ಲೂ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ, ಅಲ್ಲಿನ ರೈತರಲ್ಲೂ ಈ ಕುರಿತು ಜಾಗೃತಿ ಮೂಡಿಸುವುದಾಗಿ ಭರವಸೆ ನೀಡಿದರು.

ಮುಂದುವರೆದು, ಕೇರಳದಿಂದ ಬಂದು ಕರ್ನಾಟಕದಲ್ಲಿ ಬೆಳೆಯುತ್ತಿರುವ ಶುಂಠಿ ಬೆಳೆಗಾರರಿಗೆ ಮುಂದಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ನಿಷೇಧ ಮಾಡಿ, ಸಾವಯವ ಕೃಷಿಯಲ್ಲಿ ಶುಂಠಿಯನ್ನು ಬೆಳೆಯಬೇಕು. ಕೇರಳ ರಾಜ್ಯದ ಮಾದರಿಯಲ್ಲೇ, ಕರ್ನಾಟಕ ರಾಜ್ಯದಲ್ಲಿ ಕೂಡ ಮಣ್ಣಿನ ಫಲವತ್ತತೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಚಂದನ್ ಗೌಡರು ಇದೇ ವೇಳೆ ಮನವಿ ಮಾಡಿದರಲ್ಲದೇ, ಮುಂದಿನ ದಿನಗಳಲ್ಲಿ ಕೇರಳ ರಾಜ್ಯದ ಸಾವಯವ ಕೃಷಿಯ ರೈತರಿಗೆ ರೈತ ಕಲ್ಯಾಣ ಸಂಘದಿಂದ ಸಂಪೂರ್ಣ ಸಹಕಾರ ನೀಡುವುದಾಗಿಯೂ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶುಂಠಿ ಬೆಳೆಗಾರರ ಸಂಘದ ಅಧ್ಯಕ್ಷ ಫಿಲಿಪ್ ಜಾರ್ಜ್ ಅವರು, ರೈತ ಕಲ್ಯಾಣ ಸಂಘದ ಉದ್ದೇಶಗಳನ್ನು ಸ್ವಾಗತಿಸಿದರಲ್ಲದೇ,ಮುಂದಿನ ದಿನಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಒತ್ತುಕೊಟ್ಟು ರಾಸಾಯನಿಕ ಕೃಷಿಯನ್ನು ಸಂಪೂರ್ಣ ತ್ಯಜಿಸುವ ಪ್ರಯತ್ನಕ್ಕೆ ಮುಂದಾಗುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಹೇಮಂತ್‌ಗೌಡ, ಹರೀಶ್‌ಗೌಡ, ಸ್ವಾಮಿಗೌಡ, ಗೋವರ್ಧನ್, ಮೂರ್ತಿ, ವೇಣು, ನವೀನಗೌಡ, ರಘು, ಅಭಿ ಮತ್ತು ಸಂಜಯ್ ಉಪಸ್ಥಿತರಿದ್ದರು.

ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಸರ್ಕಾರ ಸೂಚನೆ

ಬೆಂಗಳೂರು, ಜು.3– ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬಿರುವ ಹಿನ್ನೆಲೆಯಲ್ಲಿ 'ಅಮೃತ ಮಹೋತ್ಸವ'ವನ್ನು ವೈವಿಧ್ಯಮಯವಾಗಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ರಾಜ್ಯದಲ್ಲೂ ಅನುಷ್ಠಾನಗೊಳಿಸಲು ಕ್ರಮವಹಿಸಬೇಕು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ.

ಈ ಸಂಭ್ರಮದ ಭಾಗವಾಗಿ 'ಹರ್ ಘರ್ ತಿರಂಗಾ' ಎಂಬ ಘೋಷವಾಕ್ಯ ದೊಂದಿಗೆ ಆ.11ರಿಂದ 17ರವರೆಗೆ ದೇಶದ ಪ್ರತಿ ಮನೆ–ಮನೆಯಲ್ಲೂ ರಾಷ್ಟ್ರಧ್ವಜವನ್ನು ಹಾರಿಸುವ ಅಭಿಯಾನ ಹಮ್ಮಿಕೊಂಡಿದೆ. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಉಲ್ಲೇಖಿತ ಪತ್ರದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ 'ಹರ್ ಘರ್ ತಿರಂಗಾ' ಅಭಿಯಾನವನ್ನು, ರಾಜ್ಯದಲ್ಲೂ ಅನುಷ್ಠಾನಗೊಳಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಸದರಿ ಅಭಿಯಾನದಲ್ಲಿ ರಾಜ್ಯ ಸರ್ಕಾರದ ಸರ್ಕಾರಿ/ ಅರೇ ಸರ್ಕಾರಿ /ನಿಗಮ ಮಂಡಳಿಗಳು/ ಸಾರ್ವಜನಿಕ ಉದ್ಯಮಗಳು/ಸ್ವ ಸಹಾಯ ಗುಂಪುಗಳು/ ನಾಗರೀಕ ಸಂಸ್ಥೆಗಳು/ ಸಾರ್ವಜನಿಕರು/ ಶಾಲಾ – ಕಾಲೇಜು ಮಕ್ಕಳು/ ಇತರೆ ಎಲ್ಲಾ ಸಿಬ್ಬಂದಿಗಳು ಹಾಗೂ ಅವರ ಕುಟುಂಬ ವರ್ಗದವರನ್ನು ಸೇರಿಸಿ ಸ್ವತಃ ತಾವೇ ಕ್ರಿಯಾಶೀಲರಾಗಿ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಾಗವಹಿಸುವಂತೆ ಪ್ರೇರೆಪಿಸಲು ಅಗತ್ಯ ಕ್ರಮವಹಿಸುವಂತೆ ಎಲ್ಲಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಸೂಚಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.3– ಕರ್ನಾಟಕ ಪ್ರದೇಶ ಕುರುಬರ ಸಂಘ ಮೈಸೂರು ಜಿಲ್ಲೆ/ತಾಲೂಕು ಕುರುಬರ ಸಂಘದ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ ಕುರುಬ ಸಮಾಜದ 2021–2022 ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90 ಹಾಗೂ ಪ್ರಥಮ ವರ್ಷದ ಎಂಬಿಬಿಎಸ್‌ಗೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದೆ

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಅಂಕಪಟ್ಟಿ ಜೆರಾಕ್ಸ್, ಜಾತಿ ದೃಢೀಕರಣ ಪತ್ರ, ಎರಡು ಪಾಸ್ ಪೋರ್ಟ್ ಫೋಟೋ ಹಾಗೂ ಎಂಬಿಬಿಎಸ್ ವಿದ್ಯಾರ್ಥಿಗಳು ಜಾತಿ ದೃಢೀಕರಣ ಪತ್ರ, ಎರಡು ಫೋಟೋ, ಎಂಬಿಬಿಎಸ್ ದಾಖಲಾತಿಯ ಜೆರಾಕ್ಸ್ ಪ್ರತಿಯನ್ನು ಜು.15ರ ಒಳಗೆ ಅಂಚೆ ಮುಖಾಂತರ ಬಿ. ಸುಬ್ರಹ್ಮಣ್ಯ, #584, ಬಿಡಾರ ಕೃಷ್ಣಪ್ಪ ರಸ್ತೆ, ದೇವರಾಜ ಮೊಹಲ್ಲಾ– 570001 ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ ಮೊ.ಸಂಖ್ಯೆ– 9845394933/ 9663666506 ಸಂಪರ್ಕಿಸಬಹುದು.

ನಶಿಸುತ್ತಿರುವ ಜನಪದ ಕಲೆಗಳ ಉಳಿವಿಗೆ ತರಬೇತಿ ಶಿಬಿರಗಳು ಅವಶ್ಯ

ಮೈಸೂರು, ಜು.3– ನಶಿಸಿ ಹೋಗುತ್ತಿರುವ ಜನಪದ ಸಾಹಿತ್ಯವನ್ನು ಉಳಿಸುವುದಕ್ಕಾಗಿ ಹಾಗೂ ಮುಂದಿನ ತಲೆಮಾರಿಗೆ ಪರಿಚಯಿಸುವ ದೃಷ್ಟಿಯಿಂದ ಜಾನಪದ ನೃತ್ಯ ಮತ್ತು ಗೀತೆಗಳ ತರಬೇತಿ ಶಿಬಿರಗಳು ಅತ್ಯಾವಶ್ಯಕ ಎಂದು ಮೈಸೂರು ವಿವಿ ಸಂಜೆ ಕಾಲೇಜು ಪ್ರಾಧ್ಯಾಪಕ ಡಾ.ನಿಂಗರಾಜು ಅಭಿಪ್ರಾಯಪಟ್ಟರು.

ಕಲಾಮಂದಿರ ಆವರಣದಲ್ಲಿ ಜಾನಪದ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ ಪ್ರೊ.ನಂಜಯ್ಯ ಹೊಂಗನೂರು ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಜಾನಪದ ನೃತ್ಯ ಹಾಗೂ ಗೀತೆಗಳ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನೂರಾರು ವಿದ್ಯಾರ್ಥಿಗಳು ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ ಸೇರಿದಂತೆ ಇನ್ನಿತರೆ ಜಾನಪದ ಪ್ರಕಾರಗಳಾದ ಕಲಿಯುತ್ತಿರುವುದು ಸಂತಸ ತಂದಿದೆ ಎಂದರು. ಬಳಿಕ ಶಿಬಿರಾರ್ಥಿಗಳು ಜಾನಪದ ನೃತ್ಯ ಪ್ರದರ್ಶನ ನೀಡುವ ಮೂಲಕ ಎಲ್ಲರ ಗಮನ ಸೆಳೆದರು. ತರಬೇತುದಾರರಾದ ಸುಂದ್ರೇಶ್, ಸಿದ್ದರಾಜು, ಲೋಕೇಶ್, ಡಾ.ಮಧುಸೂದನ್, ನಂದಿನಿ, ಮಂಜು, ಕಿರಣ್, ಆನಂದ್ ಮತ್ತಿತರರಿದ್ದರು.

ಜಾರಿ ನಿರ್ದೇಶನಾಲಯದಿಂದ ತಮಿಳುನಾಡಿನಲ್ಲಿ 400 ಕೋಟಿ ಆಸ್ತಿ ಮುಟ್ಟುಗೋಲು

ನವದೆಹಲಿ: ತಮಿಳುನಾಡಿನಲ್ಲಿ ಬ್ಯಾಂಕ್ ಮತ್ತು ಲಾಟರಿ ವಂಚನೆ ಹಾಗೂ ಹಣ ಅಕ್ರಮ ವರ್ಗಾವಣೆಯ ಸಂಬಂಧ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸುಮಾರು 400 ಕೋಟಿಗೂ ಹೆಚ್ಚಿನ ಆಸ್ತಿಯನ್ನು ಕೇಂದ್ರೀಯ ತನಿಖಾ ಸಂಸ್ಥೆ ಇ.ಡಿ (ಜಾರಿ ನಿರ್ದೇಶನಾಲಯ) ಮಟ್ಟುಗೋಲು ಹಾಕಿಕೊಂಡಿದೆ.

ಇಂಡಿಯನ್ ಬ್ಯಾಂಕಿಗೆ ವಂಚಿಸಿರುವ ಚೆನ್ನೈನ ಸರವಣ ಸ್ಟೋರ್ಸ್‌ಗೆ (ಗೋಲ್ಡ್ ಪ್ಯಾಲೇಸ್) ಸೇರಿದ ಸುಮಾರು 234.75 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಸರವಣ ಸ್ಟೋರ್ಸ್ ಗೋಲ್ಡ್ ಪ್ಯಾಲೇಸ್ ಪಾಲುದಾರರಾದ ದಿವಂಗತ ಪಲ್ಲಕುದುರೈ, ಪಿ.ಸುಜಾತಾ ಮತ್ತು ವೈ.ಪಿ. ಶಿರವನ್, ಅಪರಿಚಿತ ಅಧಿಕಾರಿಗಳು ಮತ್ತು ಇನ್ನಿತರರು ಚೆನ್ನೈನ ಟಿ.ನಗರದ ಇಂಡಿಯನ್ ಬ್ಯಾಂಕ್ ಶಾಖೆಗೆ ವಂಚಿಸಿರುವ ಬಗ್ಗೆ ಸಿಬಿಐ ಮೊದಲು ಪ್ರಕರಣ ದಾಖಲಿಸಿಕೊಂಡಿತ್ತು.

ನಂತರ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡ ಇ.ಡಿ, ಸರವಣ ಸ್ಟೋರ್ಸ್ ಪಾಲುದಾರರು ತಮ್ಮ ಉದ್ಯಮ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದೆ ಎಂದು ಬಿಂಬಿಸಿ, ವಾರ್ಷಿಕ ವಹಿವಾಟಿನ ಉತ್ಪ್ರೇಕ್ಷಿತ ಚಿತ್ರಣ ನೀಡಿ ಬ್ಯಾಂಕಿನಿಂದ ಹೆಚ್ಚಿನ ಸಾಲ ಪಡೆದಿದ್ದರು. ಆದರೆ, ಮಾರಾಟ ವರದಿ ಮತ್ತು ಜಮಾ ನಮೂದಿನಲ್ಲಿ ಭಾರಿ ವ್ಯತ್ಯಾಸಗಳು ಇರುವುದು, ಉದ್ಯಮ ಪಾಲುದಾರರು ವೈಯಕ್ತಿಕ ಲಾಭಕ್ಕಾಗಿ ವೇಲೂರಿನಲ್ಲಿ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯಕ್ಕೆ ಆಸ್ತಿ ಖರೀದಿಸಿ, ಬ್ಯಾಂಕಿಗೆ ಉದ್ದೇಶಪೂರ್ವಕ ನಷ್ಟ ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಹೇಳಿದೆ.


ಮತ್ತೊಂದು ಪ್ರಕರಣದಲ್ಲಿ ತಮಿಳುನಾಡಿನ 'ಲಾಟರಿ ಕಿಂಗ್' ಸ್ಯಾಂಟಿಯಾಗೊ ಮಾರ್ಟಿನ್ ಅವರಿಗೆ ಸೇರಿದ ಸುಮಾರು 173.48 ಕೋಟಿಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರಲ್ಲಿ ಮಾರ್ಟಿನ್ ಅವರ ಹೆಸರಿನಲ್ಲಿರುವ ಹಲವು ಕಂಪನಿಗಳ ಆಸ್ತಿ ಮತ್ತು ಬ್ಯಾಂಕ್ ಖಾತೆಗಳು, ಚರ ಹಾಗೂ ಸ್ಥಿರ ಆಸ್ತಿಗಳು ಸೇರಿವೆ.

ಎಂ.ಜೆ. ಅಸೋಸಿಯೇಟ್ಸ್ ಪಾಲುದಾರರಾದ ಸ್ಯಾಂಟಿಯಾಗೊ ಮತ್ತು ಎನ್.ಜಯಮುರುಗನ್ ಅವರು 2009ರಿಂದ 2010ರ ಅವಧಿಯಲ್ಲಿ ಲಾಟರಿ ವಿಜೇತರ ಬಹುಮಾನ ಮೊತ್ತವನ್ನು ಅನಧಿಕೃತವಾಗಿ ಹೆಚ್ಚಿಸಿ, ಅಸ್ಸಾಂ ಸರ್ಕಾರಕ್ಕೆ ಸುಮಾರು ?910.29 ಕೋಟಿ ನಷ್ಟ ಮಾಡಿದ್ದರು. ಅಕ್ರಮವಾಗಿ ಲಾಭ ಗಳಿಸಿದ ಸಂಬಂಧ ಎಂ.ಜೆ. ಅಸೋಸಿಯೇಟ್ಸ್ ವಿರುದ್ಧ ಸಿಬಿಐ ಮೊದಲು ಪ್ರಕರಣ ದಾಖಲಿಸಿತ್ತು. ಮಾರ್ಟಿನ್ ಮತ್ತು ಇತರರ ವಿರುದ್ಧ ಈ ಹಿಂದೆ 278 ಕೋಟಿ ಆಸ್ತಿ ಮುಟ್ಟುಗೋಲಿಗೆ ಆದೇಶ ಹೊರಡಿಸಲಾಗಿತ್ತು ಎಂದು ಇ.ಡಿ ಹೇಳಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

'ದಿ ಮಹಾಭಾರತ' ನಿರ್ದೇಶಕ ಪೀಟರ್ ಬ್ರೂಕ್ ನಿಧನ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್ ಸಂಜಾತ ಪ್ರಸಿದ್ಧ ರಂಗಭೂಮಿ ನಿರ್ದೇಶಕ ಪೀಟರ್ ಬ್ರೂಕ್ (97) ಭಾನುವಾರ ನಿಧನರಾದರು. 20ನೇ ಶತಮಾನದ ಪ್ರತಿಭಾನ್ವಿತ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಬ್ರೂಕ್, 90ನೇ ವಯಸ್ಸಿನಲ್ಲಿಯೂ ತಮ್ಮ ನಟನೆ ಮೂಲಕ ಪ್ರೇಕ್ಷಕರ ಮನಗೆದ್ದಿದ್ದರು.



1985ರಲ್ಲಿ ಅವರು ನಿರ್ದೇಶಿಸಿದ್ದ 9 ಗಂಟೆಗಳ ಹಿಂದೂ ಮಹಾಕಾವ್ಯ 'ದಿ ಮಹಾಭಾರತ' ಜನಪ್ರಿಯವಾಗಿತ್ತು. ಅವರು 1970ರಲ್ಲಿ ಪ್ಯಾರಿಸ್‌ನಲ್ಲಿ ನೆಲೆಸಿದ್ದ ವೇಳೆ ರಂಗಭೂಮಿ ಸಂಶೋಧನೆಗಾಗಿ ಅಂತರರಾಷ್ಟ್ರೀಯ ಕೇಂದ್ರ ಸ್ಥಾಪಿಸಿದ್ದರು. ರಂಗಭೂಮಿಯ ಅತ್ಯಂತ ಪ್ರಭಾವಶಾಲಿ ಪಠ್ಯಗಳಲ್ಲಿ ಒಂದಾದ 'ದಿ ಎಂಪ್ಟಿ ಸ್ಪೇಸ್' ಬರೆದರು.

1925ರ ಮಾರ್ಚ್ 21ರಂದು ಲಂಡನ್‌ನ ಯಹೂದಿ ವಿಜ್ಞಾನಿಗಳ ಕುಟುಂಬದಲ್ಲಿ ಜನಿಸಿದ ಬ್ರೂಕ್, ಲಂಡನ್ ವೆಸ್ಟ್ ಎಂಡ್‌ನಲ್ಲಿ ಉತ್ತಮ ನಿರ್ದೇಶಕ ಎಂಬ ಮೆಚ್ಚುಗೆಗಳಿಸಿದ್ದರು. 1970ರಲ್ಲಿ ಪ್ಯಾರೀಸ್‌ಗೆ ತೆರಳಿ, ಹಲವು ನಾಟಕಗಳನ್ನು ನಿರ್ದೇಶಿಸಿದ್ದರು. 1997ರಲ್ಲಿ ಲಂಡನ್‌ಗೆ ಮರಳಿದ್ದರು. ಇವರು ನಿರ್ದೇಶಿಸಿದ್ದ ಹಲವು ನಾಟಕಗಳಲ್ಲಿ ಪತ್ನಿ ನತಾಶಾ ಪ್ಯಾರಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದರು. ನತಾಶಾ ಅವರು 2015ರಲ್ಲಿ ನಿಧನರಾಗಿದ್ದರು.

ಲಕ್ಷ್ಮಣ ರೇಖೆ ದಾಟುತ್ತಿರುವ ಸೋಶಿಯಲ್ ಮೀಡಿಯಾಗಳನ್ನು ನಿಯಂತ್ರಿಸಬೇಕಾಗಿದೆ

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆಬಿ ಪರ್ದಿವಾಲಾ

ನವದೆಹಲಿ, ಜು.3– ನ್ಯಾಯಮೂರ್ತಿಗಳ ಕುರಿತು ವೈಯಕ್ತಿಕವಾಗಿ ದಾಳಿ ನಡೆಸುತ್ತಿರುವ ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮಗಳು ಲಕ್ಷ್ಮಣ ರೇಖೆ ದಾಟುತ್ತಿರುವುದು ಅಪಾಯಕಾರಿ ಎಂದಿರುವ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆಬಿ ಪರ್ದಿವಾಲಾ, ಸಂವಿಧಾನದಡಿ ಕಾನೂನು ಸುವ್ಯವಸ್ಥೆ ಕಾಪಾಡಲು ದೇಶದಲ್ಲಿ ಇವುಗಳ ಕಡ್ಡಾಯವಾಗಿ ನಿಯಂತ್ರಿಸುವ ಅಗತ್ಯವಿದೆ ಎಂದು ಭಾನುವಾರ ಹೇಳಿದ್ದಾರೆ.

ಪ್ರವಾದಿ ಮೊಹಮ್ಮದ್ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿ ಬಿಜೆಪಿಯಿಂದ ಅಮಾನತುಗೊಂಡಿರುವ ನೂಪುರ್ ಶರ್ಮಾ ಕ್ಷಮೆ ಕೇಳಬೇಕೆಂದು ತಾಕೀತು ಮಾಡಿದ್ದ ನ್ಯಾಯಪೀಠ ಬಗ್ಗೆ ಕೆಲವರು ಅಸಮಾಧಾನ ವ್ಯಕ್ತಪಡಿಸುತ್ತಿರುವಂತೆಯೇ ನ್ಯಾಯಮೂರ್ತಿ ಪರ್ದಿವಾಲಾ ಕಾರ್ಯಕ್ರಮವೊಂದರಲ್ಲಿ ಈ ರೀತಿಯ ಹೇಳಿಕೆ ನೀಡಿದ್ದಾರೆ. ಆ ನ್ಯಾಯಪೀಠದಲ್ಲಿ ಪರ್ದಿವಾಲಾ ಕೂಡಾ ಸದಸ್ಯರಾಗಿದ್ದರು.

ದೇಶದಲ್ಲಿ ಮಾಹಿತಿಯುಕ್ತ, ಪ್ರಬುದ್ಧ ಪ್ರಜಾಪ್ರಭುತ್ವವನ್ನು ವರ್ಗೀಕರಿಸಲು ಸಾಧ್ಯವಿಲ್ಲ, ಸಾಮಾಜಿಕ ಮತ್ತು ಡಿಜಿಟಲ್ ಮಾಧ್ಯಮಗಳು ಆಗಾಗ್ಗೆ ಕಾನೂನಾತ್ಮಕ ಮತ್ತು ಸಂವಿಧಾನಿಕ ವಿಚಾರಗಳನ್ನು ರಾಜಕಾರಣಗೊಳಿಸುತ್ತಿವೆ, ನ್ಯಾಯದಾನ ವ್ಯವಸ್ಥೆಯಲ್ಲೂ ಅನಗತ್ಯವಾಗಿ ಮಧ್ಯಪ್ರವೇಶಿಸುವ ಪ್ರಯತ್ನ ಮಾಡುತ್ತಿವೆ ಎಂದು ಅವರು ಹೇಳಿದರು. ಸೋಶಿಯಲ್ ಮೀಡಿಯಾಗಳು ಅನೇಕ ಸಂದರ್ಭಗಳಲ್ಲಿ ಲಕ್ಷ್ಮಣ ರೇಖೆಯನ್ನು ದಾಟುತ್ತಿರುವುದು ಹೆಚ್ಚಿನ ಅಪಾಯಕಾರಿಯಾಗಿದೆ. ಇವುಗಳನ್ನು ದೇಶದಲ್ಲಿ ಕಡ್ಡಾಯವಾಗಿ ನಿಯಂತ್ರಿಸಬೇಕಾದ ಅಗತ್ಯವಿದೆ. ತೀರ್ಪಿಗಾಗಿ ನಮ್ಮ ಜಡ್ಜ್ ಗಳ ಮೇಲಿನ ದಾಳಿಯಂತಹ ಪ್ರಯತ್ನಗಳು ಅಪಾಯಕಾರಿ ಸನ್ನಿವೇಶಕ್ಕೆ ಕಾರಣವಾಗಲಿವೆ . ಜಡ್ಜ್ ಗಳು ಸೋಶಿಯಲ್ ಮೀಡಿಯಾ ಚರ್ಚೆಗಳಲ್ಲಿ ಪಾಲ್ಗೊಳ್ಳಬಾರದು ಎಂದು ಅವರು ತಿಳಿಸಿದರು.

3000 ಮೀಟರ್ ಓಟದಲ್ಲಿ ಹೊಸ ರಾಷ್ಟ್ರೀಯ ದಾಖಲೆ ಸೃಷ್ಟಿಸಿದ ಪಾರುಲ್ ಚೌಧರಿ

ಲಾಸ್ ಏಂಜಲೀಸ್, ಜು.3– ಭಾರತದ ಮಹಿಳಾ ಟ್ರ್ಯಾಕ್ ಅಥ್ಲೀಟ್ ಪಾರುಲ್ ಚೌಧರಿ ಅವರು ಭಾನುವಾರ ಯುಎ ಸನ್‌ಸೆಟ್ ಟೂರ್‌ನ 3000 ಮೀಟರ್ ಸ್ಪರ್ಧೆಯಲ್ಲಿ ಹೊಸ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ. 27 ವರ್ಷದ ಚೌಧರಿ ಅವರು ಮಹಿಳೆಯರ 3000 ಮೀ ಓಟವನ್ನು 8:57.19 ರಲ್ಲಿ ಪೂರ್ಣಗೊಳಿಸುವ ಮೂಲಕ ಸೂರಿಯಾ ಲೋಗನಾಥನ್ ಅವರ ಆರು ವರ್ಷಗಳ ಹಳೆಯ 9:04.5 ರ ದಾಖಲೆಯನ್ನು ಮುರಿದರು.



ಓಟದ ಆರಂಭಿಕ ಹಂತದಲ್ಲಿ ಅವರು ಐದನೇ ಸ್ಥಾನದಲ್ಲಿದ್ದರು. ಆದರೆ ಕೊನೆಯ ಎರಡು ಲ್ಯಾಪ್‌ಗಳಲ್ಲಿ ಅವರು ತಮ್ಮ ವೇಗವನ್ನು ಹೆಚ್ಚಿಸಿಕೊಂಡು ಮೂರನೇ ಸ್ಥಾನ ಆಕ್ರಮಿಸಿದರು. ಜುಲೈ 15 ರಿಂದ ಚೌಧರಿ ಅವರು ಯುಎಸ್‌ಎನ ಒರೆಗಾನ್‌ನಲ್ಲಿ 2022 ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 3000ಟ ಸ್ಟೀಪಲ್‌ಚೇಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಐಎಫ್‌ಎಸ್ ಅಧಿಕಾರಿಯಾಗಿ ಮೈಸೂರಿನ ಜಿ. ರಶ್ಮಿ ಆಯ್ಕೆ

ಮೈಸೂರು, ಜು.3– ಮೈಸೂರಿನ ಜಿ.ರಶ್ಮಿ 2022ನೇ ಸಾಲಿನಲ್ಲಿ ನಡೆದ ಕೇಂದ್ರ ಲೋಕಸೇವಾ ಆಯೋಗದ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ ಭಾರತೀಯ ಅರಣ್ಯ ಸೇವೆಯ ಅಧಿಕಾರಿಯಾಗಿ ಆಯ್ಕೆಯಾಗಿದ್ದಾರೆ. ದೇಶದಲ್ಲಿ 64ನೇ ರ್‍ಯಾಂಕ್ ಪಡೆಯುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ನಗರದ ಜೆ.ಸಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಸಿವಿಲ್ ಪದವಿ ಪಡೆದಿರುವ ರಶ್ಮಿ ಅವರು, 2017ನೇ ಸಾಲಿನಲ್ಲಿ ಕೆಎಎಸ್ ಪರೀಕ್ಷೆಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಆಯ್ಕೆಯಾದರು. ಲೇಖಕ ಹಾಗೂ ನಿವೃತ್ತ ಪ್ರಾಂಶುಪಾಲ ಗಂಗಾರಾಂ ಹಾಗೂ ಮುಖ್ಯ ಶಿಕ್ಷಕಿ ರತ್ನಮ್ಮ ಅವರ ಪುತ್ರಿಯಾಗಿರು ಇವರು, ಪ್ರಸ್ತುತ ಬೆಂಗಳೂರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಅಮರನಾಥ ಯಾತ್ರೆ: ಇಲ್ಲಿಯವರೆಗೂ 40,000 ಭಕ್ತರು ಗುಹ ದೇವಾಲಯಕ್ಕೆ ಭೇಟಿ

ಕಾಶ್ಮೀರ, ಜು.3– ಹಿಂದೂಗಳ ಪವಿತ್ರ ಯಾತ್ರೆ ಅಮರನಾಥ ಯಾತ್ರೆ ಈ ವರ್ಷ ಆರಂಭವಾದಾಗಿನಿಂದ ಸುಮಾರು 5 ಭಕ್ತರು ಸಾವನ್ನಪ್ಪಿದ್ದು, ಸುಮಾರು 40, 000 ಭಕ್ತರು ದಕ್ಷಿಣ ಕಾಶ್ಮೀರದ ಹಿಮಾಲಯದಲ್ಲಿರುವ ಗುಹ ದೇವಾಲಯಕ್ಕೆ ಭೇಟಿ ನೀಡಿರುವುದಾಗಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ವಿರೇಂದ್ರರ್ ಗುಪ್ತಾ ಎಂಬ ಭಕ್ತರೊಬ್ಬರು ಚಂದನ್ ವಾರಿ– ಶೇಷನಾಗ ಮಾರ್ಗದಿಂದ ನಾಪತ್ತೆಯಾಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ಐವರು ಮೃತರ ಪೈಕಿ ಮೂವರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ದೆಹಲಿಯ ಜೈ ಪ್ರಕಾಶ್ ಎಂಬುವರು ಚಂದನ್ ವಾರಿಯಲ್ಲಿ, ಬರೈಲಿಯ ದೇವೇಂದರ್ ತಯಲ್ ಕೆಳ ಗುಹೆಯಲ್ಲಿ ಮತ್ತು ಬಿಹಾರದ ಲಿಫೊ ಶರ್ಮಾ ಕ್ವಾಜಿಗುಂದ ಶಿಬಿರದಲ್ಲಿ ಸಾವನ್ನಪ್ಪಿದ್ದಾರೆ. ಮಹಾರಾಷ್ಟ್ರದಿಂದ ಬಂದಿದ್ದ ಜಗನಾಥ್ ಕೆಲ ಆರೋಗ್ಯ ಸಮಸ್ಯೆಯಿಂದ ಸಾವಿಗೀಡಾಗಿದ್ದಾರೆ. ರಾಜಸ್ಥಾನದ ಅಶು ಸಿಂಗ್ ಎಂಬುವರು ಕುದುರೆಯಿಂದ ಬಿದ್ದು ಮೃತಪಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಭಾನುವಾರ ಬೆಳಗ್ಗೆ 10 ಗಂಟೆಯವರೆಗೂ 40. 233 ಭಕ್ತರು ಗುಹೆ ದೇವಾಲಯಕ್ಕೆ ಭೇಟಿ ನೀಡಿದ್ದು, ಶಿವಲಿಂಗ ದರ್ಶನ ಪಡೆದಿದ್ದಾರೆ. ಜೂನ್ 30 ರಿಂದ ಆರಂಭವಾಗಿರುವ ಅಮರನಾಥ ಯಾತ್ರೆ ಆಗಸ್ಟ್ 11 ರಂದು ಅಂತ್ಯಗೊಳ್ಳಲಿದೆ.

ಮಹಾರಾಷ್ಟ್ರ ವಿಧಾನಸಭೆ ಅಭ್ಯರ್ಥಿ ನಾರ್ವೇಕರ್ ಸ್ಪೀಕರ್ ಆಗಿ ಆಯ್ಕೆ!

ಮುಂಬೈ, ಜು.3– ತೀವ್ರ ಕುತೂಹಲ ಕೆರಳಿಸಿದ್ದ ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ಆಯ್ಕೆ ಚುನಾವಣೆಯಲ್ಲೂ ಶಿವಸೇನೆಯ ರೆಬೆಲ್ ಶಾಸಕರ ಬಣ ಮೇಲುಗೈ ಸಾಧಿಸಿದ್ದು, ಶಿವಸೇನೆ ರೆಬೆಲ್ ಬಣ ಹಾಗೂ ಬಿಜೆಪಿಯ ಅಭ್ಯರ್ಥಿ ರಾಹುಲ್ ನಾರ್ವೇಕರ್ ಅವರು ಸ್ಪೀಕರ್ ಆಗಿ ಆಯ್ಕೆಯಾಗಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ಆಗಿ ಬಿಜೆಪಿಯ ರಾಹುಲ್ ನಾರ್ವೇಕರ್ ಭಾನುವಾರ ಆಯ್ಕೆಯಾಗಿದ್ದಾರೆ. 164 ಮತಗಳನ್ನು ಪಡೆದ ನಾರ್ವೇಕರ್ ಅವರು 107 ಮತಗಳನ್ನು ಪಡೆದ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಅಭ್ಯರ್ಥಿ ರಾಜನ್ ಸಾಲ್ವಿ ಅವರನ್ನು ಸೋಲಿಸಿದರು. 288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆ ನಾಳೆಯಿಂದ ಆರಂಭವಾಗಲಿದ್ದು, ಸಿಎಂ ಏಕನಾಥ್ ಶಿಂಧೆ ವಿಶ್ವಾಸ ಮತ ಯಾಚನೆಗೆ ವೇದಿಕೆ ಸಿದ್ಧವಾದಂತಾಗಿದೆ. ಸದನದ ಎರಡು ದಿನಗಳ ವಿಶೇಷ ಅಧಿವೇಶನ ಭಾನುವಾರ ಬೆಳಗ್ಗೆ 11 ಗಂಟೆಗೆ ಆರಂಭವಾಯಿತು. ಏಕನಾಥ್ ಶಿಂಧೆ ನೇತೃತ್ವದ ಸರ್ಕಾರ ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸಮತ ಪರೀಕ್ಷೆ ಎದುರಿಸಲಿದೆ.

ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಆಸ್ಟ್ರೇಲಿಯಾಕ್ಕೆ ಅಕ್ರಮ ವಲಸೆಗೆ ಯತ್ನ

ಶ್ರೀಲಂಕಾದಲ್ಲಿ 51 ಮಂದಿ ಬಂಧನ

ಕೊಲಂಬೊ, ಜು.3– ಸತತ ಆರ್ಥಿಕ ಬಿಕ್ಕಟ್ಟಿನಿಂದ ತಪ್ಪಿಸಿಕೊಳ್ಳಲು ಆಸ್ಟ್ರೇಲಿಯಾಕ್ಕೆ ಅಕ್ರಮವಾಗಿ ವಲಸೆ ಹೋಗಲು ಮುಂದಾಗುತ್ತಿದ್ದ 51 ಮಂದಿ ಶ್ರೀಲಂಕಾ ಪ್ರಜೆಗಳನ್ನು ಇಂದು ಬಂಧಿಸಲಾಗಿದೆ. ಕಳೆದ ಒಂದು ವಾರದಲ್ಲಿ ಅಕ್ರಮ ವಲಸೆಗೆ ಯತ್ನಿಸಿದ 4ನೇ ಘಟನೆ ಇದಾಗಿದೆ ಎಂದು ಶ್ರೀಲಂಕಾ ವಾಯುಪಡೆ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಬೆಳಗ್ಗೆ ಲಂಕಾದ ಪಶ್ಚಿಮ ಕರಾವಳಿಯ ಮಾರವಿಲಾದಲ್ಲಿ ಶ್ರೀಲಂಕಾದ ಕೋಸ್ಟ್‌ಗಾರ್ಡ್ ಮತ್ತು ಪೊಲೀಸ್ ತಂಡವು ಕಾರ್ಯಾಚರಣೆ ನಡೆಸಿದೆ. ಈ ವೇಳೆ ಪೂರ್ವ ಸಮುದ್ರದ ಮಾರ್ಗವಾಗಿ ಆಸ್ಟ್ರೇಲಿಯಾಕ್ಕೆ ವಲಸೆ ಹೋಗಲು ಯತ್ನಿಸುತ್ತಿದ್ದದ್ದು ಕಂಡುಬಂದಿದೆ. ಸಮುದ್ರದಲ್ಲಿ ಮೀನುಗಾರಿಕಾ ಟ್ರಾಲರ್ ಅನ್ನು ವಶಪಡಿಸಿಕೊಂಡ ನಂತರ ಅಕ್ರಮವಾಗಿ ವಲಸೆ ಹೋಗಲು ಪ್ರಯತ್ನಿಸುತ್ತಿದ್ದ 51 ಮಂದಿ ಸಿಕ್ಕಿಬಿದ್ದಿದ್ದಾರೆ.

ನೌಕಾಪಡೆಯು ಇಂದು ಬೆಳಿಗ್ಗೆ ಪೂರ್ವ ಸಮುದ್ರದಲ್ಲಿ ಶೋಧ ನಡೆಸಿದಾಗ 51 ಜನರನ್ನು ಹೊತ್ತೊಯ್ಯುತ್ತಿದ್ದ ಸ್ಥಳೀಯ ಬಹು–ದಿನದ ಮೀನುಗಾರಿಕೆ ಟ್ರಾಲರ್ ಅನ್ನು ವಶಪಡಿಸಿಕೊಂಡಿದೆ. ಅವರು ಸಮುದ್ರಮಾರ್ಗದಿಂದ ಅಕ್ರಮವಾಗಿ ವಲಸೆ ಹೋಗುವ ಯತ್ನದಲ್ಲಿದ್ದಾರೆ ಎಂದು ನೌಕಾಪಡೆ ಶಂಕೆ ವ್ಯಕ್ತಪಡಿಸಿದೆ. ಕಳೆದ ಜೂನ್ 27, 28ರಂದು ಅಕ್ರಮವಾಗಿ ವಲಸೆ ಹೋಗುತ್ತಿದ್ದ 100ಕ್ಕೂ ಹೆಚ್ಚು ಮಂದಿಯನ್ನು ಬಂಧಿಸ ಲಾಗಿತ್ತು. ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟಿನಿಂದಾಗಿ ಜನರು ಪಲಾಯನ ಮಾಡುತ್ತಿದ್ದು, ಈ ವರ್ಷಾರಂಭದಿಂದ ಇದು ಶುರುವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮಾಜವಾದಿ ಪಕ್ಷದ ಎಲ್ಲ ಘಟಕಗಳನ್ನು ವಿಸರ್ಜಿಸಿದ ಅಖಿಲೇಶ್ ಯಾದವ್

ಲಕ್ನೋ, ಜು.3– ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಯುವ ಹಾಗೂ ಮಹಿಳಾ ವಿಭಾಗ ಸೇರಿದಂತೆ ಎಲ್ಲ ಘಟಕಗಳ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಕಾರ್ಯಕಾರಿ ಸಂಘಗಳನ್ನು ವಿಸರ್ಜಿಸಿದ್ದಾರೆ.



ಈ ನಿರ್ಧಾರಕ್ಕೆ ಯಾವುದೇ ಅಧಿಕೃತ ಕಾರಣಗಳನ್ನು ಈವರೆಗೆ ನೀಡಿಲ್ಲ. ಆದರೆ ಪಕ್ಷದ ಭದ್ರಕೋಟೆಗಳಾದ ರಾಂಪುರ ಮತ್ತು ಅಜಂಗಢದಲ್ಲಿ ಲೋಕಸಭೆ ಉಪಚುನಾವಣೆ ಸೋಲಿನ ನಂತರ ಸಮಾಜವಾದಿ ಪಕ್ಷವನ್ನು ಪುನಃ ಕಟ್ಟಲು ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎನ್ನಲಾಗುತ್ತಿದೆ.

ಉತ್ತರ ಪ್ರದೇಶದ ಸಮಾಜವಾದಿ ಪಕ್ಷ ಅಧ್ಯಕ್ಷ ನರೇಶ್ ಉತ್ತಮ್ ಅವರು ತಮ್ಮ ಸ್ಥಾನದಲ್ಲಿ ಮುಂದುವರಿಯುತ್ತಾರೆ ಎಂದು ಪಕ್ಷ ಹೇಳಿದೆ. ಈ ಬಗ್ಗೆ ಸಮಾಜವಾದಿ ಪಕ್ಷ ಟ್ವಿಟ್ಟರ್‌ನಲ್ಲಿ ಅಧಿಕೃತ ಮಾಹಿತಿ ಹಂಚಿಕೊಂಡಿದ್ದು, ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಪಕ್ಷದ ರಾಜ್ಯಾಧ್ಯಕ್ಷರನ್ನು ಹೊರತುಪಡಿಸಿ, ಪಕ್ಷದ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಕಾರ್ಯಕಾರಿ ಘಟಕಗಳನ್ನು ವಿಸರ್ಜಿಸಿದ್ದಾರೆ ಎಂದು ತಿಳಿಸಿದೆ.

ರಾಷ್ಟ್ರೀಯ ಅಧ್ಯಕ್ಷರು, ರಾಜ್ಯಾಧ್ಯಕ್ಷರು, ಯುವಜನ, ಮಹಿಳಾ ಘಟಕ ಸೇರಿದಂತೆ ಪಕ್ಷದ ಎಲ್ಲ ಸಂಘಟನೆಗಳನ್ನು ವಿಸರ್ಜನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಇದನ್ನೂ ಓದಿ: ಮಹಾರಾಷ್ಟ್ರ ಸ್ಪೀಕರ್ ಆಗಿ ಆಯ್ಕೆಯಾದ ರಾಹುಲ್ ನಾರ್ವೇಕರ್ ಯಾರು? 2024ರ ಲೋಕಸಭೆ ಚುನಾವಣೆಗೆ ಸಮಾಜವಾದಿ ಪಕ್ಷವು ಸಜ್ಜಾಗುತ್ತಿದ್ದು, ಬಿಜೆಪಿಯನ್ನು ಸಂಪೂರ್ಣ ಬಲದಿಂದ ಎದುರಿಸಲು ಸಂಘಟನೆಯನ್ನು ಬಲಪಡಿಸುವತ್ತ ಗಮನ ಹರಿಸಲಾಗಿದೆ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಸ್ಲಂ ಬೋರ್ಡ್ ನಿವಾಸಿಗಳಿಗೆ 632 ಮನೆಗಳ ವಿತರಣೆ



1,80,000 ಮನೆಗಳನ್ನು ರಾಜ್ಯಾದ್ಯಂತ ಕೊಳಗೇರಿಗಳಲ್ಲಿ ಮನೆ ನಿರ್ಮಿಸಲಾಗುತ್ತಿದೆ. ಈಗಾಗಲೇ 35,000 ದಿಂದ 40,000 ಮನೆ ನಿರ್ಮಾಣ ಮಾಡಿ ಹಂಚಿಕೆ ಮಾಡಲಾಗಿದೆ. ಇನ್ನೂ 3 ರಿಂದ 4 ತಿಂಗಳಲ್ಲಿ 40,000 ಮನೆಗಳನ್ನು ಪೂರ್ಣಗೊಳಿಸಿ ಹಂಚಿಕೆ ಮಾಡಲಾಗುವುದು. ಅನೇಕ ಯೋಜನೆ ಜಾರಿಗೊಳಿಸಿ ಬಡತನದಿಂದ ಮೇಲೆತ್ತುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದಕ್ಕೆ ಎಲ್ಲರೂ ಸಹಕರಿಸಬೇಕು.
– ವಿ.ಸೋಮಣ್ಣ, ವಸತಿ ಸಚಿವರು.

ಮಂಡ್ಯ, ಜು.3(ಮೋಹನ್‌ರಾಜ್)– ಜಿಲ್ಲೆಯಲ್ಲಿ ಸ್ಲಂ ಬೋರ್ಡ್‌ನಿಂದ 632 ಮನೆ ನಿರ್ಮಿಸಲಾಗಿದ್ದು, ಸ್ಲಂ ನಿವಾಸಿಗಳಿಗೆ ನೀಡಲಾಗಿದೆ. ಇದರ ಸದ್ಬಳಕೆ ಮಾಡಿ ಕೊಳ್ಳಬೇಕು ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ನಗರದ ಹಾಲಹಳ್ಳಿಯ ಸ್ಲಂ ಬೋರ್ಡ್‌ನಲ್ಲಿ ನಡೆದ ರಾಜೀವ್ ಅವಾಸ್ ಯೋಜನೆ (ಪ್ರಸ್ತುತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಿಲೀನಗೊಂಡಿರುವ) ಅಡಿಯಲ್ಲಿ ಮಂಡ್ಯ ನಗರದ ಹಾಲಹಳ್ಳಿ ಸರ್ವೇ ನಂ.14 ಮತ್ತು 16ರಲ್ಲಿ ನಿರ್ಮಿಸಿರುವ 632(ಜಿ+1) ಮಾದರಿಯ ಮನೆಗಳ ಉದ್ಘಾಟನೆ, ಹಂಚಿಕೆ ಮತ್ತು ಕೊಳಗೇರಿ ನಿವಾಸಿಗಳಿಗೆ ಹಕ್ಕು ಪತ್ರವನ್ನು ವಿತರಿಸಿ ಅವರು ಮಾತನಾಡಿದರು.

575 ಮನೆಗಳನ್ನು ಚಿಕ್ಕ ಮಂಡ್ಯದಲ್ಲಿ ಸುಮಾರು 30 ಕೋಟಿ ರೂ. ವೆಚ್ಚದಡಿ ನಿರ್ಮಿಸಲಾಗುತ್ತಿದೆ. ಮನೆಗಳ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಕೆಲವು ಭಾಗಗಳಲ್ಲಿ ಬಡ ಜನರಿಗೆ ಮನೆ ನಿರ್ಮಿಸಿಕೊಡುವಂತೆ ಮಂಡ್ಯ ಲೋಕಸಭಾ ಸದಸ್ಯರು ಮನವಿ ಸಲ್ಲಿಸಿದ್ದಾರೆ. ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಪ್ರತಿಯೊಬ್ಬರಿಗೂ ಸೂರು ನೀಡಬೇಕೆನ್ನುವುದು ಮಾನ್ಯ ಪ್ರಧಾನಮಂತ್ರಿಗಳ ಕನಸಾಗಿದ್ದು, ಇಂದು ವಸತಿ ಸೌಲಭ್ಯ ಪಡೆದಿರುವವರಿಗೆ ಖಾತೆ, ಕಂದಾಯ ಮಾಡಿಕೊಡಿ ಎಂದು ಅಧಿಕಾರಿಗಳಿಗೆ ತಿಳಿಸಿದ ಅವರು, ರಾಜ್ಯದಲ್ಲಿ 2300ಕ್ಕೂ ಹೆಚ್ಚು ಕೊಳಚೆ ಪ್ರದೇಶಗಳಿವೆ. ಈ ಪ್ರದೇಶದಲ್ಲಿರುವ ಬಡ ಜನರಿಗೆ ವಸತಿ ಒದಗಿಸುವುದು ಪುಣ್ಯದ ಕೆಲಸ. ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೊಳಗೇರಿ ಮಂಡಳಿ, ಕರ್ನಾಟಕ ರಾಜೀವ್ ಗಾಂಧಿ ನಿಗಮ ಇಂತಹ ಕೆಲಸದಲ್ಲಿ ನಿರತವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಂಸದೆ ಸುಮಲತಾ ಅಂಬರೀಶ್, ಶಾಸಕ ಎಂ.ಶ್ರೀನಿವಾಸ್, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ಜಿಲ್ಲಾಧಿಕಾರಿ ಎಸ್.ಅಶ್ವತಿ, ಉಪವಿಭಾಗಾಧಿಕಾರಿ ಆರ್.ಐಶ್ವರ್ಯ, ತಹಸೀಲ್ದಾರ್ ಕುಂ.ಇ.ಅಹಮದ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹೊರಗುತ್ತಿಗೆ ನೌಕರರ ಪ್ರತಿಭಟನೆ



ಪಾಂಡವಪುರ, ಜು.3– ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ಪೌರಕಾರ್ಮಿಕರು, ನೀರುಗಂಟಿಗಳು ಹಾಗೂ ವಾಹನ ಚಾಲಕರನ್ನು ನೇರ ವೇತನಕ್ಕೊಳಪಡಿಸುವಂತೆ ಹಾಗೂ ಪೌರಕಾರ್ಮಿಕರ ಎರಡನೇ ಹಂತದ ನೇಮಕಾತಿಗೆ ಒತ್ತಾಯಿಸಿ ಪಟ್ಟಣದ ಪುರಸಭೆ ಕಚೇರಿ ಮುಂಭಾಗ ಹೊರಗುತ್ತಿಗೆ ನೌಕರರು ಪ್ರತಿಭಟನೆ ನಡೆಸಿದರು.

ಪುರಸಭೆ ಮುಂಭಾಗ ಧರಣಿ ಕುಳಿತ ಪೌರಕಾರ್ಮಿಕರು, ರಾಜ್ಯ ಸರ್ಕಾರ ತಕ್ಷಣ ಪೌರಕಾರ್ಮಿಕರ ಬೇಡಿಕೆ ಈಡೇರಿಸಬೇಕು. ತಕ್ಷಣ ಎಲ್ಲಾ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಧರಣಿ ನಿರತರಿಗೆ ಪುರಸಭೆ ಸದಸ್ಯರು ಹಾಗೂ ಕೆಲವು ಸಂಘಟನೆಗಳು ಬೆಂಬಲ ಸೂಚಿಸಿದವು. ಪ್ರತಿಭಟನೆಯಲ್ಲಿ ಪೌರಕಾರ್ಮಿಕರ ಸಂಘದ ಅಧ್ಯಕ್ಷ ಗಣೇಶ್, ಉಪಾಧ್ಯಕ್ಷ ರುಕ್ಮಾಂಗದ, ಶಿವು, ಪೌರಕಾರ್ಮಿಕರಾದ ಮಧು, ಆನಂದ, ವೆಂಕಟೇಶ, ನಂದೀಶ, ನಾಗಮ್ಮ, ಮಂಜುಳಮ್ಮ, ಶಿವಪ್ರಸಾದ್, ನೀರುಗಂಟಿಗಳಾದ ಮಹೇಶ್, ಕರೀಗೌಡ, ರಾಜೇಶ್, ರಾಘು, ವಿನಯ್, ಸುಬ್ರಮಣಿ, ಶಿವರಾಜು, ಇತರರು ಇದ್ದರು.

ವಿವಿಧ ಬೇಡಿಕೆಗೆ ಆಗ್ರಹಿಸಿ ಪೌರಕಾರ್ಮಿಕರ ಮುಷ್ಕರ



ಶ್ರೀರಂಗಪಟ್ಟಣ,ಜು.3(ವಿನಯ್‌ಕಾರೇಕುರ)– ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದ ಪುರಸಭೆ ಕಚೇರಿ ಮುಂಭಾಗ ಗುತ್ತಿಗೆ ಪೌರಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಮುಷ್ಕರಕ್ಕೆ ವಿವಿಧ ಸಂಘಟನೆಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಪುರಸಭೆ ಗುತ್ತಿಗೆ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದ ವಾಟರ್ ಮ್ಯಾನ್‌ಗಳು ಸೇರಿದಂತೆ ವಿವಿಧ ವಿಭಾಗದಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವರಿಗೆ ಖಾಯಂಗೊಳಿಸದೆ ಗುತ್ತಿಗೆದಾರರಾಗಿಯೇ ಕೆಲಸ ನಿರ್ವಹಿಸಲು ಸರ್ಕಾರ ಮುಂದುವರೆಸಿರುವುದನ್ನು ಖಂಡಿಸಿ ಗುತ್ತಿಗೆ ಪೌರಕಾರ್ಮಿಕರು ನಡೆಸುತ್ತಿರುವ ಮುಷ್ಕರವನ್ನು ಬೆಂಬಲಿಸಿ, ದಲಿತ ಸಂಘಟನೆ ಮುಖಂಡರು, ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ಜನಪ್ರತಿನಿಧಿಗಳು ಬೆಂಬಲಿಸಿ ಮುಷ್ಕರದಲ್ಲಿ ಪಾಲ್ಗೊಂಡು ಪೌರಕಾರ್ಮಿಕರ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಕುಬೇರಪ್ಪ, ಮುಖಂಡರಾದ ರವಿಚಂದ್ರ, ಪಾಂಡು, ಮೋಹನ್, ಕನ್ನಡ ಪರ ಸಂಘಟನೆಯ ಪ್ರಿಯಾ ರಮೇಶ್ ಇದ್ದರು.

ಸ್ತ್ರೀ ಶಕ್ತಿ ಗುಂಪುಗಳಿಂದ ಅರ್ಜಿಗಳನ್ನು ಆಹ್ವಾನ

ಮಂಡ್ಯ, ಜು.3– 2022–23ನೇ ಸಾಲಿನಲ್ಲಿ ಕಿರುಸಾಲ ಯೋಜನೆಯಡಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಸಮಾಜದಲ್ಲಿ ಸ್ತ್ರೀ ಶಕ್ತಿ ಗುಂಪುಗಳು ಆರ್ಥಿಕ ಚಟುವಟಿಕೆ ಕೈಗೊಳ್ಳಲು ಇತರೆ ವರ್ಗದ ಸ್ತ್ರೀ ಶಕ್ತಿ ಗುಂಪುಗಳಿಗೆ 2.00 ಲಕ್ಷ ರೂ. ಸಾಲವನ್ನು ಬಡ್ಡಿ ರಹಿತವಾಗಿ ನೀಡಲು ಅರ್ಹ ಸ್ತ್ರೀ ಶಕ್ತಿ ಗುಂಪುಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಸ್ತ್ರೀಶಕ್ತಿ ಗುಂಪುಗಳು ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಿಂದ ಅರ್ಜಿಗಳನ್ನು ಉಚಿತವಾಗಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಜು. 20 ರೊಳಗೆ ತ್ರಿಪ್ರತಿಯಲ್ಲಿ ಸಲ್ಲಿಸುವುದು. ನಿಗದಿಪಡಿಸಿದ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ವಿವರಗಳಿಗೆ ಸಂಬಂಧಿಸಿದ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮಾಜಿ ಸ್ಪೀಕರ್ ದಿ.ಕೆ.ಆರ್.ಪೇಟೆ ಕೃಷ್ಣ ಸ್ಮರಣಾರ್ಥ ನಿರ್ಮಿಸಿರುವ ವಾಚನಾಲಯ ಲೋಕಾರ್ಪಣೆ



ಕೆ.ಆರ್.ಪೇಟೆ, ಜು.3(ಶ್ರೀನಿವಾಸ್)– ತಾಲೂಕಿನ ಅಭಿವೃದ್ಧಿಯ ಹರಿಕಾರ ವಿಧಾನಸಭೆಯ ಮಾಜಿ ಸ್ಪೀಕರ್ ದಿ.ಕೆ.ಆರ್.ಪೇಟೆ ಕೃಷ್ಣ ಅವರ ಹುಟ್ಟು ಹಬ್ಬದ ಸ್ಮರಣಾರ್ಥ ವಾರ್ಡ್ ನಂ.17ರಲ್ಲಿರುವ ಕ್ರೀಡಾ ಉದ್ಯಾನವನದಲ್ಲಿ ನಿರ್ಮಿಸಿರುವ ವಾಚನಾಲಯವನ್ನು ಮಾಜಿ ಸ್ಪೀಕರ್ ಕೃಷ್ಣ ಅವರ ಪತ್ನಿ, ಪ್ರೊ.ಇಂದಿರಮ್ಮ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಸರಳ ಸಜ್ಜನಿಕೆ ರಾಜಕಾರಣಿ ಮಂಡ್ಯದ ಗಾಂಧಿ ಎಂದೇ ಪ್ರಸಿದ್ಧಿ ಪಡೆದಿದ್ದ ವಿಧಾನಸಭಾ ಮಾಜಿ ಸ್ಪೀಕರ್ ಕೃಷ್ಣ ಅವರ ಸವಿನೆನಪಿಗಾಗಿ ಬಸ್ ತಿಮ್ಮೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ಹೇಮಾವತಿ ಬಡಾವಣೆಯಲ್ಲಿರುವ ಉದ್ಯಾನವನದಲ್ಲಿ ವಾಯುವಿಹಾರಕ್ಕೆ ಬರುವ ಸಾರ್ವಜನಿಕರ ಅನುಕೂಲಕ್ಕಾಗಿ 4ಲಕ್ಷ ರೂ.ಗಳ ವೆಚ್ಚದಡಿ ವಾಚನಾಲಯ ನಿರ್ಮಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಇದಕ್ಕೆ ಕಾರಣರಾದ ಕೃಷ್ಣ ಅವರ ಪ್ರೀತಿಯ ಶಿಷ್ಯ ಜೆಡಿಎಸ್ ಯುವ ಮುಖಂಡ ಹಾಗೂ ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ರಾಜ್ಯ ಸಹಕಾರ ಮಹಾ ಮಂಡಳದ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ತಾಪಂ ಮಾಜಿ ಅಧ್ಯಕ್ಷ ಬಿ.ಜವರಾಯಿಗೌಡ, ಜಿಪಂ ಮಾಜಿ ಉಪಾಧ್ಯಕ್ಷ ಬೇಲದಕೆರೆ ಪಾಪೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಶಶಿಧರ್ ಸಂಗಾಪುರ, ಅಕ್ಕಿಹೆಬ್ಬಾಳು ಎ.ಆರ್.ರಘು, ಪುರಸಭೆ ಉಪಾಧ್ಯಕ್ಷೆ ಗಾಯಿತ್ರಿ ಸುಬ್ರಹ್ಮಣ್ಯ, ಗ್ರಾಮ ಭಾರತಿ ಶಿಕ್ಷಣ ಸಂಸ್ಥೆಯ ಸಿ.ಕಿರಣ್, ಮುಖಂಡರಾದ ರಾಮದಾಸ್, ಸಂಜೀವಪ್ಪ, ಗದ್ದೆಹೊಸೂರು ದರ್ಶನ್, ಕತ್ತರಘಟ್ಟ ಮಹೇಶ್, ದರ್ಶನ್ ಸೇರಿದಂತೆ ಇತರರಿದ್ದರು.

ಬೈಕ್‌ಗೆ ಬೊಲೆರೋ ಡಿಕ್ಕಿ: ಸವಾರ ಸಾವು

ಮಳವಳ್ಳಿ, ಜು.3– ಬೈಕ್‌ಗೆ ಬೊಲೆರೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬಾಚನಹಳ್ಳಿ ಬಳಿಯ ಮಳವಳ್ಳಿ–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿ–209ರಲ್ಲಿ ಶನಿವಾರ ರಾತ್ರಿ ನಡೆದಿದೆ.

ಕೊಳ್ಳೇಗಾಲ ತಾಲೂಕಿನ ಕಾಮಗೆರೆ ಗ್ರಾಮದ ರವಿ(35) ಮೃತಪಟ್ಟ ಸವಾರ. ರವಿ ತಮ್ಮ ಬೈಕ್‌ನಲ್ಲಿ ಪಟ್ಟಣದಿಂದ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಬಾಚನಹಳ್ಳಿ ಬಳಿ ಎದುರುಗಡೆಯಿಂದ ವೇಗವಾಗಿ ಬಂದ ಬೊಲೆರೋ ವಾಹನ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡು ರವಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಡಿಕ್ಕಿಯ ರಭಸಕ್ಕೆ ಬೈಕ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ

ಮದ್ದೂರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಆದ್ಯತೆ



ಭಾರತೀನಗರ, ಜು.3(ಅಣ್ಣೂರು ಸತೀಶ್)– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಹಂತ– ಹಂತವಾಗಿ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳುವ ಮೂಲಕ ಜನರಿಗೆ ಅನುಕೂಲವಾಗುತ್ತಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ಹೇಳಿದರು.

ಸಮೀಪದ ಮೆಣಸಗೆರೆ ಗ್ರಾಮದಲ್ಲಿ 30ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಬಳಿಕ ಗ್ರಾಮಸ್ಥರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ತಂದು ಅಭಿವೃದ್ಧಿ ಕಾಮಗಾರಿ ಮಾಡುವ ಮೂಲಕ ತಾಲೂಕಿನ ಜನತೆಗೆ ಅನುಕೂಲ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ನನ್ನ ಅಧಿಕಾರದ ಅವಧಿಯಲ್ಲಿ ಜಾತಿ, ಪಕ್ಷ ಬೇಧ ಮರೆತು ಜಾತ್ಯಾತೀತವಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಕೆಲವರು ಹಣ ಆಮಿಷಗಳನ್ನು ಹೊಡ್ಡಿ ಗ್ರಾಮಗಳನ್ನು ಕಲುಷಿತಗೊಳಿಸುತ್ತಿದ್ದಾರೆ. ಇದರಿಂದ ಯುವ ಸಮುದಾಯ ದಾರಿ ತಪ್ಪುವಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಇಲ್ಲಿ ಉತ್ತಮವಾದ ರಸ್ತೆಯನ್ನು ನಿರ್ಮಿಸುವ ಮೂಲಕ ಜನಮಾನಸದಲ್ಲಿ ಉಳಿಯುವಂತೆ ಕಾಮಗಾರಿಯನ್ನು ನಿರ್ವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕ ಡಿ.ಸಿ.ತಮ್ಮಣ್ಣ, ಗ್ರಾಪಂ ಅಧ್ಯಕ್ಷ ಮಹದೇವು ಹಾಗೂ ಸದಸ್ಯರನ್ನು ಅಭಿನಂದಿಸಿದರು. ಇದಕ್ಕೂ ಮೊದಲು ಶಾಸಕ ಡಿ.ಸಿ.ತಮ್ಮಣ್ಣ ಅವರು ಗ್ರಾಮಕ್ಕೆ ಆಗಮಿಸುತ್ತಿದ್ದಂತೆಯೇ ಪಟಾಕಿ ಸಿಡಿಸಿ ತಮಟೆ ನಗಾರಿಗಳೊಂದಿಗೆ ಮೆರವಣಿಗೆ ನಡೆಸಿ ವೇದಿಕೆಗೆ ಬರಮಾಡಿಕೊಂಡರು.

ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ಮಹದೇವು, ಸಿದ್ದಲಿಂಗಸ್ವಾಮಿ, ಒಡೆಯರ್, ಉಮೇಶ್, ರುದ್ರಮ್ಮ ಶಿವಲಿಂಗಯ್ಯ, ಲಾಯರ್ ಬೊಮ್ಮೇಗೌಡ, ಸ್ವಾಮಿ, ಉಮಾದೇವಿ, ಯೋಗೇಶ್, ನಾಗರಾಜು ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಪಕ್ಷ ಪೂಜೆ ಮುಖ್ಯ

ಕಾರ್ಯಕರ್ತನನ್ನು ತೋರಿಸಿ, ಮಂತ್ರಿಗಿರಿ ಸಿಗದಿದ್ದಾಗಲೇ ನಾನು ಉಸಿರು ಎತ್ತಿರಲಿಲ್ಲ ಎಂದು ರಾಹುಲ್ ಗಾಂಧಿಯವರ ಸಮ್ಮುಖದಲ್ಲಿ ತಮ್ಮ ಮತ್ತು ಸಿದ್ದರಾಮಯ್ಯ ಸಂಧಾನ ನಡೆಯಿತೇ ಎಂಬ ಸುದ್ದಿಗಾರರ ಪ್ರಶ್ನೆಗೆ ಡಿ.ಕೆ.ಶಿವಕುಮಾರ್ ಹೀಗೆ ಉತ್ತರಿಸಿದ್ದಾರೆ. ಆಗಸ್ಟ್ 12ಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ 75 ವರ್ಷ ತುಂಬಲಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮೋತ್ಸವ ಎಂಬ ಸಮಾವೇಶ ಆಯೋಜಿಸಲಾಗಿದೆ. ಸಿದ್ದರಾಮಯ್ಯ ಅವರ ಅನುಯಾಯಿಗಳು ದಾವಣಗೆರೆಯಲ್ಲಿ ಮೂರು ದಿನಗಳ ಕಾಲ ಈ ಸಮಾವೇಶ ಆಯೋಜಿಸಲಿದ್ದು, ಮುಖ್ಯಮಂತ್ರಿ ಅಭ್ಯರ್ಥಿ ವಿಚಾರದಲ್ಲಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ನಡುವೆ ಶೀತಲ ಸಮರ ನಡೆಯುತ್ತಿರುವಾಗಲೇ ಈ ಸಂಭ್ರಮಾಚರಣೆ ನಡೆಯಲಿದೆ.

ಡಿಸಿಗೆ ಕರೆ ಮಾಡಿದ ವಂಚಕ

ಕೇಳಿದ್ದಲ್ಲದೇ ವಾಟ್ಸಾಪ್ ಸಂದೇಶವನ್ನೂ ಕೂಡ ರವಾನಿಸಿದ್ದಾನೆ. ಆತನ ಹುದ್ದೆ ಬಗ್ಗೆ ಕೇಳಿದರೆ ಅದು ಗೌಪ್ಯವಾಗಿರುವುದಾಗಿ ತಿಳಿಸಿದ್ದಾನೆ. ಆತನ ಮಾತಿನ ಶೈಲಿ ಬಗ್ಗೆ ಅನುಮಾನಗೊಂಡು ಮೊಬೈಲ್ ವಿವರವನ್ನು ಪರಿಶೀಲಿಸಿದಾಗ ಆತ ಸುಳ್ಳು ಹೇಳುತ್ತಿದ್ದಾನೆ ಎಂಬುದು ಕಂಡು ಬಂದಿದೆ. ಗಣ್ಯ ವ್ಯಕ್ತಿಗಳ ಕಚೇರಿ ಮತ್ತು ಹುದ್ದೆ ಹೆಸರನ್ನು ದುರುಪಯೋಗ ಪಡಿಸಿಕೊಂಡು ಮೋಸ ಮಾಡುತ್ತಿರುವ ಈತನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಚಾಮರಾಜನಗರ ಟೌನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಜು.2ರಂದು ಕುಟುಂಬ ಸಮೇತರಾಗಿ ಬರುವುದಾಗಿ ತಿಳಿಸಿದ್ದ ವ್ಯಕ್ತಿ ಬರಲೇ ಇಲ್ಲ. ಅದರೂ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಎಸ್ಪಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಹೆಣ್ಣು ಹುಲಿ ಸುರಕ್ಷಿತ ಸೆರೆ

ಇದರಿಂದ ಕಾರ್ಯಾಚರಣೆ ಆರಂಭಿಸಿದ ಎರಡೂವರೆ ಗಂಟೆಯಲ್ಲೇ ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಯಿತು. ಸೆರೆ ಸಿಕ್ಕ ಬಳಿಕ ಲಕ್ಕೀಪುರದಿಂದ ಮೇಲುಕಾಮನಹಳ್ಳಿ ಬಳಿ ಇರುವ ಎಸ್‌ಟಿ ಪಿಎಫ್ ಕ್ವಾರ್ಟರ್ಸ್‌ಗೆ ತರಲಾಯಿತು. ಬಳಿಕ ಮಂಪರಿನಿಂದ ಹೊರ ಬರಲು ಹುಲಿಗೆ ಚಿಕಿತ್ಸೆ ನೀಡಲಾಯಿತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಹುಲಿಗೆ ಕಾಲು, ಭುಜದ ಹಿಂಭಾಗ, ಹೊಟ್ಟೆಯ ಭಾಗ, ಬಾಲದ ಬಳಿ ಗಂಭೀರವಾದ ಗಾಯವಾಗಿರುವುದು ಕಂಡು ಬಂತು. ಅಲ್ಲದೆ, 2 ಹಲ್ಲುಗಳು ವಯೋಸಹಜವಾಗಿ ಸವೆದಿರುವುದರಿಂದ ಬೇಟೆಯಾಡುವ ಶಕ್ತಿ ಕಳೆದುಕೊಂಡಿದ್ದರಿಂದಲೇ ಕಾಡಂಚಿನ ಗ್ರಾಮಗಳ ಬಳಿ ಮೇಯುತ್ತಿದ್ದ ಜಾನುವಾರುಗಳನ್ನು ಭೇಟೆಯಾಡಲು ಮುಂದಾಗಿತ್ತು ಎಂದು ಅರಣ್ಯಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಸ್ಥಳಕ್ಕಾಗಮಿಸಿದ್ದ ಚಾಮರಾಜನಗರ ಡಿಸಿ ಚಾರುಲತಾ ಸೋಮಲ್ ಕಾರ್ಯಾಚರಣೆ ವೀಕ್ಷಿಸಲು ಮೊಕ್ಕಾಂ ಹೂಡಿದ್ದರು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್‌ಕುಮಾರ್, ಎಸಿಎಫ್ ನವೀನ್, ಆರ್‌ಎಫ್‌ಓ ನವೀನ್‌ಕುಮಾರ್ ಸೇರಿದಂತೆ ಇನ್ನಿತರ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಎಸ್‌ಟಿಪಿಎಫ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಜೀವ ಬೆದರಿಕೆ ಪತ್ರ, ಕೇಸ್ ದಾಖಲು

ಕಪ್ಪು ಇಂಕ್ ಬಳಸಿ ಕನ್ನಡದಲ್ಲಿ ಬರೆದಿದ್ದಾರೆ. ಈ ಸಂಬಂಧ ಸಂಜಯನಗರ ಪೊಲೀಸರು ಕೇಸ್ ದಾಖಲಿಸಿದ್ದು, ಬಿಟಿ ಲಲಿತಾ ನಾಯಕ್ ಅವರ ನಿವಾಸಕ್ಕೆ ಭದ್ರತೆ ಒದಗಿಸಲಾಗಿದೆ. ರಾಜಾಜಿನಗರದಿಂದ ಪೋಸ್ಟ್ ಬಂದಿರುವುದಾಗಿ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಾಧ್ಯಮದ ಜೊತೆಗೆ ಮಾತನಾಡಿದ ಬಿ.ಟಿ. ಲಲಿತಾ ನಾಯಕ್, ನಾಲ್ಕು ಪುಟದ ಬೆದರಿಕೆ ಪತ್ರವನ್ನು ಸಂಜಯ ನಗರ ಪೊಲೀಸರಿಗೆ ನೀಡಿದ್ದೇನೆ. ಪತ್ರದಲ್ಲಿ ಸಿದ್ದರಾಮಯ್ಯ, ಕುಮಾರಸ್ವಾಮಿ, ಬಿಕೆ ಹರಿಪ್ರಸಾದ್, ಬರಗೂರು ರಾಮಚಂದ್ರಪ್ಪ ಸೇರಿದಂತೆ ಹಲವರ ಹೆಸರುಗಳಿವೆ. ಎಡಪಂಥೀಯ ವಿಚಾರಧಾರೆಗಳು ಮತ್ತು ಮುಸ್ಲಿಂ ಸಂಘಟನೆಗಳಿಗೆ ಬೆಂಬಲ ನೀಡುತ್ತಿರುವುದರ ವಿರುದ್ಧ ಎಚ್ಚರಿಕೆ ನೀಡಲಾಗಿದೆ. ಇಂತಹ ಬೆದರಿಗೆ ನಾನು ಕೇರ್ ಮಾಡಲ್ಲ, ನನ್ನ ಅಭಿಪ್ರಾಯ ನೀಡುವುದನ್ನು ಮುಂದುವರೆಸುತ್ತೇನೆ, ಸತ್ಯವನ್ನು ಮಾತನಾಡುತ್ತೇನೆ ಎಂದರು.

ನನ್ನ ಭದ್ರತೆಗಾಗಿ ಸರ್ಕಾರ ಖರ್ಚು ಮಾಡುವುದನ್ನು ನಾನು ಬಯಸುವುದಿಲ್ಲವಾದ್ದರಿಂದ ಗನ್‌ಮೆನ್ ಮತ್ತು ವಿಶೇಷ ಭದ್ರತೆಯನ್ನು ಒದಗಿಸುವ ಅಗತ್ಯವಿಲ್ಲ ಎಂದು ನಾನು ಗೃಹ ಇಲಾಖೆಗೆ ಹೇಳಿದ್ದೇನೆ ಎಂದು ಅವರು ಹೇಳಿದರು. ಕಳೆದ ವರ್ಷ ಮಾರ್ಚ್ ನಲ್ಲಿ ತಮಿಳುನಾಡು ಮತ್ತು ಕೇರಳ ಸೇರಿದಂತೆ ಐದು ರಾಜ್ಯಗಳ ಚುನಾವಣೆ ಸಂದರ್ಭದಲ್ಲೂ ಬಿಟಿ ಲಲಿತಾ ನಾಯಕ್ ಅವರಿಗೆ ಬೆದರಿಕೆ ಪತ್ರ ಬಂದಿತ್ತು.

ಕೊಡಗಿನ ಬೆಡಗಿ ಹರ್ಷಿಕಾ ಪೂಣಚ್ಚಗೆ ಮದರ್ ತೆರೇಸಾ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ



ಬೆಂಗಳೂರು: ಕೊಡನ ಬೆಡಗಿ, ನಟಿ ಹರ್ಷಿಕಾ ಪೂಣಚ್ಚ ಅವರು 'ಮದರ್ ತೆರೇಸಾ ಸ್ಮಾರಕ್ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದ್ದಾರೆ. ನಟಿ ಮಾತ್ರವಲ್ಲದೇ ತೆರೆಯ ಹಿಂದೆಯೂ ಕೂಡ ಸಾಕಷ್ಟು ಸಮಾಜಮುಖಿ ಕೆಲಸ ಮಾಡುತ್ತಿರುವ ಅವರು ಭುವನಂ ಸಂಸ್ಥೆಯ ಮೂಲಕ ನಟ ಭುವನ್‌ಗೆ ಸಾಥ್ ನೀಡುತ್ತಿದ್ದಾರೆ. ಕೊಡಗಿನಲ್ಲಿ ಪ್ರಕೃತಿ ವಿಕೋಪ ಸಂಭವಿಸಿದ ವೇಳೆ ಹಾಗೂ ಕೊರೊನಾ ಸಂದರ್ಭದಲ್ಲಿ ಭುವನಂ ಸಂಸ್ಥೆ ಮೂಲಕ ಹರ್ಷಿಕಾ ಪೂಣಚ್ಚ ಅವರು ಅನನ್ಯ ಸೇವೆ ಸಲ್ಲಿಸಿದ್ದರು. ಇವರ ಸಮಾಜಮುಖಿ ಕಾರ್ಯ ಗುರುತಿಸಿ ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ವತಿಯಿಂದ ಹರ್ಷಿಕಾ ಅವರಿಗೆ ಮದರ್ ತೆರೇಸಾ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈ ಪ್ರಶಸ್ತಿಯಿಂದ ಭುವನಂ ಸಂಸ್ಥೆ ಮೂಲಕ ಮತ್ತಷ್ಟು ಸಮಾಜಮುಖಿ ಕೆಲಸ ಮಾಡಲು ನಟಿಗೆ ಪ್ರೇರಣೆ ಸಿಕ್ಕಂತಾಗಿದೆ. ಪ್ರಶಸ್ತಿಯ ಕುರಿತು ಹರ್ಷಿಕಾ, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಅಭಿಮಾನಿಗಳು ನಟಿಗೆ ಶುಭ ಹಾರೈಸಿದ್ದಾರೆ.

ರಾಜಣ್ಣ ಕ್ಷಮೆಯಾಚನೆಗೆ ಜೆಡಿಎಸ್ ಮುಖಂಡರ ಆಗ್ರಹ

ಕಿಕ್ಕೇರಿ, ಜು.3– ಕಾಂಗ್ರೆಸ್ ಮುಖಂಡ ಕೆ.ಎನ್.ರಾಜಣ್ಣ ಜೆಡಿಎಸ್ ವರಿಷ್ಠ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದು, ಕೂಡಲೇ ಅವರು ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ಜೆಡಿಎಸ್ ಯುವ ಮುಖಂಡ ಬಿ.ಎಂ.ಕಿರಣ್ ಒತ್ತಾಯಸಿದರು. ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿ, ತತ್ವ ಸಿದ್ಧಾಂತವಿಟ್ಟುಕೊಂಡು ಇಡೀ ರಾಜ್ಯಕ್ಕೆ ಗೌರವ ತಂದುಕೊಟ್ಟಿದ್ದಾರೆ. ಇವರ ಹಿರಿತನಕ್ಕೆ ಗೌರವ ನೀಡುವ ಕನಿಷ್ಟ ಜ್ಞಾನವೂ ಇಲ್ಲದೇ ಉಂಡ ಮನೆಗೆ ದ್ರೋಹ ಬಗೆಹರಿವರು ರಾಜಣ್ಣ. ಶಾಸಕನಾಗಲು 'ಬಿ' ಫಾರಂ ಬೇಕಿದ್ದಾಗ ದೇವೇಗೌಡರು ಬೇಕಿತ್ತು. ಸಹಕಾರ ಕ್ಷೇತ್ರದಲ್ಲಿ ಬೆಳೆಯಲು ಮಾಜಿ ಪ್ರಧಾನಿ ಬೇಕಿತ್ತು. ಈಗ ಎಲ್ಲವನ್ನು ಮರೆತು ಹಗುರವಾಗಿ ಮಾತನಾಡಿರುವುದು ಇವರ ಘನತೆ ತೋರಿಸುತ್ತಿದೆ ಎಂದು ಕಿಡಿಕಾರಿದರು.



ಈ ವೇಳೆ ಜೆಡಿಎಸ್ ಹೋಬಳಿ ಘಟಕದ ಅಧ್ಯಕ್ಷ ಕಾಯಿ ಮಂಜೇಗೌಡ, ಮುಖಂಡರಾದ ಐನೋರಹಳ್ಳಿ ಮಲ್ಲೇಶ್, ಕೃಷ್ಣೇಗೌಡ, ಬಾಲಚಂದ್ರು, ಬಾಲು, ರಾಜೇಶ್, ಪ್ರವೀಣ್, ಲೋಕೇಶ್, ಅನಿಲ್, ಪಾಪಣ್ಣಿ ಇದ್ದರು.

ಫ.ಗು.ಹಳಕಟ್ಟಿಯವರ ಜಯಂತ್ಯುತ್ಸವ

ಮಂಡ್ಯ, ಜು.3– ನಗರದಲ್ಲಿ ಶನಿವಾರ ಫ.ಗು.ಹಳಕಟ್ಟಿಯವರ ಜಯಂತ್ಯುತ್ಸವ ಸರಳವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಉದಯ ಕುಮಾರ್, ಗಂಗಾಧರ್, ವಿಜಯೇಂದ್ರ, ಗುರುಲಿಂಗಯ್ಯ, ಆನಂದ್, ಸುಧಾ, ಸುಮತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಚಿಕೆಯಿಂದ ತಲೆ ತಗ್ಗಿಸುತ್ತೇನೆ

ನ್ಯಾಯಾಂಗದ ಸ್ಥಿತಿ ಬಗ್ಗೆ ಕಪಿಲ್ ಸಿಬಲ್ ಕಳವಳ

ನವದೆಹಲಿ, ಜು.3– ಪ್ರಸ್ತುತ ನ್ಯಾಯಾಂಗದ ಸ್ಥಿತಿ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ರಾಜ್ಯಸಭಾ ಸದಸ್ಯ ಮತ್ತು ಸುಪ್ರೀಂಕೋರ್ಟ್ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ನ್ಯಾಯಾಂಗದಲ್ಲಿರುವ ಕೆಲವು ಸದಸ್ಯರು ನಾವು ತಲೆ ತಗ್ಗಿಸುವಂತೆ ಮಾಡಿದರು ಮತ್ತು ಇತ್ತೀಚಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ನಾನು ನಾಚಿಕೆಯಿಂದ ತಲೆ ತಗ್ಗಿಸುತ್ತೇನೆ ಎಂದು ಹೇಳಿದ್ದಾರೆ. ಪಿಟಿಐಗೆ ನೀಡಿದ ಸಂದರ್ಶನದಲ್ಲಿ, ಕಪಿಲ್ ಸಿಬಲ್ ಇತ್ತೀಚಿನ ವರ್ಷಗಳಲ್ಲಿ, ವಾಕ್ ಸ್ವಾತಂತ್ರ್ಯ ಮತ್ತು ಅದನ್ನು ಸುಪ್ರೀಂಕೋರ್ಟ್ ಹೇಗೆ ವ್ಯಾಖ್ಯಾನಿಸುತ್ತಿರುವ ಬಗ್ಗೆ, ಸಂವಿಧಾನಾತ್ಮಕವಾಗಿ ಒಪ್ಪುವಂತಹ ಸಂಗತಿಗಳಿಗೆ ತಡೆಯೊಡ್ಡುತ್ತಿರುವ ಬಗ್ಗೆ ಮಾತನಾಡಿದ್ದಾರೆ. ನ್ಯಾಯಾಂಗದ ಮೇಲೂ ಪ್ರಭಾವ ಬೀರುವ ಮೂಲಕ ದೇಶದಲ್ಲಿ ಅಘೋಷಿಸಿತ ತುರ್ತು ಪರಿಸ್ಥಿತಿ ಇದೆ ಎಂದರು.

ಮೇಲುಕೋಟೆ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ



ಮೇಲುಕೋಟೆ, ಜು.3– ಚೆಲುವನಾರಾಯಣ ಸ್ವಾಮಿಯ ದಿವ್ಯ ಕ್ಷೇತ್ರ ಮೇಲುಕೋಟೆಯ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ ನೀಡಲು ಸದಾ ಸಿದ್ಧನಾಗಿದ್ದೇನೆ ಎಂದು ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥಪ್ರಸಾದ್ ಭರವಸೆ ನೀಡಿದರು.

ಚೆಲುವನಾರಾಯಣಸ್ವಾಮಿ ದರ್ಶನ ಪಡೆದು ಮಾತನಾಡಿದ ಅವರು, ಮೇಲುಕೋಟೆ ಅಭಿವೃದ್ಧಿಯ ಸಂಬಂಧ ಕಳೆದ ವೈರಮುಡಿ ಉತ್ಸವದಲ್ಲಿ ಭಾಗಿಯಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ಹಲವು ಘೋಷಣೆ ಮಾಡಿದ್ದಾರೆ. ಮುಖ್ಯಮಂತ್ರಿಗಳು ಘೋಷಿಸಿದ ಕಾರ್ಯಗಳೆಲ್ಲವು ಅನುಷ್ಠಾನದ ಹಂತದಲ್ಲಿವೆ. ಇದರ ಜೊತೆಗೆ ಕ್ಷೇತ್ರದ ಅಭಿವೃದ್ಧಿ ಸಂಬಂಧ ಕೈಗೊಳ್ಳಬಹುದಾದ ಕಾರ್ಯಪಟ್ಟಿಮಾಡಿ ಅಭಿವೃದ್ಧಿಪಡಿಸಲಾಗುತ್ತದೆ ಎಂದರು.

ಇದೇ ವೇಳೆ ಭಕ್ತರ ಸ್ನೇಹಿಯಾಗಿ ಮೇಲುಕೋಟೆ ರೂಪಿಸಲು ಸರ್ಕಾರದಿಂದ ಅಗತ್ಯ ಸಹಕಾರ ನೀಡುವಂತೆ ಯತಿರಾಜ ದಾಸರ್ ಗುರುಪೀಠದಿಂದ ಕೋರಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯದರ್ಶಿಗಳು ದೇವಾಲಯದ ಸ್ಥಾನೀಕರು ಅರ್ಚಕರು ನಮ್ಮನ್ನು ಭೇಟಿ ಮಾಡಿದರೆ ಭಕ್ತರ ಸ್ನೇಹಿಯಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಶೀಘ್ರವಾಗಿ ಅನುಷ್ಠಾನ ಮಾಡುವ ಸಂಬಂಧ ಸರ್ಕಾರ ಆದೇಶ ನೀಡಲು ಸಹಕಾರಿಯಾಗುತ್ತದೆ. ನಾನು ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದರು

ಈ ವೇಳೆ ಪಾಂಡವಪುರ ಉಪವಿಭಾಗಾಧಿಕಾರಿ ಹಾಗೂ ಚೆಲುವನಾರಾಯಣ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಶಿವಾನಂದಮೂರ್ತಿ, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ, ಗ್ರಾಮ ಲೆಕ್ಕಾಧಿಕಾರಿ ರಮೇಶ್ ಇದ್ದರು.

ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 257 ರನ್ ಮುನ್ನಡೆ



ಬರ್ಮಿಂಗ್ ಹ್ಯಾಂ, ಜು.3– ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಅಂತಿಮ ಟೆಸ್ಟ್ ಪಂದ್ಯದ ಮೂರನೇ ದಿನದ ಅಂತ್ಯಕ್ಕೆ ಭಾರತ ಎರಡನೇ ಇನ್ನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 125 ರನ್ ಗಳಿಸಿದ್ದು, 257 ರನ್‌ಗಳ ಮಹತ್ವದ ಮುನ್ನಡೆ ಸಾಧಿಸಿದೆ.

5 ವಿಕೆಟ್ ನಷ್ಟಕ್ಕೆ 84 ರನ್‌ಗಳಿಂದ ಮೂರನೇ ದಿನದಾಟ ಆರಂಭಿಸಿದ ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 284 ರನ್‌ಗಳಿಗೆ ಆಲೌಟಾಯಿತು. ಇಂಗ್ಲೆಂಡ್ ಪರ ಅಬ್ಬರಿಸಿದ ಜಾನಿ ಬೈರ್ ಸ್ಟೋ 140 ಎಸೆತಗಳಲ್ಲಿ 14 ಬೌಂಡರಿ, 2 ಸಿಕ್ಸರ್ ಒಳಗೊಂಡ 106 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಬೆನ್ ಸ್ಟೋಕ್ಸ್ 25, ಸ್ಯಾಮ್ ಬಿಲ್ಲಿಂಗ್ಸ್ 36, ಮ್ಯಾಟಿ ಪಾಟ್ಸ್ 19 ರನ್ ಗಳಿಸಿದರು. ಭಾರತದ ಪರ ನಾಯಕ ಬೂಮ್ರಾ 3, ಮೊಹಮ್ಮದ್ ಶಮಿ 2, ಮೊಹಮ್ಮದ್ ಸಿರಾಜ್ 4, ಶಾರ್ದೂಲ್ ಠಾಕೂರ್ 1 ವಿಕೆಟ್ ಉರುಳಿಸಿದರು.

ನಂತರ 2ನೇ ಇನ್ನಿಂಗ್ಸ್ ಆರಂಭಿಸಿದ ಭಾರತ ಆರಂಭದಲ್ಲೇ 4 ರನ್ ಗಳಿಸಿದ್ದ ಶುಭ್‌ಮನ್ ಗಿಲ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಹನುಮ ವಿಹಾರಿ 11 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ ಬಂದ ಕೊಹ್ಲಿ ಕೇವಲ 20 ರನ್‌ಗಳಿಗೆ ಔಟಾಗುವ ಮೂಲಕ ಮತ್ತೊಮ್ಮೆ ನಿರಾಸೆ ಮೂಡಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ತಾಳ್ಮೆಯ ಆಟವಾಡಿದ ಚೇತೇಶ್ವರ್ ಪೂಜಾರ ಅರ್ಧಶತಕ ಸಿಡಿಸಿದ್ದು, 30 ರನ್ ಗಳಿಸಿರುವ ರಿಷಬ್ ಪಂತ್ ನಾಲ್ಕನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಇಂಗ್ಲೆಂಡ್ ಪರ ನಾಯಕ ಬೆನ್ ಸ್ಟೋಕ್ಸ್, ಜೇಮ್ಸ್ ಆಂಡರ್‌ಸನ್ ಹಾಗೂ ಸ್ಟುವರ್ಟ್ ಬ್ರಾಡ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಕುಶಾಲನಗರದಲ್ಲಿ ಜನತಾ ಪಕ್ಷದ ಕಚೇರಿ ಉದ್ಘಾಟನೆ

ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳು ಕಣಕ್ಕೆ

ಕುಶಾಲನಗರ, ಜು.3–ಜನತಾ ಪಕ್ಷಕ್ಕೆ ರಾಜ್ಯದಲ್ಲಿ ಉತ್ತಮ ಬೆಂಬಲ ದೊರೆಯುತ್ತಿದ್ದು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 224 ಕ್ಷೇತ್ರದಲ್ಲೂ ಸ್ಪರ್ಧೆಗೆ ಸಿದ್ಧತೆ ನಡೆಸಲಾಗುತ್ತಿದೆ ಎಂದು ಜನತಾ ಪಕ್ಷದ ರಾಜ್ಯಾಧ್ಯಕ್ಷೆ ಬಿ.ಟಿ.ಲಲಿತಾ ನಾಯಕ್ ತಿಳಿಸಿದ್ದಾರೆ.



ಪಟ್ಟಣದ ಜನತಾ ಕಾಲೋನಿಯಲ್ಲಿ ಪಕ್ಷದ ನೂತನ ಕಚೇರಿ ಉದ್ಘಾಟಿಸಿದ ಅವರು ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ಬಲವರ್ಧನೆಗಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದೇನೆ. ಹೋದ ಕಡೆಯೆಲ್ಲ ಉತ್ತಮ ಸ್ಪಂದನೆ ಹಾಗೂ ಬೆಂಬಲ ವ್ಯಕ್ತವಾಗುತ್ತಿದೆ ಎಂದರು.

ದೇಶದಲ್ಲಿ ರಾಜಕೀಯ ಪಕ್ಷಗಳಿಗೆ ಕೊರತೆಯಿಲ್ಲ. ಆದರೆ ಪ್ರಾಮಾಣಿಕ, ಜನಪರ ಹಾಗೂ ಸೇವಾ ಮನೋಭಾವವುಳ್ಳ ನಾಯಕರ ಕೊರತೆ ಇದೆ ಎಂದರು. ಬ್ರಿಟಿಷರು ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಿದರೆ ಬಿಜೆಪಿ ಸರ್ಕಾರ ಕೇಸರೀಕರಣಗೊಳಿಸಲು ಹುನ್ನಾರ ನಡೆಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಠ್ಯ ಪುಸ್ತಕ ಪರಿಷ್ಕರಣೆ ವಿರುದ್ಧ ಧ್ವನಿಯೆತ್ತಿದರೆ ಕೊಲೆ ಬೆದರಿಕೆ ಪತ್ರ ಬರುತ್ತದೆ. ಇದರ ವಿರುದ್ಧ ದೂರು ಕೂಡ ನೀಡಿದ್ದೇನೆ ಎಂದ ಅವರು, ಸಂವಿಧಾನದಲ್ಲಿ ಎಲ್ಲರಿಗೂ ಸಮಾನತೆ ಕಲ್ಪಿಸಲಾಗಿದೆ. ಆದರೆ ಅಧಿಕಾರ ನಡೆಸುತ್ತಿರುವ ಸರ್ಕಾರ ಸರ್ವಾಧಿಕಾರಿ ಧೋರಣೆಯಿಂದ ಅಧಿಕಾರ ನಡೆಸುತ್ತಿದೆ ಎಂದು ಟೀಕಿಸಿದರು.

ಸರ್ಕಾರಕ್ಕೆ ರೈತರ ಆತ್ಮಹತ್ಯೆ ಕಾಣುತ್ತಿಲ್ಲ. ಕೊರೊನಾ ಜೊತೆಗೆ ಬಡ ಜನರ ಮೇಲೆ ತೆರಿಗೆ ಹೊರೆ ಹೊರಿಸುವ ಮೂಲಕ ಅವರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದೆ. ಆರೋಗ್ಯ ಸುಧಾರಣೆಗೆ ಒತ್ತು ನೀಡಬೇಕಾದ ಸರ್ಕಾರ ಕಾಶ್ಮೀರ ಚಿತ್ರ ತೋರಿಸಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ಜಾತಿ, ಜಾತಿಗಳ ನಡುವೆ ಧರ್ಮ ಧರ್ಮ ನಡುವೆ ವಿಷ ಬೀಜ ಬಿತ್ತುವ ಹೇಯ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ರಾಜ್ಯಕ್ಕೆ ಮೋದಿ ಬಂದು ಹೋದ ನಂತರ ಕೋಟ್ಯಂತರ ರೂ. ಖರ್ಚು ಮಾಡಿ ನಿರ್ಮಿಸಿದ್ದ ರಸ್ತೆ ಸಂಪೂರ್ಣ ಹಾಳಾಗಿದೆ.ಇದು ಶೇ.40 ಕಮಿಷನ್ ಸರ್ಕಾರವಾಗಿದೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಭೂ ರಹಿತರಿಗೆ 2.5 ಎಕರೆ ಭೂಮಿ, ಶಾಲೆಗಳ ಉನ್ನತೀಕರಣ, ಪ್ರಧಾನಿಯಿಂದ ಡಿ ಗ್ರೂಪ್ ನೌಕರರ ಮಕ್ಕಳು ಸಹ ಸರ್ಕಾರಿ ಶಾಲೆಯಲ್ಲಿ ಓದಬೇಕು. ಮಹಿಳೆಯರಿಗೆ ಸ್ವ ಉದ್ಯೋಗ ಕಲ್ಪಿಸುವುದಾಗಿ ಹೇಳಿದ ಅವರು, ಅನ್ಯಾಯದ ವಿರುದ್ಧ ಹೋರಾಟ. ಗಣಿ ಸಮಸ್ಯೆ, ಗಡಿ ಪ್ರದೇಶ ಪಕ್ಷದ ಉಳಿವಿಗಾಗಿ ನಮ್ಮ ಹೋರಾಟ,ಪ್ರಯತ್ನ ನಡೆಸಲಾಗುವುದು ಎಂದರು.

ಕೊಡಗು ಜಿಲ್ಲಾಧ್ಯಕ್ಷರಾಗಿ ಅರುಣ್ ಚಂದ್ರ ನೇಮಕ

ಅಗ್ನಿಪಥ ಯೋಜನೆ ಸರಿಯಿಲ್ಲ : ನಾಲ್ಕು ವರ್ಷ ಯುವಕರನ್ನು ಸೈನಿಕರಾಗಿ ತಯಾರು ಮಾಡಿ ವಾಪಸ್ಸು ಕರೆಸಿಕೊಳ್ಳುವುದು ದುರಂತ. ಇದರಿಂದ ಯುವ ಜನಾಂಗ ಬೀದಿಪಾಲು ಮಾಡಲಾಗುತ್ತಿದೆ ಎಂದ ಅವರು ಅಗ್ನಿಪಥ ಯೋಜನೆ ಸರಿಯಿಲ್ಲ ಎಂದರು.

ನೂತನ ಅಧ್ಯಕ್ಷರ ನೇಮಕ: ಕೊಡಗು ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾಗಿ ಕುಶಾಲನಗರ ಅರುಣ್ ಚಂದ್ರ ಅವರನ್ನು ನೇಮಕ ಮಾಡಿ ರಾಜ್ಯಾಧ್ಯಕ್ಷೆ ಲಲಿತಾನಾಯಕ್ ನೇಮಕಾತಿ ಪತ್ರ ನೀಡಿದರು. ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷರಾದ ಜವರೇಗೌಡ, ಹೊನ್ನೇಗೌಡ, ಮಹಾ ಪ್ರಧಾನ ಕಾರ್ಯದರ್ಶಿ ಎನ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಟಿ.ಸಿ.ರಾಜೇಂದ್ರ, ಕವೂಪ್, ಸಂಘಟನಾ ಕಾರ್ಯದರ್ಶಿ ಶಶಿಕುಮಾರ್, ಸದಸ್ಯತ್ವ ಸಮಿತಿ ಅಧ್ಯಕ್ಷ ಪಾಲಾಕ್ಷ , ಮೈಸೂರು ಜಿಲ್ಲಾಧ್ಯಕ್ಷ ರಾಮಕೃಷ್ಣ, ಕೊಡಗು ಜಿಲ್ಲೆಯ ಅಧ್ಯಕ್ಷ ಅರುಣ್ ಚಂದ್ರ ಇದ್ದರು.

ಗುಡ್ಡೆ ಹೊಸೂರು ಬಳಿ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ತೂಗು ಸೇತುವೆ

ಗುಡ್ಡೆಹೊಸೂರು, ಜು.3– ಇಲ್ಲಿನ ತೆಪ್ಪದ ಕಂಡಿ ಎಂಬ ಸ್ಥಳದಲ್ಲಿ ನಿರ್ಮಿಸಿರುವ ತೂಗು ಸೇತುವೆಯು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಇದು ಕೊಡಗು–ಮೈಸೂರು ಜಿಲ್ಲೆಯ ಸಂಪರ್ಕ ಈ ಸೇತುವೆಯಾಗಿದ್ದು, ಮೈಸೂರು ಜಿಲ್ಲೆಯ ರಾಣಿಗೇಟ್, ಮರೂರು, ದೊಡ್ಡ ಹರವೆ, ಗೊಲ್ಡನ್‌ಟೆಂಪಲ್, ಕೊಪ್ಪ ಇನ್ನೂ ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಈ ಸೇತುವೆ ಸ್ಥಳೀಯರಿಗೆ ತುಂಬಾ ಅನುಕೂಲವಾಗಿದೆ. ಅನೇಕ ವರ್ಷಗಳಿಂದ ಇಲ್ಲಿ ಬಿದಿರಿನ ತೆಪ್ಪದ ಮೂಲಕ ಕಾವೇರಿ ತುಂಬಿ ಹರಿಯುವ ಸಂದರ್ಭದಲ್ಲಿ ಮಳೆಗಾಲದಲ್ಲಿಯೂ ಆ ಭಾಗದ ಜನರು ನದಿ ದಾಟುತ್ತಿದ್ದರು. ಆ ಭಾಗದ ಜನರು ಪಟ್ಟಪಾಡನ್ನು ಇದೀಗ ನದಿ ತುಂಬಿ ಹರಿಯುವ ಸಂದರ್ಭ ನೆನಪಿಸಿಕೊಳ್ಳಬೇಕಾಗಿದೆ. ಅಲ್ಲದೆ ತೆಪ್ಪದಲ್ಲಿ ನದಿದಾಟುವ ಸಂದರ್ಭ ಹಲವು ಅನಾಹುತಗಳು ನಡೆದುಹೋಗಿದ್ದವು.

ಡಿ.ವಿ.ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ತೂಗು ಸೇತುವೆ ನಿರ್ಮಾಣದಲ್ಲಿ ಖ್ಯಾತಿ ಪಡೆದ ಸುಳ್ಯದ ಭಾರದ್ವಜ್ ಅವರು ಉತ್ತಮ ಸೇತುವೆ ನಿರ್ಮಿಸಿದ್ದರು.



ಪ್ರವಾಸಿಗರು ದುಬಾರೆ ವೀಕ್ಷಣೆಗೆ ತೆರಳುವ ಸಂದರ್ಭ ಹೆಚ್ಚಾಗಿ ಈ ತೂಗುಸೇತುವೆ ಮೇಲೆ ನಡೆದಾಡಿ ಸಂತೋಷ ಪಡುತ್ತಾರೆ.

2018ರಲ್ಲಿ ಕಾವೇರಿ ನದಿಯ ಪ್ರವಾಹ ಸಂದರ್ಭದಲ್ಲಿ ಈ ಸೇತುವೆಯು ಮುಳುಗುವ ಭೀತಿಯಲ್ಲಿತ್ತು ಕಣಿವೆಯ ತೂಗು ಸೇತುವೆಯು ನೀರಿನ ರಭಸಕ್ಕೆ ಒಂದು ಭಾಗ ಕೊಚ್ಚಿ ಹೋಗಿದ್ದನ್ನೂ ಇಲ್ಲಿ ಸ್ಮರಿಸಬಹುದು. ಇದೀಗ ಕಾವೇರಿ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿ ಎಲ್ಲವನ್ನು ನೆನಪಿಸುವಂತಿದೆ. ಇದೀಗ ಎಷ್ಟೆ ಸೌಲಭ್ಯಗಳು ಇದ್ದರು. ಕಳೆದ ಆ ಭಯಾನಕ ದಿನಗಳನ್ನು ನೆನಪಿಸುವ ಸಂದರ್ಭ ಮರೆಯುವಂತಿಲ್ಲ.

ಶಾಂತಿಯಿಂದ ವರ್ತಿಸಿ, ನಿಷ್ಠೆಯಿಂದ ಕೆಲಸ ಮಾಡಿ: ತಹಸೀಲ್ದಾರ್ ಕರೆ



ವಿರಾಜಪೇಟೆ, ಜು.3– ಸರ್ಕಾರಿ ನೌಕರರು ಸಾರ್ವಜನಿಕರೊಂದಿಗೆ ಶಾಂತಿಯಿಂದ ವರ್ತಿಸುವ ಮೂಲಕ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು ಎಂದು ವಿರಾಜಪೇಟೆ ತಹಸೀಲ್ದಾರ್ ಆರ್.ಯೋಗನಂದ ಕರೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿರಾಜಪೇಟೆ ತಾಲೂಕು ಶಾಖೆ ವತಿಯಿಂದ ಪಟ್ಟಣದ ಗಾಂಧಿನಗರದಲ್ಲಿರುವ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಇತ್ತೀಚೆಗೆ ಸರ್ಕಾರಿ ಕೆಲಸ ಸಿಗುವುದೇ ಕಷ್ಟವಾಗಿರುವುದರಿಂದ ಸರ್ಕಾರಿ ನೌಕರರು ಇರುವ ಕೆಲಸವನ್ನು ಅಚ್ಚುಕಟ್ಟಾಗಿ ನ್ಯಾಯ–ನೀತಿಯಿಂದ ಮಾಡುವಂತಾಗಬೇಕು ಎಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಪೊನ್ನಚನ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ಸರ್ಕಾರಿ ನೌಕರರ ಅನುಕೂಲಕ್ಕಾಗಿ ಮಡಿಕೇರಿಯಲ್ಲಿ ಸಂಘದ ಕಟ್ಟಡ ಕಟ್ಟಲು ಎಲ್ಲಾ ತಯಾರಿ ನಡೆಸಲಾಗಿದ್ದು, ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಸರ್ಕಾರಿ ನೌಕರರು ಮುಂದಾಗಬೇಕು ಎಂದರು. ಸಂಘದ ವಿರಾಜಪೇಟೆ ಶಾಖೆಯ ಅಧ್ಯಕ್ಷ ಬಿ.ಎಸ್.ಗುರುರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ಕಾರಿ ನೌಕರರಿಗೆ ಕೇಂದ್ರದ ಮಾದರಿ ವೇತನ ನಿಗದಿ ಮಾಡಬೇಕಾಗಿದೆ ಎಂದರು.

ಶಿಕ್ಷಕ ಎ.ವಿ.ಮಂಜುನಾಥ್ ಸ್ವಾಗತಿಸಿದರು. ಸಂಘದ ಖಜಾಂಚಿ ಲಲಿತಾ ವಾರ್ಷಿಕ ವರದಿ ಮಂಡಿಸಿದರು, ಭಾರತಿ ನಿರೂಪಿಸಿದರೆ, ಡಾ.ಸುರೇಶ್ ವಂದಿಸಿದರು. ಮಹಾಸಭೆಯಲ್ಲಿ ಜಿಲ್ಲೆಯ ಮತ್ತು ತಾಲೂಕು ಶಾಖೆಯ ನೌಕರರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದಿಯಿಂದ ಪೌತಿ ಖಾತೆ ಆಂದೋಲನ

ಮಡಿಕೇರಿ, ಜು.3–ತಾಲೂಕು ವ್ಯಾಪ್ತಿಯಲ್ಲಿ ಹೋಬಳಿವಾರು ಪೌತಿ/ ವಾರಸುದಾರಿಕೆಯ ಖಾತೆ ಆಂದೋಲನವು ತಾಲೂಕಿನ ವಿವಿಧ ದಿನದಂದು ವಿವಿಧ ಕಡೆಗಳಲ್ಲಿ ನಡೆಯಲಿದೆ ಎಂದು ತಹಶೀಲ್ದಾರ್ ಪಿ.ಎಸ್. ಮಹೇಶ್ ತಿಳಿಸಿದ್ದಾರೆ. ಜು.4 ರಂದು ಭಾಗಮಂಡಲ, ಜು.7 ರಂದು ನಾಪೋಕ್ಲು, ಜು.11 ರಂದು ಸಂಪಾಜೆ ಮತ್ತು ಜು.14 ರಂದು ಮಡಿಕೇರಿಯಲ್ಲಿ ಪೌತಿ ಖಾತೆ ಆಂದೋಲನ ನಡೆಯಲಿದೆ.

ಬೇಕಾದ ದಾಖಲೆಗಳು: ಖಾತೆದಾರರ ಮರಣ ದೃಢೀಕರಣ ಪತ್ರ ಮರಣ ದೃಢೀಕರಣ ಪತ್ರ ಲಭ್ಯ ಇಲ್ಲದಿದ್ದಲ್ಲಿ ಆಧಾರ್ ಮತ್ತು ಪಡಿತರ ಚೀಟಿ ದಾಖಲೆಯನ್ನು ಸಂಬಂಧಪಟ್ಟ ವಾರಸುದಾರರಿಂದ ಅಫಿಡವಿಟ್ ಪಡೆದುಕೊಳ್ಳುವುದು, ಆರ್‌ಡಿ ಸಂಖ್ಯೆಯುಳ್ಳ ವಂಶವೃಕ್ಷ ದೃಢೀಕರಣ ಪತ್ರ, ಚಾಲ್ತಿ ಸಾಲಿನ ಪಹಣಿ ಹಾಗೆಯೇ ಚಾಲ್ತಿ ಸಾಲಿನ ಪಹಣಿ ಕಾಲಂ 10ರಲ್ಲಿ ದಾಖಲಿರುವ ಮ್ಯೂಟೇಷನ್ ಪ್ರತಿ/ ಜಮಾಬಂಧಿ ಹಾಗೂ ಆಧಾರ್ ಪ್ರತಿ ಮತ್ತು ದೂ.ಸಂಖ್ಯೆಯನ್ನು ಸಲ್ಲಿಸಬೇಕು ಎಂದು ತಹಶೀಲ್ದಾರರು ತಿಳಿಸಿದ್ದಾರೆ.

ಪೌತಿ ವಾರಸುದಾರಿಕೆಯ ಖಾತೆ ಸಂಬಂಧ ದಾಖಲಾತಿಗಳೊಂದಿಗೆ ನಮೂನೆ–1 ರಲ್ಲಿ ಮನವಿ ಸಲ್ಲಿಸಬಹುದು ಎಂದು ತಹಶೀಲ್ದಾರರು ತಿಳಿಸಿದ್ದಾರೆ.

ಅಕ್ರಮ ತಡಸಲು ಮರದ ನಾಟಾ ಸಾಗಾಟ: ಮಾಲು ವಶ

ಕುಶಾಲನಗರ, ಜು.3–ಅಕ್ರಮವಾಗಿ ತಡಸಲು ಮರದ ನಾಟಾಗಳನ್ನು ಸಾಗಾಟ ಮಾಡುತ್ತಿದ್ದ ಸಂದರ್ಭ ಅರಣ್ಯ ಸಿಬ್ಬಂದಿಗಳು ದಾಳಿ ನಡೆಸಿ ಮಾಲು ಸಮೇತ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ದೊಡ್ಡ ಬೆಟ್ಟಗೇರಿ ದೇವಸ್ಥಾನದ ಹತ್ತಿರ ಶುಕ್ರವಾರ ರಾತ್ರಿ ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ಸಿದ್ದಾಪುರ ಕಡೆಯಿಂದ ಪಿಕ್ ಆಪ್ ವಾಹನದಲ್ಲಿ ಕಪ್ಪು ಟಾರ್ಪಲ್ ಮುಚ್ಚಿಕೊಂಡು ತಡಸಲು ಮರದ ನಾಟಾಗಳನ್ನು ಸಾಗಿಸುತ್ತಿರುವುದನ್ನು ಪತ್ತೆ ಹಚ್ಚಲಾಗಿದೆ. ವಾಹನ ಚಾಲಕನ ಬಳಿ ಸೊತ್ತುಗಳನ್ನು ಸಾಗಿಸಲು ಇಲಾಖಾ ಅನುಮತಿ



ಪತ್ರ ಕೇಳಿದಾಗ, ಅನುಮತಿ ಪತ್ರ ಇಲ್ಲವೆಂದು ಚಾಲಕ ತ್ಯಾಗತ್ತೂರು ಗ್ರಾಮದ ಟಿ.ಎಂ.ಅಬ್ದುಲ್ ಸಮದ್ ಹೇಳಿದ್ದಾನೆ.

ಈತನ ಹೇಳಿಕೆ ಮೇರೆಗೆ ಅಕ್ರಮವಾಗಿ ಸೊತ್ತುಗಳನ್ನು ಸಾಗಾಟ ಮಾಡುತ್ತಿದ್ದ ಸಂಬಂಧ ಕುಶಾಲನಗರ ವಲಯ ಅರಣ್ಯ ಇಲಾಖೆ ಮೊಕದ್ದಮೆ ದಾಖಲಿಸಿಕೊಂಡು ಪಿಕ್ ಆಪ್ ವಾಹನ ಹಾಗೂ ಮೂರು ತಡಸಲು ನಾಟಗಳನ್ನು ವಶ ಪಡಿಸಿಕೊಳ್ಳಲಾಗಿದ್ದು, ಇವುಗಳ ಒಟ್ಟು ಮೌಲ್ಯ ಅಂದಾಜು ರೂ.5 ಲಕ್ಷ ಎಂದು ಅಂದಾಜಿಸಲಾಗಿದೆ.

ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ ಹಾಗೂ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ.ಎಸ್.ಚಂಗಪ್ಪ ಮಾರ್ಗ ದರ್ಶನದಲ್ಲಿ ಕುಶಾಲನಗರ ವಲಯ ಅರಣ್ಯಾಧಿಕಾರಿ ಕೆ.ವಿ.ಶಿವರಾಮ್,ಉಪವಲಯ ಅರಣ್ಯಾಧಿಕಾರಿಗಳಾದ ಕೆ.ಎನ್.ದೇವಯ್ಯ,ಅರಣ್ಯ ರಕ್ಷಕ ಸಿದ್ದರಾಜು ನಾಟಿಕಾರ್,ವಾಹನ ಚಾಲಕ ನಾರಾಯಣ ರೈ, ಅರಣ್ಯ ವೀಕ್ಷಕ ಎಂ.ಎನ್.ಮೇದಪ್ಪ ಹಾಗೂ ಆರ್‌ಆರ್‌ಟಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಗಾಳಿ, ಮಳೆಗೆ ಮರ ಬಿದ್ದು ಸಂಚಾರ ಅಸ್ತವ್ಯಸ್ತ

ಕಾರು ಚಾಲಕನ ಸಮಯ ಪ್ರಜ್ಞೆಯಿಂದ ತಪ್ಪಿದ ಅನಾಹುತ

ಗೋಣಿಕೊಪ್ಪ, ಜು.3– ಗಾಳಿ, ಮಳೆಗೆ ಗೋಣಿಕೊಪ್ಪ–ತಿತಿಮತಿ ಮುಖ್ಯರಸ್ತೆಯಲ್ಲಿ



ಮರ ಬಿದ್ದು ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತ ಗೊಂಡು ಸಾರ್ವಜನಿಕರು ಪರದಾಡಬೇಕಾಯಿತ್ತಲ್ಲದೆ ಚಾಲಕನ ಸಮಯ ಪ್ರಜ್ಞೆಯಿಂದ ಅನಾಹುತವೊಂದು ತಪ್ಪಿದೆ.

ಸ್ಥಳೀಯರು ಮರ ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ವಿದ್ಯುತ್ ತಂತಿ ಮೇಲೆ ಮರ ಬಿದ್ದ ಕಾರಣ, ಸೆಸ್ಕ್ ವತಿಯಿಂದ ದುರಸ್ತಿ ಗೊಳಿಸಲಾಯಿತು. ಈ ವೇಳೆ ಅದೇ ರಸ್ತೆಯಲ್ಲಿ ಬಂದ ಕಾರಿನ ಚಾಲಕ ಕಾರಿನ ಮೇಲೆ ಮರ ಬೀಳುವುದನ್ನು ಕಂಡು ತನ್ನ ಸಮಯ ಪ್ರಜ್ಞೆಯಿಂದ ಕಾರನ್ನು ಹಿಂದಕ್ಕೆ ಚಲಾಯಿಸಿ ಅನಾಹುತ ತಪ್ಪಿಸಿದ್ದಾರೆ. ಆದರೂ ಕಾರಿನ ಮುಂಭಾಗ ಜಖಂಗೊಂಡಿದೆ.

ಚೆಂಬು ಗ್ರಾಮದಲ್ಲಿ ನಿರಂತರ ಮಳೆ

ಕಿಂಡಿ ಅಣೆಕಟ್ಟೆಯಲ್ಲಿ ಸಿಲುಕಿಕೊಂಡಿದ್ದ ಮರಗಳ ತೆರವು

ಮಡಿಕೇರಿ,ಜು.3– ಮಡಿಕೇರಿ ತಾಲೂಕಿನ ಚೆಂಬು ಗ್ರಾಮದಲ್ಲಿ ಕಳೆದ ಎರಡು ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ನಿರಂತರ ಮಳೆಯಿಂದ ಮರಗಳು



ಧರೆಗುರುಳಿವೆ. ಹಲವು ಮರಗಳು ನೀರಿನಲ್ಲಿ ಕೊಚ್ಚಿ ಬಂದು ಕಿಂಡಿ ಅಣೆಕಟ್ಟೆಗೆ ಅಡ್ಡಲಾಗಿ ಸಂಗ್ರಹವಾಗುತ್ತಿತ್ತು. ಇದರಿಂದ ಆಗಬಹುದಾದ ಅನಾಹುತವನ್ನು ತಪ್ಪಿಸಲು ಚೆಂಬು ಗ್ರಾಪಂ ಸದಸ್ಯ ನಡುಮನೆ ವಸಂತ ಊರುಬೈಲು ಅವರ ನೇತೃತ್ವದಲ್ಲಿ ಗ್ರಾಮಸ್ಥರು ಶ್ರಮದಾನದ ಮೂಲಕ ಮರಗಳನ್ನು ತೆರವುಗೊಳಿಸಿದರು. ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತ ವೇದಿಕೆಯ ಕೊಡಗು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಜಿತ್ ಪಾಲ್ತಾಡು ಮತ್ತಿತರ ಪ್ರಮುಖರು ಹಾಜರಿದ್ದರು.

ಜಿಂಕೆ ಬೇಟೆಗಾರರ ಬಂಧನ



ಹನೂರು, ಜು.3(ಸೋಮು)–ಜಿಂಕೆ ಬೇಟೆಯಾಡಿ ಅದರ ಮಾಂಸ ಮಾರುತ್ತಿದ್ದ 5 ಮಂದಿ ಬೇಟೆಗಾರರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ, ಇವರಿಂದ ನಾಡ ಬಂದೂಕು ಮತ್ತು ಮಾಂಸವನ್ನು ವಶಪಡಿಸಿಕೊಂಡಿದ್ದಾರೆ. ತಾಲೂಕಿನ ಕಾಂಚಳ್ಳಿ ಗ್ರಾಮದ ಜಡೆಸ್ವಾಮಿ, ಅಜ್ಜೀಪುರದ ಕೃಷ್ಣೇಗೌಡ, ಕೆ.ಗುಂಡಾಪುರ ಗ್ರಾಮದ ಕದರಯ್ಯ, ಸನಾವುಲ್ಲಾ, ತೌಸೀಫ್ ಬಂಧಿತರು. ಮತ್ತೋರ್ವ ಆರೋಪಿ ಗುಳ್ಯ ಗ್ರಾಮದ ನಾರಾಯಣ ತಲೆ ಮರೆಸಿಕೊಂಡಿದ್ದು, ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ವಿವರ: ಕೆ.ಗುಂಡಾಪುರ ಗ್ರಾಮದ ನಿವಾಸಿ ಕದರಯ್ಯ, ಸೊಳ್ಳೇರಿಪಾಳ್ಯ ಗ್ರಾಮದ ಸರ್ವೇ ನಂ.464/3 ತೋಟದ ಮನೆಯಲ್ಲಿ ಜಿಂಕೆ ಬೇಟೆಯಾಡಿ ಅದರ ಮಾಂಸವನ್ನು ಕತ್ತರಿಸಿ ಮಾರುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಮಲೆ ಮಹದೇಶ್ವರಸ್ವಾಮಿ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಏಡುಕೊಂಡಲು ಮಾರ್ಗದರ್ಶನ ಹಾಗೂ ಹನೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಭಾಗ್ಯಲಕ್ಷ್ಮಿ ನೇತೃತ್ವದಲ್ಲಿ ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ ಸೈಯದ್‌ಸಾಬ್ ನದಾಫ್, ಸಿಬ್ಬಂದಿ ದಾಳಿ ನಡೆಸಿ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಉಪವಲಯ ಅರಣ್ಯಾಧಿಕಾರಿ ಆರ್.ಸಾಲನ್, ಕೆ.ಪ್ರಸಾದ್, ಅರಣ್ಯರಕ್ಷಕ ನಂದೀಶ್, ಪರಶುರಾಮ, ಅರಣ್ಯವೀಕ್ಷಕ ಗಣೇಶ್, ಪಚ್ಚೇಗೌಡ, ಶಿವರಾಜು, ಕೃಷ್ಣ, ಚಾಲಕ ಮುಕುಂದ ವರ್ಮಾ, ರಾಜೇಶ್ ಹಾಗೂ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಟ್ರ್ಯಾಕ್ಟರ್ ಮಗುಚಿ ಕಾರ್ಮಿಕ ಸಾವು

ಬೇಗೂರು, ಜು.3–ಟ್ರ್ಯಾಕ್ಟರ್ ಮಗುಚಿ ಕಾರ್ಮಿಕ ಸಾವನ್ನಪ್ಪಿದ ಘಟನೆ ಕಬ್ಬಹಳ್ಳಿ–ತೆರಕಣಾಂಬಿ ರಸ್ತೆಯಲ್ಲಿ ಸಂಭವಿಸಿದೆ. ಚಾಮರಾಜನಗರ ತಾಲೂಕು ಲಿಂಗಾಪುರ ಗ್ರಾಮದ ಮಾದೇಗೌಡ ಎಂಬುವರ ಪುತ್ರ ಮಹೇಶ್ ಎಂಬಾತ ಅಪಘಾತದಲ್ಲಿ ಮೃತಪಟ್ಟವರು. ಈ ಅಪಘಾತದಲ್ಲಿ ಅದೇ ಗ್ರಾಮದ ಲಿಂಗೇಗೌಡ ಎಂಬುವರ ಪುತ್ರ ಮಹೇಶ್ ಗಾಯಗೊಂಡಿದ್ದಾನೆ.

ಜೂ.30ರಂದು ಸಂಜೆ ರವಿ ಎಂಬುವರಿಗೆ ಸೇರಿದ ಟ್ರ್ಯಾಕ್ಟರ್ (ಕೆಎ 10 ಟಿ 9947)ನಲ್ಲಿ ಹಳೇ ಮರಗಳನ್ನು ತುಂಬಿಕೊಂಡು ಸೋಮನಹಳ್ಳಿಯಿಂದ ಲಿಂಗಾಪುರಕ್ಕೆ ತೆರಳುತ್ತಿದ್ದಾಗ ಕಬ್ಬಹಳ್ಳಿ–ತೆರಕಣಾಂಬಿ ರಸ್ತೆಯಲ್ಲಿ ರವಿ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ಮಗುಚಿ ಬಿದ್ದಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ಮಾಲೇಗೌಡರ ಪುತ್ರ ಮಹೇಶ್‌ನಿಗೆ ಕಬ್ಬಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರ ಸಲಹೆ ಮೇರೆಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮಹೇಶ, ಚಿಕಿತ್ಸೆ ಫಲಕಾರಿಯಾಗದೆ ಜೂ.1ರಂದು ಮುಂಜಾನೆ ಮೃತಪಟ್ಟಿದ್ದಾನೆ. ಈ ಸಂಬಂಧ ಟ್ರ್ಯಾಕ್ಟರ್ ಚಾಲನೆ ಮಾಡುತ್ತಿದ್ದ ರವಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಬೇಗೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ; ಐವರಿಗೆ ಗಾಯ

ಬೇಗೂರು, ಜು.3(ಕಿರಣ್)–ಕಾರು–ಬೈಕ್ ಡಿಕ್ಕಿ ಸಂಭವಿಸಿ ಐವರು ಗಾಯಗೊಂಡು, ಸಾಕುನಾಯಿ ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಗರಗನಹಳ್ಳಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ –766ರಲ್ಲಿ ಭಾನುವಾರ ನಡೆದಿದೆ.

ಕೇರಳದ ತ್ರೀಚೂರಿನ ನಿವಾಸಿಗಳಾದ ಅದ್ವೈತ್ ಪ್ರದೀಪ್(28), ಲಾರೆಕ್ಸ್(25) ತೀವ್ರವಾಗಿ ಗಾಯಗೊಂಡ ಬೈಕ್ ಸವಾರರಾಗಿದ್ದು, ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಇವರು ಮೈಸೂರಿನಿಂದ ಕೇರಳಕ್ಕೆ ತಮ್ಮ ಬೈಕ್(ಕೆಎಲ್08 ಬಿವೈ 4075)ನಲ್ಲಿ ತೆರಳುತ್ತಿದ್ದರು. ಇದೇ ವೇಳೆ ಕೇರಳದ ವೈನಾಡಿನಿಂದ ಮೈಸೂರಿನತ್ತ ಬರುತ್ತಿದ್ದ ಕಾರು(ಕೆಎಲ್12, ಎನ್9293) ಗರಗನಹಳ್ಳಿ ಗೇಟ್ ಬಳಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ವೈನಾಡು ಮೂಲದ ಮೂವರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಇವರೊಂದಿಗಿದ್ದ ಸಾಕುನಾಯಿ ಅಸುನೀಗಿದೆ. ಬೈಕ್ ಸವಾರ ಅದ್ವೈತ್ ಪ್ರದೀಪ್‌ನ ಸ್ಥಿತಿ ಚಿಂತಾಜನಕವಾಗಿದೆ. ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾ.ನಗರ ಎಪಿಎಂಸಿ ಗದ್ದುಗೆಗೆ ಇಂದು ಚುನಾವಣೆ

• ಅಧಿಕಾರ ಹಿಡಿಯಲು ತುದಿಗಾಲಲ್ಲಿ ನಿಂತಿರುವ ಬಿಜೆಪಿ • ಕಾಂಗ್ರೆಸ್‌ನಿಂದಲೂ ಶತಪ್ರಯತ್ನ, ಪಕ್ಷೇತರ ನಿರ್ಣಾಯಕ

ಚಾಮರಾಜನಗರ, ಜು.3(ಎಸ್‌ಎಸ್)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಿಗೆ ನಾಳೆ(ಜು.4) ಚುನಾವಣೆ ನಡೆಯಲಿದ್ದು, ಅಧಿಕಾರದ ಗದ್ದುಗೆ ಹಿಡಿಯಲು ಬಿಜೆಪಿ ತುದಿಗಾಲಿನಲ್ಲಿ ನಿಂತಿದೆ. ಅದಕ್ಕೆ ತಡೆಯೊಡ್ಡಲು ಕಾಂಗ್ರೆಸ್ ಸಹ ತನ್ನ ಪ್ರಯತ್ನ ಮುಂದುವರೆಸಿದೆ.

ಸೋಮವಾರ ಮಧ್ಯಾಹ್ನ 2.30ಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಚುನಾಯಿತರಾಗಿರುವ 12 ಮಂದಿ ನಿರ್ದೇಶಕರು, ಮೂವರು ಸರ್ಕಾರದ ನಾಮನಿರ್ದೇಶನ ಸದಸ್ಯರು ಹಾಗೂ ಓರ್ವ ತೆಂಗು ಬೆಳೆಗಾರರ ಸಂಘದ ಪ್ರತಿನಿಧಿ ಸೇರಿದಂತೆ ಒಟ್ಟು 16 ಮಂದಿಗೆ ಮತದಾನ ಮಾಡುವ ಹಕ್ಕು ಇದೆ. ಈ ಪೈಕಿ ಬಿಜೆಪಿ ತನ್ನ ಚುನಾಯಿತ 4 ನಿರ್ದೇಶಕರು, ತೆಂಗುಬೆಳೆಗಾರರ ಸಂಘದ ಪ್ರತಿನಿಧಿಯಾಗಿರುವ ಹಾಗೂ ಪಕ್ಷದಲ್ಲಿ ಗುರುತಿಸಿಕೊಂಡಿರುವ ಅರಕಲವಾಡಿ ಲಿಂಗಪ್ಪ ಅವರ ಮತ ಹಾಗೂ ವರ್ತಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿರುವ ವೆಂಕಟರಾವ್(ಒಟ್ಟು 9 ಮತಗಳು) ಅವರ ಮತಗಳಿಂದ ಗೆಲುವು ಸಾಧಿಸುವ ವಿಶ್ವಾಸ ಹೊಂದಿದೆ. ಕಾಂಗ್ರೆಸ್ ಮುಖಂಡರೂ ಸಹ ಪಕ್ಷದ ಚುನಾಯಿತ 7 ಸದಸ್ಯರ ಜೊತೆಗೆ ವರ್ತಕರ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿರುವ 1 ಮತವನ್ನು ನೆಚ್ಚಿಕೊಂಡಿದೆ. ಹೀಗಾದರೆ ನಮಗೂ (ಕಾಂಗ್ರೆಸ್) ಬಿಜೆಪಿ



ಗೂ ಸಮಬಲ ಬರುತ್ತದೆ ಆಗ ಲಾಟರಿ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಅದೃಷ್ಟ ಒಲಿಯಬಹುದು ಎಂಬ ಆಶಾಭಾವನೆಯಲ್ಲಿ ಕಾಂಗ್ರೆಸ್ ಮುಖಂಡರಿದ್ದಾರೆ. ವರ್ತಕರ ಕ್ಷೇತ್ರದಿಂದ ಪಕ್ಷೇತರರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವ ಸಾಧಿಸಿರುವ ವೆಂಕಟರಾವ್ ಅವರು ತೆಗೆದುಕೊಳ್ಳುವ ನಿರ್ಧಾರ ಮೇಲೆ ಬಿಜೆಪಿ ಮತ್ತು ಕಾಂಗ್ರೆಸ್ ಅಧಿಕಾರ ಹಿಡಿಯುವುದು ನಿರ್ಧಾರವಾಗಲಿದೆ. ಮೂಲಗಳ ಪ್ರಕಾರ ವೆಂಕಟರಾವ್ ಬಿಜೆಪಿ ಬೆಂಬಲಿಸಲು ತೀರ್ಮಾನಿಸಿದ್ದಾರೆ ಎಂದು ತಿಳಿದು ಬಂದಿದೆ. ಹೀಗಾಗಿ ಬಿಜೆಪಿ ಮುಖಂಡರು ಎಪಿಎಂಸಿ ಗಾದಿ ಹಿಡಿಯಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಮನೋಜ್ ಪಾಟೀಲ್ ಅಭ್ಯರ್ಥಿ: ಬಿಜೆಪಿಯಿಂದ ಅಧ್ಯಕ್ಷ ಸ್ಥಾನಕ್ಕೆ ಚಾಮರಾಜನಗರ ಕ್ಷೇತ್ರದಿಂದ ಗೆಲುವು ಸಾಧಿಸಿರುವ ಜಿಪಂ ಮಾಜಿ ಸದಸ್ಯ ದಿ.ಕೆ.ಪಿ.ಮಹದೇವಸ್ವಾಮಿ ಅವರ ಪುತ್ರ ಹಾಗೂ ನಗರಸಭಾ ಸದಸ್ಯರೂ ಆಗಿರುವ ಮನೋಜ್ ಪಾಟೀಲ್ ಅವರನ್ನು ಆಯ್ಕೆ ಮಾಡಿದೆ. ಉಪಾಧ್ಯಕ್ಷ ಸ್ಥಾನಕ್ಕೆ ಉಮ್ಮತ್ತೂರು ಕ್ಷೇತ್ರದಿಂದ ಗೆದ್ದಿರುವ ಕಲಾವತಿ ಅವರನ್ನು ಆಯ್ಕೆ ಮಾಡಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಧ್ಯಕ್ಷ ಸ್ಥಾನದ 60 ತಿಂಗಳ ಅಧಿಕಾರವನ್ನು ಮನೋಜ್ ಪಾಟೀಲ್, ರವಿಕುಮಾರ್ ಹಾಗೂ ಮಹದೇವಪ್ರಸಾದ್ ಅವರಿಗೆ ತಲಾ 20 ತಿಂಗಳು ಹಂಚಿಕೆ ಮಾಡಲಾಗಿದೆ ಎಂದು ಅವರು ತಿಳಿಸಿದರು.



ಮನೋಜ್‌ಪಾಟೀಲ್



ಕಲಾವತಿ



ಮಹದೇವಪ್ರಸಾದ್



ರವಿಕುಮಾರ್

ನಾಮ ನಿರ್ದೇಶಿತ ಸದಸ್ಯರಿವರು

ಚಾಮರಾಜನಗರ ಎಪಿಎಂಸಿಗೆ ಸರ್ಕಾರ ಮೂವರನ್ನು ನಾಮನಿರ್ದೇಶಿತ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ತಾವರಕಟ್ಟೆ ಮೋಳೆ ಗ್ರಾಮದ ಮಹೇಶ, ಯಳಂದೂರಿನ ಶಿವಕುಮಾರ್ ಹಾಗೂ ಕೆಂಗಾಡಿ ಗ್ರಾಮದ ಪ್ರೇಮ ಅವರನ್ನು ನೂತನ ನಾಮನಿರ್ದೇಶಿತ ಸದಸ್ಯರನ್ನಾಗಿಸಿದೆ.

ಮಹದೇವಸ್ವಾಮಿ ಆಯ್ಕೆ: ಕಾಂಗ್ರೆಸ್ ಎಪಿಎಂಸಿ ಅಧ್ಯಕ್ಷ ಸ್ಥಾನಕ್ಕೆ ತನ್ನ ಅಭ್ಯರ್ಥಿಯಾಗಿ ಹರದನಹಳ್ಳಿ ಕ್ಷೇತ್ರದಿಂದ ಗೆಲುವು ಸಾಧಿಸಿರುವ ಹೆಚ್.ಎಸ್.ಮಹದೇವಸ್ವಾಮಿ ಉ.ಸೋಮೇಶ್ ಅವರನ್ನು ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಯಳಂದೂರು ತಾಲೂಕಿನ ಅಗರ ಕ್ಷೇತ್ರದಿಂದ ಗೆದ್ದಿರುವ ಎಲ್.ರಾಮಚಂದ್ರ ಅವರನ್ನು ಆಯ್ಕೆ ಖಚಿತ ಎಂದು ತಿಳಿದು ಬಂದಿದೆ.

ಮಾವ–ಅಳಿಯ ನಡುವೆ ಸ್ಪರ್ಧೆ: ಎಪಿಎಂಸಿ ಅಧ್ಯಕ್ಷ ಗಾದೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲಿರುವ ವಿ.ಸಿ.ಹೊಸೂರು ಗ್ರಾಮದ ಮಹದೇವಸ್ವಾಮಿ(ಸೋಮೇಶ್) ಹಾಗೂ ಬಿಜೆಪಿಯಿಂದ ಸ್ಪರ್ಧಿಸುತ್ತಿರುವ ಕರಿನಂಜನಪುರದ ಮನೋಜ್ ಪಟೇಲ್ ಸಂಬಂಧದಲ್ಲಿ ಮಾವ–ಅಳಿಯ ಆಗಿದ್ದು, ಇಬ್ಬರೂ ಸಹೋದರ ಸಂಬಂಧಿಗಳು, ಖುರ್ಚಿಗಾಗಿ ಇವರಿಬ್ಬರ ನಡುವೆ ಸ್ಪರ್ಧೆ ಏರ್ಪಟ್ಟಿರುವುದು ರಾಜಕೀಯ ವಲಯದಲ್ಲಿ ಚರ್ಚೆಯ ವಿಷಯವಾಗಿದೆ.

ಕಾಂಗ್ರೆಸ್‌ನಿಂದ ಪ್ರತಿ ಜಿಲ್ಲೆಗೂ ಪ್ರಣಾಳಿಕೆ; ಆರ್.ಧ್ರುವನಾರಾಯಣ್



ಚಾಮರಾಜನಗರ, ಜು.3(ಎಸ್‌ಎಸ್)– ಮುಂಬರುವ ತಾಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಹಾಗೂ ವಿಧಾನಸಭಾ ಚುನಾವಣೆಗಳಿಗಾಗಿ ಪಕ್ಷವನ್ನು ಮತ್ತಷ್ಟು ಸಂಘಟಿಸುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲೂ ಸಹ ಕೆಪಿಸಿಸಿಯಿಂದ ನವ ಸಂಕಲ್ಪ ಚಿಂತನಾ ಶಿಬಿರ ನಡೆಸಲಾಗುತ್ತಿದೆ. ಜಿಲ್ಲೆಗಳಿಗೆ ಪ್ರತ್ಯೇಕ ಪ್ರಣಾಳಿಕೆ ಸಿದ್ಧಪಡಿಸಿ ಚುನಾವಣೆ ಎದುರಿಸಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ನಗರ ಮಾಂಗಲ್ಯ ಕಲ್ಯಾಣ ಮಂದಿರದಲ್ಲಿ ನಡೆದ ನವ ಸಂಕಲ್ಪ ಚಿಂತನಾ ಶಿಬಿರದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕೆಪಿಸಿಸಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ನವ ಸಂಕಲ್ಪ ಚಿಂತನಾ ಶಿಬಿರ ಹಮ್ಮಿಕೊಳ್ಳಲಾಗಿದೆ. ನನಗೆ 9 ಜಿಲ್ಲೆಗಳ ಉಸ್ತುವಾರಿ ನೀಡಲಾಗಿತ್ತು. ಇದರಲ್ಲಿ ಈಗಾಗಲೇ 7 ಜಿಲ್ಲೆಗಳಲ್ಲಿ ಶಿಬಿರವನ್ನು ನಡೆಸಲಾಗಿದೆ. ನಗರದಲ್ಲಿ ನಡೆಯುತ್ತಿರುವ ಶಿಬಿರ 8ನೇಯದು. ಮತ್ತೊಂದು ಶಿಬಿರ ಹಾಸನದಲ್ಲಿ ನಡೆಯಲಿದೆ ಎಂದರು.

ಮುಂಬರುವ ತಾಪಂ, ಜಿಪಂ ಹಾಗೂ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಈ ಶಿಬಿರವನ್ನು ನಡೆಸಲಾಗುತ್ತಿದೆ. ಆಯಾ ಜಿಲ್ಲೆಗಳಿಗೆ ಪ್ರತ್ಯೇಕ ಪ್ರಣಾಳಿಕೆಯನ್ನು ತಯಾರಿಸಲಾಗುವುದು. ನಂತರ ಎಲ್ಲಾ ಜಿಲ್ಲೆಗಳ ಪ್ರಣಾಳಿಕೆಯ ಮುಖ್ಯ ಅಂಶಗಳನ್ನು ಕ್ರೋಢೀಕರಿಸಿ, ಜನರ ಆಶಯಗಳಿಗೆ ತಕ್ಕಂತೆ ರಾಜ್ಯ ಮಟ್ಟದ ಪ್ರಣಾಳಿಕೆ ಹೊರ ತರಲಾಗುವುದು ಎಂದು ಧ್ರುವನಾರಾಯಣ್ ತಿಳಿಸಿದರು.

2023ರ ಚುನಾವಣೆಯಲ್ಲಿ ರಾಜ್ಯದಲ್ಲಿ 100ಕ್ಕೆ 100ರಷ್ಟು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಸಚಿವ ಹಾಗೂ ಶಿಬಿರದ ಜಿಲ್ಲಾ ಉಸ್ತುವಾರಿ ಚಲುವನಾರಾಯಣಸ್ವಾಮಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನಾಗೇಂದ್ರ, ಮಾಜಿ ಸಚಿವ ಡಾ.ಗೀತಾ ಮಹದೇವಪ್ರಸಾದ್, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜು, ಎಸ್.ಜಯಣ್ಣ, ಶಿಬಿರದ ಜಿಲ್ಲಾ ಉಸ್ತುವಾರಿಗಳಾದ ಹೆಚ್.ಸಿ.ಬಸವರಾಜು, ಮಂಜುಳ ಮಾನಸ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಪಿ.ಮರಿಸ್ವಾಮಿ ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಭಗೀರಥ ಜಯಂತ್ಯೋತ್ಸವ



ಗುಂಡ್ಲುಪೇಟೆ, ಜು.3(ಸೋಮ್.ಜಿ)– ಶಿಕ್ಷಣದಿಂದ ಮಾತ್ರ ಉಪ್ಪಾರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ದೇವರಾಜ ಅರಸು ಕ್ರೀಡಾಂಗಣದಲ್ಲಿ ತಾಲೂಕು ಭಗೀರಥ ಜಯಂತಿ ಸಮಿತಿ, ತಾಲೂಕು ಭಗೀರಥ ಉಪ್ಪಾರ ಸಂಘ, ಉಪ್ಪಾರ ಜನ ಜಾಗೃತಿ ಯುವ ವೇದಿಕೆಯಿಂದ ಆಯೋಜಿಸಿದ್ದ ಭಗೀರಥ ಜಯಂತ್ಯೋತ್ಸವ ಉದ್ಘಾಟಿಸಿ ಮಾತನಾಡಿದರು. ಯಾವುದೇ ಒಂದು ಸಮುದಾಯವು ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಇಂತಹ ಕಾರ್ಯಕ್ರಮದಲ್ಲಿ ತಮ್ಮ ಸಮುದಾಯದ ಒಗ್ಗಟ್ಟು ಕಾಣುತ್ತದೆ. ಇದು ಎಲ್ಲರಿಗೂ ಸಂತಸ ತರುವ ವಿಚಾರ ಆದ್ದರಿಂದ ಉಪ್ಪಾರ ಸಮುದಾಯದವರು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಂ.ಪುಟ್ಟರಂಗಶೆಟ್ಟಿ ಮಾತನಾಡಿದರು.

ಅದ್ಧೂರಿ ಮೆರವಣಿಗೆ: ಭಗೀರಥ ಜಯಂತ್ಯೋತ್ಸವದ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಗೀರಥ ಮಹರ್ಷಿಯ ಭಾವಚಿತ್ರ ಹೊತ್ತ ಬೆಳ್ಳಿರಥ ಮತ್ತು ವಿವಿಧ ಕಲಾ ತಂಡಗಳ ಮೆರವಣಿಗೆ ಅದ್ಧೂರಿಯಾಗಿ ನೆರವೇರಿತು.

ಸಮಾರಂಭದಲ್ಲಿ ಹೊಸದುರ್ಗ ಭಗೀರಥ ಮಠದ ಪೀಠಾಧ್ಯಕ್ಷ ಪುರುಶೋತ್ತಮಾನಂದಪುರಿ ಸ್ವಾಮೀಜಿ, ಸರಗೂರು ಅಯ್ಯನ ಮಠದ ಮಹದೇವಸ್ವಾಮೀಜಿ ಸೇರಿದಂತೆ ಉಪ್ಪಾರ ಸಮುದಾಯದ ಯಜಮಾನರು, ಮುಖಂಡರು, ಯುವಕರು ಮತ್ತು ತಾಲೂಕಿನ ವಿವಿಧ ಗ್ರಾಮಗಳ ಉಪ್ಪಾರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಪಕ್ಷ ತಲುಪಬೇಕು

ಅಜೆಂಗಢ ಮತ್ತು ರಾಂಪುರ ಲೋಕಸಭಾ ಉಪ ಚುನಾವಣೆಗಳಲ್ಲಿ ಪಕ್ಷ ಗೆಲುವು ಸಾಧಿಸಿದ್ದನ್ನು ಮೋದಿ ಉಲ್ಲೇಖಿಸಿದರು ಎಂದು ಹೇಳಲಾಗಿದ್ದು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪಸ್ಮಾಂಡ ಮುಸ್ಲೀಮರಂತಹ ಸಮುದಾಯಗಳನ್ನು ತಲುಪಲು ಪ್ರಧಾನಿ ಪಕ್ಷಕ್ಕೆ ನೀಡಿದ ಸಂದೇಶ ಇದಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ. ಕೇರಳಾದಲ್ಲಿ ಅಲ್ಪಸಂಖ್ಯಾತ ಕ್ರಿಶ್ಚಿಯನ್ ಸಮುದಾಯದ ಒಲವನ್ನು ಗಳಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದ್ದಾರೆ ಎನ್ನಲಾಗಿದ್ದು, ರಾಜಕೀಯ ನಿರ್ಣಯದ ಮೇಲಿನ ಚರ್ಚೆಯ ವೇಳೆ ಮೋದಿ ಹಲವಾರು ಸಲಹೆಗಳನ್ನು ನೀಡಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಬಿಸ್ವಾ ಶರ್ಮಾ ಸುದ್ದಿಗಾರರಿಗೆ ತಿಳಿಸಿದರು. ನಮ್ಮ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರ ಕುರಿತಾದ ಸಂದೇಶವನ್ನು ಕಾರ್ಯಕರ್ತರು ತಳಮಟ್ಟದಲ್ಲಿ ಹ್ಯಾಗೆ ಕೊಂಡೊಯ್ಯಬೇಕು? ಮುರ್ಮು ಅವರ ಸರಳತೆ ಮತ್ತು ವಿನಮ್ರತೆ ಸಂದೇಶವನ್ನು ಅವರ ಹೋರಾಟಗಳ ಕಥೆಯೊಂದಿಗೆ ಜನರಿಗೆ ತಲುಪಿಸಬೇಕು ಎಂದು ಮೋದಿ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ

ದೇಶವು ಅನುಭವಿಸುತ್ತಿರುವ ನೋವುಗಳ ಹಿಂದಿನ ಕಾರಣಗಳಿವು ಎಂದಿದ್ದಾರೆ.

ಪಕ್ಷದ ಕುಟುಂಬ ರಾಜಕಾರಣ, ಜಾತೀಯ ರಾಜಕಾರಣ ಮತ್ತು ತುಷ್ಟೀಕರಣ ರಾಜಕೀಯವನ್ನು ಕೊನೆಗಾಣಿಸಿ ದೇಶದ ಮತ್ತು ಜನರ ಅಭಿವೃದ್ಧಿ, ಸಾಧನೆಗಳ ಮೂಲಕ ಪಕ್ಷವನ್ನು ಜನರು ಮಾತನಾಡುವಂತಾಗಬೇಕೆಂದು ಶಾ ಒತ್ತಿಹೇಳಿದ್ದಾರೆ ಎಂದು ತಿಳಿಸಿದರು. ತೆಲಂಗಾಣ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ಬಿಜೆಪಿ ಕುಟುಂಬ ಆಡಳಿತವನ್ನು ಕೊನೆಗೊಳಿಸಲಿದೆ. ಬಿಜೆಪಿಯ ಮುಂದಿನ ಸುತ್ತಿನ ಬೆಳವಣಿಗೆಯು ದಕ್ಷಿಣ ಭಾರತದಿಂದ ಆಗಲಿದೆ ಎಂದು ಸಭೆಯಲ್ಲಿ ಸಾಮೂಹಿಕ ಭರವಸೆಯನ್ನು ನಾಯಕರು ಹೊಂದಿದ್ದಾರೆ ಎಂದು ಹಿಮಂತ್ ಬಿಸ್ವ ಹೇಳಿದರು.

ಧರೆಗುರುಳಿದ ಮರಗಳು



ಮರಗಳನ್ನು ಅರಣ್ಯ ಇಲಾಖೆ ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಿದೆ.

ಭಾರೀ ಮಳೆಗೆ ಮಕ್ಕಂದೂರು ಸಮೀಪದ ಜಹಂಗೀರ್ ಪೈಸಾರಿ ಎಂಬಲ್ಲಿ ಸಣ್ಣ ಪ್ರಮಾಣದ ಭೂ ಕುಸಿತವಾಗಿದೆ. ಬರೆ ಕುಸಿದು ಚಂದ್ರಶೇಖರ್ ಎಂಬವರ ಮನೆ ಮೇಲೆ ಬಿದ್ದಿದ್ದು ಮನೆಯ ಹಿಂಭಾಗಕ್ಕೆ ಹಾನಿಯಾಗಿದೆ. ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ 2ನೇ ಮೊಣ್ಣಂಗೇರಿ ಸಮೀಪದ ವಿವೇಕಗಿರಿಗೆ ಸಂಪರ್ಕಿಸುವ ರಸ್ತೆಗೆ ಬರೆ ಕುಸಿದು ಬಿದ್ದು, ಸಂಚಾರ ಬಂದ್ ಆಗಿತ್ತು. ಮಾಹಿತಿ ಅರಿತ ಪಂಚಾಯಿತಿ ಟಾಸ್ಕ್ ಫೋರ್ಸ್ ಮಣ್ಣನ್ನು ತೆರವುಗೊಳಿಸಿದೆ.

ಮದೆನಾಡು ಸಮೀಪದ 2ನೇ ಮೊಣ್ಣಂಗೇರಿ ಎಂಬಲ್ಲಿ ಭೂಮಿ ಒಳಗಿನಿಂದ ಜಲ ಉಕ್ಕಿ ಹರಿಯುತ್ತಿರುವ ಪರಿಣಾಮ ಮಡಿಕೇರಿ–ಮಾಣಿ 275 ರಾಷ್ಟ್ರೀಯ ಹೆದ್ದಾರಿಗೆ ಹಾನಿಯಾಗಿದೆ. ಸ್ಥಳದಲ್ಲಿ ಸುರಕ್ಷತಾ ಕ್ರಮವಾಗಿ ಬ್ಯಾರಿಕೇಡ್ ಅಳವಡಿಸಲಾಗಿದ್ದು, ಹೆದ್ದಾರಿ ಸಂಚಾರಕ್ಕೆ ಸದ್ಯಕ್ಕೆ ತೊಡಕಾಗಿಲ್ಲ. ಮಳೆ ಮತ್ತಷ್ಟು ಬಿರುಸು ಪಡೆದಲ್ಲಿ ಈ ಸ್ಥಳದಲ್ಲಿ ಹೆದ್ದಾರಿಗೆ ಭಾರಿ ಹಾನಿ ಸಂಭವಿಸುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿದೆ. 2018ರಲ್ಲಿ ಈ ಭಾಗದಲ್ಲಿ ಸಂಭವಿಸಿದ ಭೂ ಕುಸಿತದ ಬಳಿಕ ಈ ಸ್ಥಳದಲ್ಲಿ ಹೆದ್ದಾರಿಯಲ್ಲಿ ಉಬ್ಬು ಕಂಡು ಬರುತ್ತಿದ್ದು, ಪ್ರತ್ರಿ ವರ್ಷ ದುರಸ್ತಿ ಕಾರ್ಯ ನಡೆಸಿದ್ದರೂ ಶಾಶ್ವತ ಪರಿಹಾರ ಸಾಧ್ಯವಾಗಿಲ್ಲ.

ಭಾಗಮಂಡಲ ತ್ರಿವೇಣಿ ಸಂಗಮ ಭರ್ತಿ

ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿದ ಪರಿಣಾಮ ಭಾಗಮಂಡಲ ತ್ರಿವೇಣಿ ಸಂಗಮ ಭರ್ತಿಯಾಗಿದೆ. ಪರಿಣಾಮ ಭಾಗಮಂಡಲ–ಅಯ್ಯಂಗೇರಿ ರಸ್ತೆ ಸಂಪರ್ಕ ಬಂದ್ ಆಗಿದೆ. ಈ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ಭಾಗಮಂಡಲ ಪೊಲೀಸರು ಬಂದ್ ಮಾಡಿದ್ದಾರೆ. ಈ ರಸ್ತೆ ಮೇಲೆ 2 ಅಡಿ ನೀರು ಹರಿಯುತ್ತಿದ್ದು, ಜನ ಸಂಚಾರಕ್ಕೆ ಅಡ್ಡಿಯಾಗಿಲ್ಲ. ಸ್ಥಳದಲ್ಲಿ ಗೃಹ ರಕ್ಷಕ ದಳದ ನುರಿತ ಈಜುಗಾರರು ಮತ್ತು ರಕ್ಷಣಾ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ. ಕಾವೇರಿ ನದಿ ಪಾತ್ರ ಪ್ರದೇಶಗಳಲ್ಲಿ ಬಿರುಸಿನ ಮಳೆ ಸುರಿಯುತ್ತಿರುವ ಕಾರಣ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ಕಳೆದ ಎರಡು ದಿನಗಳಿಂದ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಭಾರೀ ಏರಿಕೆ ಕಂಡಿದ್ದು, ಈ ಬಾರಿಯೂ ಕಾವೇರಿ ನದಿ ಪಾತ್ರದಲ್ಲಿ ಪ್ರವಾಹ ತಲೆದೋರುವ ಸಾಧ್ಯತೆ ಕಂಡು ಬಂದಿದೆ.

ಹಾರಂಗಿ ಮಾಹಿತಿ: ಮಡಿಕೇರಿ, ಮಾದಾಪುರ ಹಾಗೂ ಹಾರಂಗಿ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಉತ್ತಮ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಹಾರಂಗಿ ಜಲಾಶಯಕ್ಕೆ ಭಾರಿ ಪ್ರಮಾಣದ ಒಳ ಹರಿವು ದಾಖಲಾಗಿದೆ. ಭಾನುವಾರ ಮಧ್ಯಾಹ್ನ ಹಾರಂಗಿಯಿಂದ ನದಿ ಪಾತ್ರಕ್ಕೆ 15 ಸಾವಿರ ಕ್ಯೂಸೆಕ್ ಹೆಚ್ಚುವರಿ ನೀರನ್ನು ಹರಿಬಿಟ್ಟಿದ್ದು, ಹಾರಂಗಿ ಜಲಾಶಯದ ಕೆಳ ಸೇತುವೆ ಮುಳುಗಡೆಯಾಗಿದೆ. ಹಾರಂಗಿ ಮತ್ತು ಕಾವೇರಿ ನದಿ ಪಾತ್ರದ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಹಾರಂಗಿ ಅಣೆಕಟ್ಟು ಅಧಿಕಾರಿಗಳು ಮನವಿ ಮಾಡಿದ್ದಾರೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಹಾರಂಗಿ ಜಲಾಶಯದಲ್ಲಿ ಪ್ರಸ್ತುತ 2857.38 ಅಡಿ ನೀರಿನ ಸಂಗ್ರಹವಿದೆ. ಒಳ ಹರಿವಿನ ಪ್ರಮಾಣವನ್ನು ಆಧರಿಸಿ ನದಿಗೆ ನೀರು ಬಿಡಲಾಗುತ್ತದೆ ಎಂದು ಜಲಾಶಯ ಅಧಿಕಾರಿಗಳು ತಿಳಿಸಿದ್ದಾರೆ.

ವಿಧಾನಸಭೆ ಚುನಾವಣೆ ಸಾಧ್ಯತೆ

ಮಾಡಿದರು. ಅದರಿಂದಾಗಿ ಚಾಮರಾಜಪೇಟೆ, ಪುಲಕೇಶಿನಗರ, ಮಹಾಲಕ್ಷ್ಮಿ ಲೇಔಟ್‌ನಲ್ಲೂ ಗೆದ್ದೆವು. ಪಕ್ಷ ಉಳಿದರೆ ನಾವೆಲ್ಲ ಉಳಿಯುತ್ತೇವೆ ಎಂದರು.

ಭಗವಂತನ ಆಶೀರ್ವಾದದಿಂದ ಎರಡು ಬಾರಿ ಮುಖ್ಯಮಂತ್ರಿಯಾಗಿ ಇತಿಹಾಸದ ಪುಟ ಸೇರಿದ್ದೇನೆ. ಈಗಿನ ಸರ್ಕಾರ ಲೂಟಿ ಹೊಡೆಯುತ್ತಿದೆ. ಇದನ್ನು ಸಂಪೂರ್ಣವಾಗಿ ಬಂದ್ ಮಾಡಬೇಕು. ನನಗೆ ಒಂದು ಅವಕಾಶ ಕೊಡಲಿ. ನಮಗೆ ಇಪ್ಪತ್ತು ವರ್ಷ ಬೇಡ ಐದು ವರ್ಷದ ಅವಕಾಶ ಕೊಟ್ಟರೆ ಸಾಕು ಎಂದು ಮನವಿ ಮಾಡಿದರು.

ಆಗಸ್ಟ್‌ನಲ್ಲಿ 'ಪಂಚರತ್ನ' ರಥಯಾತ್ರೆ: ಆಗಸ್ಟ್‌ನಲ್ಲಿ ಪಂಚರತ್ನ ರಥಯಾತ್ರೆ ಕಾರ್ಯಕ್ರಮ ಆರಂಭಿಸುತ್ತೇವೆ. ಈ ಮೂಲಕ ಹಳ್ಳಿ–ಹಳ್ಳಿಗೆ ಹೋಗುತ್ತೇನೆ. ಮೂರು ತಿಂಗಳು ಬೆಂಗಳೂರಿಗೆ ಬರುವುದಿಲ್ಲ. ಎಲ್ಲೆಡೆ ಸುತ್ತುತ್ತೇನೆ. ಹದಿನೈದು ದಿನ ಬೆಂಗಳೂರಿಗೆ ಮೀಸಲು ಇಟ್ಟಿದ್ದೇನೆ. ಎಲ್ಲೆಲ್ಲಿ ಜನತಾ ಮಿತ್ರ ಕಾರ್ಯಕ್ರಮ ಮಾಡುತ್ತಾರೋ ಅಲ್ಲಿಗೆ ಹೋಗಿ ಮಾತನಾಡುತ್ತೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕ ಆರ್.ಮಂಜುನಾಥ್, ಕೇರಳದ ಮಾಜಿ ಸಚಿವ ಕೃಷ್ಣ ಕುಟ್ಟಿ ಮತ್ತಿತರರು ಭಾಗವಹಿಸಿದ್ದರು.

ಯಶವಂತ ಸಿನ್ಹಾ ರಾಷ್ಟ್ರಪತಿ ಆಗಬೇಕಿದೆ

ಆಗಬೇಕಿದೆ. ಅವರು ನಮ್ಮ ಶಾಸಕಾಂಗ ಸಭೆಯಲ್ಲಿ ಬಂದು ಮತ ಕೇಳಿದ್ದಾರೆ. ನಾವು ಎಲ್ಲ ಮತಗಳನ್ನು ಅವರಿಗೆ ಹಾಕುವ ಭರವಸೆ ನೀಡಿದ್ದೇವೆ. ಅವರು ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ಇದೆ ಎಂದು ತಿಳಿಸಿದರು.

ಕಾಂಗ್ರೆಸ್ ನಾಯಕರು ಮತ್ತು ಶಾಸಕರನ್ನು ಭೇಟಿ ಮಾಡಿದ ನಂತರ ಬೆಂಗಳೂರಿನಲ್ಲಿ ಮಾತನಾಡಿದ ಸಿನ್ಹಾ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡೆದುಕೊಳ್ಳುವ ಕೆಲಸ ಮಾಡುತ್ತಿದೆ. ಇಡಿ, ಸಿಬಿಐಗಳ ಮೂಲಕ ಪ್ರತಿಪಕ್ಷಗಳ ನಾಯಕರನ್ನು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ. ಪ್ರತಿಪಕ್ಷಗಳ ಗೌರವಾನ್ವಿತ ನಾಯಕರನ್ನು ಅವಮಾನ ಮಾಡುವ ದೃಷ್ಟಿಯಿಂದ ಇಡಿ ವಿಚಾರಣೆಗೆ ಕರೆಯಲಾಗುತ್ತಿದೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆದ ಬೆಳವಣಿಗೆ, ಮಧ್ಯಪ್ರದೇಶ, ಕರ್ನಾಟಕ, ರಾಜ್ಯಗಳಲ್ಲಿ ಆಗಿರುವ ಬೆಳವಣಿಗೆ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದರು.

ನಾನು ಆಯ್ಕೆಯಾದರೆ ಸಂವಿಧಾನಕ್ಕೆ ಮಾತ್ರ ಉತ್ತರದಾಯಿತ್ವ ಆಗಲಿದ್ದೇನೆ. ಆಡಳಿತ ಪಕ್ಷದ ಅಭ್ಯರ್ಥಿಯೂ ಹಾಗೆಯೇ ಇರಬೇಕು ಎಂದು ಬಯಸುತ್ತಿದ್ದೇನೆ. ರಾಷ್ಟ್ರಪತಿ ರಬ್ಬರ್ ಸ್ಟಾಂಪ್ ಆಗಬಾರದು. ಆಡಳಿತ ಪಕ್ಷದ ಅಭ್ಯರ್ಥಿ ಇದನ್ನು ಗಮನಿಸಲಿ. ರಾಜ್ಯಗಳಲ್ಲಿ ನಡೆಯುತ್ತಿರುವ ಆಪರೇಷನ್ ಕಮಲ ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಅಗತ್ಯವಿದೆ. ಆಡಳಿತ ಪಕ್ಷದ ಅಭ್ಯರ್ಥಿ ಅದನ್ನು ಪರಿಪಾಲಿಸಲಿ ಎಂದು ತಿಳಿಸಿದರು.

ಮುಂದುವರೆದ ಪೌರಕಾರ್ಮಿಕರು, ಸ್ವಚ್ಛತಾ ಕಾರ್ಮಿಕರ ಮುಷ್ಕರ

ನಾಳೆಯಿಂದ ಖಾಯಂ ಪೌರ ಕಾರ್ಮಿಕರು ಭಾಗಿಯಾಗುವ ಸಾಧ್ಯತೆ

ಮೈಸೂರು, ಜು.3(ಪಿಎಂ)– ಖಾಯಂಗೊಳಿಸಲು ಆಗ್ರಹಿಸಿ ಮೈಸೂರು ಮಹಾನಗರ ಪಾಲಿಕೆಯ ನೇರಪಾವತಿ–ಹೆಚ್ಚುವರಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಣಿಕೆ ವಾಹನ ಚಾಲಕರು ನಡೆಸುತ್ತಿರುವ ಮುಷ್ಕರವು ಖಾಯಂ ಪೌರ ಕಾರ್ಮಿಕರ ಬೆಂಬಲದೊಂದಿಗೆ ಮಂಗಳವಾರದಿಂದ (ಜು.5) ತೀವ್ರಗೊಳ್ಳುವ ಸಾಧ್ಯತೆ ಇದ್ದು, ಇದರಿಂದ ಕಸ ಸಂಗ್ರಹ, ತ್ಯಾಜ್ಯ ವಿಲೇವಾರಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಆತಂಕ ಎದುರಾಗಿದೆ.

ಮೈಸೂರು ಮಹಾನಗರ ಪಾಲಿಕೆಯ 530 ಖಾಯಂ ಪೌರಕಾರ್ಮಿಕರ ಹೊರತಾಗಿ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರು ಸೇರಿದಂತೆ 2 ಸಾವಿರಕ್ಕೂ ಹೆಚ್ಚು ಸ್ವಚ್ಛತಾ ಕಾರ್ಮಿಕರು ಶುಕ್ರವಾರದಿಂದ (ಜು.1) ಕೆಲಸ ಸ್ಥಗಿತಗೊಳಿಸಿ, ಮುಷ್ಕರ ನಿರತರಾಗಿದ್ದು, ಇದರ ಜೊತೆಗೆ ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ ಮೂರನೇ ದಿನವಾದ ಭಾನುವಾರವೂ ಮುಂದುವರೆಯಿತು.

ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಆಶ್ರಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ನೇರಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರು ತಮ್ಮನ್ನು ಖಾಯಂಗೊಳಿಸಲು ಆಗ್ರಹಿಸಿ ರಾಜ್ಯಾದ್ಯಂತ ಮುಷ್ಕರ ನಡೆಯುತ್ತಿದ್ದಾರೆ.



ಅಂತೆಯೇ ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘ, ಮೈಸೂರು ಮಹಾನಗರ ಪಾಲಿಕೆ ಸ್ವಚ್ಛತೆ ವಾಹನ ಚಾಲಕರ ಸಂಘದ ಜಂಟಿ ಆಶ್ರಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸದರಿ ಸ್ವಚ್ಛತಾ ಕಾರ್ಮಿಕರು ಮುಷ್ಕರನಿರತರಾಗಿದ್ದಾರೆ. ಕಳೆದ ಎರಡು ದಿನದಂತೆ ಇಂದೂ ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಮುಖ್ಯದ್ವಾರದ ಎದುರು ಬೆಳಗ್ಗೆಯಿಂದ ಸಂಜೆಯವರೆಗೆ ಸದರಿ ಸ್ವಚ್ಛತಾ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ನೇರಪಾವತಿಯಡಿ ಪೌರಕಾರ್ಮಿಕರಿಗೆ ಕೆಲಸದ ಭದ್ರತೆಯಾಗಲಿ, ಆರೋಗ್ಯದ ಭದ್ರತೆಯಾಗಲಿ ಇಲ್ಲ. ಮೃತಪಟ್ಟರೆ ಕುಟುಂಬದವರಿಗೆ ಅನುಕಂಪದ ಆಧಾರದಲ್ಲಿ ಕೆಲಸವೂ ಸಿಗುವುದಿಲ್ಲ. ಜೊತೆಗೆ ನಿವೃತ್ತಿಯಾದರೆ ಪಿಂಚಣಿ, ಗ್ರಾಚ್ಯುಟಿ ಸೇರಿದಂತೆ ಯಾವುದೇ ಆರ್ಥಿಕ ಸೌಲಭ್ಯಗಳು ದೊರೆಯುವುದಿಲ್ಲ. ನೇರಪಾವತಿಯಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ವೇತನ ಪಾವತಿ ಮಾಡುತ್ತಿದ್ದು, ಇದರಿಂದ ಯಾವುದೇ ನೀತಿ–ನಿಯಮ ಮತ್ತು ಮಾನದಂಡಗಳು ಅನ್ವಯವಾಗದ ಕಾರಣ ನ್ಯಾಯಯುತ ಸೌಲಭ್ಯಗಳಿಂದ ವಂಚಿತರಾಗಬೇಕಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೈಕ್‌ಗಳಲ್ಲಿ ವಾರ್ಡ್‌ಗಳಿಗೆ ಭೇಟಿ: ನಾಳೆ (ಜು.4) ಎಲ್ಲಾ 65 ವಾರ್ಡ್‌ಗಳಿಗೆ ಭೇಟಿ ನೀಡಲಿರುವ ಮೇಸ್ತ್ರಿಗಳು ಹಾಗೂ ಸಂಘಟನೆಗಳ ಮುಖಂಡರು, ಖಾಯಂ ಪೌರಕಾರ್ಮಿಕರನ್ನು ಭೇಟಿ ಮಾಡಿ ಮಂಗಳವಾರದಿಂದ ಕೆಲಸ ಸ್ಥಗಿತಗೊಳಿಸಿ ಬೆಂಬಲ ನೀಡುವಂತೆ ಅವರನ್ನು ಕೋರಲಿದ್ದಾರೆ. 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದ ಪೌರಕಾರ್ಮಿಕರ ಮುಖಂಡ ಸಿ.ಆರ್.ರಾಚಯ್ಯ, 165 ಮಂದಿ ಮೇಸ್ತ್ರಿಗಳು ಹಾಗೂ ನಮ್ಮ ಎರಡೂ ಸಂಘಟನೆಗಳ ಮುಖಂಡರು ನಾಳೆ ಬೆಳಗ್ಗೆ 6ರಿಂದ ಬೆಳಗ್ಗೆ 8ರವರೆಗೆ ಎಲ್ಲಾ 65 ವಾರ್ಡ್‌ಗಳಿಗೆ ಬೈಕ್‌ಗಳಲ್ಲಿ ಭೇಟಿ ನೀಡಲಿದ್ದೇವೆ. ಈ ವೇಳೆ ಕೆಲಸ ಸ್ಥಗಿತಗೊಳಿಸಲು ಖಾಯಂ ಪೌರಕಾರ್ಮಿಕರಲ್ಲಿ ಮನವಿ ಮಾಡಲಿದ್ದೇವೆ ಎಂದು ಹೇಳಿದರು.

> ❝ಮುಖ್ಯಮಂತ್ರಿಗಳು ನಾಳೆ (ಜು.4) ಸಂಜೆ ಒಳಗೆ ನಮ್ಮ ಬೇಡಿಕೆ ಸಂಬಂಧ ಸರ್ಕಾರದ ನಿರ್ಧಾರ ಪ್ರಕಟಿಸುವ ಮಾಹಿತಿ ಇದೆ. ಬೇಡಿಕೆ ಈಡೇರಿಸುವ ತೀರ್ಮಾನ ಕೈಗೊಳ್ಳದಿದ್ದರೆ, ಮಂಗಳವಾರದಿಂದ ಪಾಲಿಕೆಯ ಖಾಯಂ ಪೌರಕಾರ್ಮಿಕರ ಬೆಂಬಲದೊಂದಿಗೆ ಹೋರಾಟ ತೀವ್ರಗೊಳಿಸಲಾಗುವುದು. ಸದ್ಯ 530 ಖಾಯಂ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. 1,648 ನೇರಪಾವತಿ–ಹೆಚ್ಚುವರಿ ಪೌರಕಾರ್ಮಿಕರು, 385 ಮನೆ ಮನೆ ಕಸ ಸಂಗ್ರಹ ವಾಹನ ಚಾಲಕರು ಹಾಗೂ 231 ಒಳಚರಂಡಿ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿದ್ದಾರೆ.
>
> -ಎನ್.ಮಾರ, ಉನ್ನತ ಸಮಿತಿ ಅಧ್ಯಕ್ಷರು, ಮೈಸೂರು ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘ

ಖಾಯಂ ಪೌರಕಾರ್ಮಿಕರು ಕೆಲಸ ಸ್ಥಗಿತಗೊಳಿಸಿದರೆ ನಮ್ಮ ಹೋರಾಟಕ್ಕೆ ಹೆಚ್ಚಿನ ಬಲ ಬರಲಿದೆ. ಎಲ್ಲಾ ಖಾಯಂ ಪೌರಕಾರ್ಮಿಕರು ಬೆಂಬಲ ನೀಡುವ ವಿಶ್ವಾಸವಿದೆ ಎಂದರು.

ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಒಕ್ಕೂಟವು ಮುಷ್ಕರಕ್ಕೆ ಬೆಂಬಲ ನೀಡಿಲ್ಲದ ಬಗ್ಗೆ ಪ್ರತಿಕ್ರಿಯಿಸಿದ ಸಿ.ಆರ್.ರಾಚಯ್ಯ ಒಕ್ಕೂಟದ ಪದಾಧಿಕಾರಿಗಳು ಮಾತ್ರವೇ ಈ ನಿಲುವು ತಿಳಿಸಿದ್ದಾರೆ. ಇವರೆಲ್ಲಾ ಖಾಯಂ ಪೌರಕಾರ್ಮಿಕರಾಗಿದ್ದು, ಇವರ ಖಾಯಂಗಾಗಿ ನಾವೂ ಹೋರಾಟ ಮಾಡಿದ್ದೇವೆ. ಅದಾಗ್ಯೂ ಸದರಿ ಪದಾಧಿಕಾರಿಗಳ ಹೊರತಾಗಿ ಎಲ್ಲಾ ಖಾಯಂ ಪೌರಕಾರ್ಮಿಕರು ಮುಷ್ಕರಕ್ಕೆ ಬೆಂಬಲ ನೀಡುವ ವಿಶ್ವಾಸವಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂಘಟನೆಯ ಮಹತ್ವ ಬಗ್ಗೆ ನೀಡಿರುವ ಸಂದೇಶವನ್ನು ಅರಿತು ಸದರಿ ಒಕ್ಕೂಟದ ಪದಾಧಿಕಾರಿಗಳು ನಮ್ಮ ಹೋರಾಟಕ್ಕೆ ಬೆಂಬಲವಾಗಿ ನಿಲ್ಲಬೇಕು ಎಂದು ಕೋರಿದರು.

ಪಾಲಿಕೆ ಸ್ವಚ್ಛತೆ ವಾಹನ ಚಾಲಕರ ಸಂಘದ ಅಧ್ಯಕ್ಷ ಎಸ್.ಮುರುಗೇಶ್ ಮತ್ತು ಪ್ರಧಾನ ಕಾರ್ಯದರ್ಶಿ ಶೇಷ ಮಾತನಾಡಿ, ಪಾಲಿಕೆಯಲ್ಲಿ ಇನ್ನೂ ಗುತ್ತಿಗೆ ಪದ್ಧತಿ ಜೀವಂತವಾಗಿದೆ. ಒಳಚರಂಡಿ ಸಹಾಯಕರು ಮತ್ತು ಕಸ ಸಾಗಣಿಕೆ ವಾಹನ ಚಾಲಕರು ಇಂದಿಗೂ ಗುತ್ತಿಗೆ ಪದ್ಧತಿಯಲ್ಲೇ ಕಡಿಮೆ ವೇತನಕ್ಕೆ ದುಡಿಯುತ್ತಿದ್ದೇವೆ. ನಾವು ಕಳೆದ 15 ವರ್ಷಗಳಿಂದ ಪಾಲಿಕೆಯ ಸ್ವಚ್ಛತಾ ವಾಹನ ಚಾಲನೆ ಮಾಡುತ್ತಿದ್ದೇವೆ. ಕನಿಷ್ಠ ವೇತನ, ಸೇವಾ ಭದ್ರತೆ ಇಲ್ಲದೇ ದುಡಿಯುತ್ತಿದ್ದೇವೆ. ನಮ್ಮ ಬೇಡಿಕೆ ಈಡೇರಿಸಲು ಸರ್ಕಾರ ಶೀಘ್ರ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು. ಇಂದು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಮುಕ್ತ ದಿನದ ಅಂಗವಾಗಿ

ಗ್ರಾಹಕರು, ವ್ಯಾಪಾರಿಗಳಿಗೆ ಉಚಿತ ಪೇಪರ್ ಬ್ಯಾಗ್ ವಿತರಣೆ



ಮೈಸೂರು, ಜು.3(ಆರ್‌ಕೆಬಿ)– ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನದ ಅಂಗವಾಗಿ ಮೈಸೂರಿನ ಪರಿಸರ ಸ್ನೇಹಿ ತಂಡದ ಸದಸ್ಯರು ಭಾನುವಾರ 'ಪ್ಲಾಸ್ಟಿಕ್ ಬ್ಯಾಗ್ ತ್ಯಜಿಸಿ, ಪೇಪರ್ ಬ್ಯಾಗ್ ಬಳಸಿ' ಎಂಬ ಘೋಷಣೆಯೊಂದಿಗೆ ಪೇಪರ್ ಬ್ಯಾಗ್‌ಗಳನ್ನು ಉಚಿತವಾಗಿ ವಿತರಿಸುವ ಮೂಲಕ ಜನಜಾಗೃತಿ ಮೂಡಿಸಿದರು.

ಮೈಸೂರಿನ ದೊಡ್ಡ ಮಾರ್ಕೆಟ್, ಕೆ.ಟಿ.ಸ್ಟ್ರೀಟ್, ಅಶೋಕ ರಸ್ತೆ ಇನ್ನಿತರೆ ಕಡೆಗಳಲ್ಲಿ ಬೀದಿ ಬದಿ ಅಂಗಡಿಗಳಲ್ಲಿ ಪದಾರ್ಥ ಖರೀದಿಸುತ್ತಿದ್ದ ಗ್ರಾಹಕರಿಗೆ ಮತ್ತು ವ್ಯಾಪಾರಿಗಳಿಗೆ ಸುಮಾರು 500ಕ್ಕೂ ಹೆಚ್ಚು ಪೇಪರ್ ಬ್ಯಾಗ್‌ಗಳನ್ನು ವಿತರಿಸಿ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದೇವರಾಜ ಸಂಚಾರಿ ಠಾಣೆ ಎಎಸ್‌ಐ ರಂಗಸ್ವಾಮಿ, ಪರಿಸರ ರಕ್ಷಣೆ ನಮ್ಮ ಜವಾಬ್ದಾರಿ. ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬ್ಯಾಗ್ ಬಳಸುವುದನ್ನು ಬಿಟ್ಟು ಪರಿಸರ ಸ್ನೇಹಿಯಾದ ಪೇಪರ್ ಬ್ಯಾಗ್‌ಗಳನ್ನೇ ಬಳಸಬೇಕು. ಈ ಮೂಲಕ ಪ್ಲಾಸ್ಟಿಕ್ ಮುಕ್ತ ಪರಿಸರಕ್ಕೆ ಸಹಕರಿಸುವುದಾಗಿ ಪ್ರತಿಜ್ಞೆ ಸ್ವೀಕರಿಸುವಂತೆ ಮನವಿ ಮಾಡಿದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಭೂಮಿಗೆ ಸೇರಿದರೆ ಮಳೆಯ ನೀರು ಭೂಮಿಗಿಳಿಯದೆ ತೊಂದರೆಯಾಗಲಿದೆ. ಪೇಪರ್ ಬ್ಯಾಗ್ ಬಳಸಿದರೆ ಅದು ಭೂಮಿಗೆ ಸೇರಿದರೂ ಪರಿಸರಕ್ಕೆ ತೊಂದರೆಯಾಗುವುದಿಲ್ಲ. ಪೇಪರ್ ಭೂಮಿಯಲ್ಲಿ ಗೊಬ್ಬರವಾಗಿ ಮಾರ್ಪಡಲಿದೆ. ಇದರಿಂದ ಪರಿಸರಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದರು.

ನಿವೃತ್ತ ಪೊಲೀಸ್ ಅಧಿಕಾರಿ ಸತ್ಯನಾರಾಯಣ, ಪರಿಸರ ಸ್ನೇಹಿ ತಂಡದ ಅಧ್ಯಕ್ಷ ಲೋಹಿತ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ವಿನಯ್ ಕಣಗಾಲ್, ದುರ್ಗಾಪ್ರಸಾದ್, ಎಸ್.ಪಿ.ಕೃಷ್ಣಪ್ಪ ಇನ್ನಿತರರು ಉಪಸ್ಥಿತರಿದ್ದರು.

ಉತ್ತಮ ಆಟ ಪ್ರದರ್ಶಿಸಿದ ಕರ್ನಾಟಕ ತಂಡಕ್ಕೆ ರಗ್ಬಿ ಚಾಂಪಿಯನ್ಸ್ ಟ್ರೋಫಿ



ಮೈಸೂರು, ಜು.3(ಆರ್‌ಕೆಬಿ)– ಬಿಹಾರದ ಪಾಟ್ನಾದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ವ್ಹೀಲ್‌ಚೇರ್ ರಗ್ಬಿ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡ 36 ಪಾಯಿಂಟ್‌ಗಳನ್ನು ಪಡೆದು 19 ಪಾಯಿಂಟ್ ಪಡೆದ ಬಿಹಾರ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸುವ ಮೂಲಕ ರಾಷ್ಟ್ರೀಯ ವ್ಹೀಲ್‌ಚೇರ್ ಚಾಂಪಿಯನ್ಸ್ ಟ್ರೋಫಿ ಪಡೆದುಕೊಂಡಿತು.

ರಗ್ಬಿ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯಗಳಿಂದ 12 ತಂಡಗಳು ಭಾಗವಹಿಸಿದ್ದವು. ಈ ತಂಡಗಳಲ್ಲಿ ನಾಲ್ಕು ಭಾಗಗಳನ್ನಾಗಿ ಮಾಡಿ ಲೀಗ್ ಪಂದ್ಯಾವಳಿಯಲ್ಲಿ ರಾಜಾಸ್ತಾನ ಹಾಗೂ ಕರ್ನಾಟಕ ಪಂದ್ಯದಲ್ಲಿ ಕರ್ನಾಟಕ ತಂಡ 32 ಪಾಯಿಂಟ್, ರಾಜಸ್ತಾನ 5 ಪಾಯಿಂಟ್, ಕೇರಳ ಮತ್ತು ಕರ್ನಾಟಕದ ನಡುವೆ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ 32, ಕೇರಳ 14 ಪಾಯಿಂಟ್ ಪಡೆದವು. ಸೆಮಿಫೈನಲ್‌ನಲ್ಲಿ ಒಡಿಷಾ ಹಾಗೂ ಕರ್ನಾಟಕ ಪಂದ್ಯದಲ್ಲಿ ಕರ್ನಾಟಕ 28 ಹಾಗೂ ಒಡಿಷಾ 21 ಪಾಯಿಂಟ್ ಪಡೆದವು.

ನಂತರ ಬಿಹಾರ ಹಾಗೂ ಕರ್ನಾಟಕದ ನಡುವೆ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ 36 ಹಾಗೂ ಬಿಹಾರ 19 ಪಾಯಿಂಟ್ ಗಳಿಸಿತು. ಹೀಗೆ ಇಡೀ ಪಂದ್ಯಾವಳಿಯಲ್ಲಿ ಕರ್ನಾಟಕ ವ್ಹೀಲ್‌ಚೇರ್ ತಂಡದ ಸದಸ್ಯರು ಉತ್ತಮ ಆಟದ ಪ್ರದರ್ಶನ ನೀಡಿ ರಾಷ್ಟ್ರೀಯ ರಗ್ಬಿ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

'ಹಾರುವ ನರಿ ಮತ್ತು ಇತರ ಪರಿಸರದ ಕತೆಗಳು' ಕೃತಿ ಬಿಡುಗಡೆ

ಎಲ್ಲಾ ಜಾತಿ, ಧರ್ಮಗಳಲ್ಲಿಯೂ ನರಿ ಬುದ್ಧಿ ಜನರು ಇದ್ದಾರೆ : ಸಿಪಿಕೆ

ಮೈಸೂರು, ಜು.3(ಜಿಎ)–ಎಲ್ಲಾ ಜಾತಿ, ಧರ್ಮಗಳಲ್ಲಿಯೂ ನರಿಯ ಬುದ್ಧಿಯುಳ್ಳವರು ಇದ್ದಾರೆ ಎಂದು ಹಿರಿಯ ಸಾಹಿತಿ ಹಾಗೂ ದತ್ತ ಪೀಠ ಆಸ್ಥಾನ ವಿದ್ವಾನ್ ಆದ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಲ್ಪವೃಕ್ಷ ಟ್ರಸ್ಟ್ ವತಿಯಿಂದ ಭಾನುವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಎಚ್.ಆರ್. ಸಂಜಯ್ ಅವರ 'ಹಾರುವ ನರಿ ಮತ್ತು ಇತರ ಪರಿಸರದ ಕತೆಗಳು' ಎಂಬ ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.




ಯಾವುದೇ ಒಂದು ಕೃತಿ ಶ್ರೇಷ್ಠವಾಗಿರಬೇಕು ಎಂದರೆ ಅದರಲ್ಲಿ ಮಾಹಿತಿ ಪೂರ್ಣವಾಗಿರಬೇಕು ಮತ್ತು ಮಾಂತ್ರಿಕತೆ ಎಂಬ ಎರಡು ಅಂಶಗಳನ್ನು ಹೊಂದಿರಬೇಕು. ಅದರಂತೆ ಡಾ.ಎಚ್.ಆರ್. ಸಂಜಯ್ ಅವರು ಬರೆದಿರುವ 'ಹಾರುವ ನರಿ ಮತ್ತು ಇತರ ಪರಿಸರದ ಕತೆಗಳು' ಕೃತಿಯು ಈ ಎರಡು ಅಂಶಗಳನ್ನು ಹೊಂದಿದ್ದು ಮುಂದಿನ ದಿನಗಳಲ್ಲಿ ಅವರಿಂದ ಉತ್ತಮ ಕೃತಿಗಳ ಹೊರ ಬರುವ ವಿಶ್ವಾಸವಿದೆ ಎಂದು ತಿಳಿಸಿದರು.

ಡಾ. ಸಂಜಯ್ ಅವರ ತಾಯಿ ಡಾ. ಲತಾ ರಾಜಶೇಖರ್ ಅವರು ಈಗಾಗಲೇ ಸಾಹಿತ್ಯ ಲೋಕಕ್ಕೆ 7 ಮಹಾಕಾವ್ಯಗಳನ್ನು ನೀಡಿದ್ದಾರೆ. ಅವರಂತೆ ಇವರು ಸಹ ಅಪರೂಪದ ಕೃತಿಯನ್ನು ರಚಿಸಿದ್ದು, ಉತ್ತಮ ಲೇಖಕರಾಗಲಿ ಎಂದು ಹಾರೈಸುವೆ ಎಂದ ಅವರು ಡಾ. ಸಂಜಯ್ ಅವರು ಮೂರು ಆಯಾಮಗಳಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ಪ್ರಾಣಿಶಾಸ್ತ್ರ, ಕವಿ ಮತ್ತು ಕಲಾವಿದರಾಗಿ ಅವರು ಕೃತಿಯನ್ನು ರಚಿಸಿದ್ದಾರೆ. ಪಕ್ಷಿಗಳು ಪ್ರಪಂಚದ ಪರಮ ವಿಸ್ಮಯವಾಗಿದೆ. ಯಾಕೆಂದರೇ, ಪ್ರಾಣಿಗಳು ಹಾರಲು ಸಾಧ್ಯವಿಲ್ಲ. ಆದರೆ, ಪಕ್ಷಿಗಳು ಮಾತ್ರ ಹಾರುತ್ತವೆ. ಪಕ್ಷಿಗಳು ದೇವರಿದ್ದಂತೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು ಮೈಸೂರು ರಂಗನಾಥ್ ಮಾತನಾಡಿದರು. ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ವೈದ್ಯರಾದ ಡಾ.ಎಚ್.ಬಿ.ರಾಜಶೇಖರ್, ಕಲ್ಪವೃಕ್ಷ ಟ್ರಸ್ಟ್ ಅಧ್ಯಕ್ಷೆ ಡಾ. ಲತಾ ರಾಜಶೇಖರ್, ಬೆಂಗಳೂರು ನ್ಯೂಮೆಡ್ ಡಯಾಗ್ನೊಸ್ಟಿಕ್ಸ್ ನಿರ್ದೇಶಕ ಡಾ. ಮುರಳಿ ನಾಡಿಗ್, ವೈದ್ಯ ಹಾಗೂ ಕೃತಿಕಾರ ಡಾ.ಎಚ್.ಆರ್. ಸಂಜಯ್, ಕಸಾಪ ಕಾರ್ಯದರ್ಶಿ ಮ.ನ. ಲತಾ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಟಿಆರ್‌ಎಸ್ ಸರ್ಕಾರ ಕಿತ್ತೆಸೆದು ಬಿಜೆಪಿಗೆ ಅವಕಾಶ ಕೊಡಿ

ಹೈದರಾಬಾದ್: ತೆಲಂಗಾಣದಲ್ಲಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ನೇತೃತ್ವದಲ್ಲಿನ ಟಿಆರ್‌ಎಸ್ ಸರ್ಕಾರವನ್ನು ಕಿತ್ತೆಸೆದು ಒಂದು ಬಾರಿ ಬಿಜೆಪಿಗೆ ಅವಕಾಶ ಮಾಡಿಕೊಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಜನರಲ್ಲಿ ಮನವಿ ಮಾಡಿಕೊಂಡಿದ್ದಾರೆ.



ಬಿಜೆಪಿ 'ವಿಜಯ ಸಂಕಲ್ಪ ಸಭಾ' ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ತೆಲಂಗಾಣದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತೆಲಂಗಾಣ ಅಧಿಕೃತವಾಗಿ ವಿಮೋಚನಾ ದಿನವನ್ನು ಆಚರಿಸಲಿದೆ ಎಂದು ಹೇಳಿದರು.

ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಆಡಳಿತವಿರುವ ಎಲ್ಲಾ ರಾಜ್ಯಗಳು ಪ್ರಗತಿಪಥದಲ್ಲಿ ನಡೆಯುತ್ತಿವೆ. ತೆಲಂಗಾಣದಲ್ಲಿ ಯುವ ಜನತೆಗೆ ಉದ್ಯೋಗ ಸಿಗದಂತಾಗಿದೆ. ಉದ್ಯಮಗಳು ಬರುತ್ತಿಲ್ಲ. ಯಾವುದೇ ಅಭಿವೃದ್ಧಿಯಾಗುತ್ತಿಲ್ಲ. ಇಡೀ ದೇಶವೇ ಪ್ರಗತಿ ಪಥದಲ್ಲಿ ಸಾಗುತ್ತಿದ್ದರೆ ತೆಲಂಗಾಣ ಇನ್ನೂ ಹಿಂದುಳಿದಿದೆ. ಈ ಪರಿಸ್ಥಿತಿ ತೆಲಂಗಾಣಕ್ಕೆ ಒಳ್ಳೆಯದಲ್ಲ ಎಂದು ಅಮಿತ್ ಶಾ ಹೇಳಿದರು.

ಸರ್ಕಾರ ರಚನೆಗೆ ಬಿಜೆಪಿಗೆ ಒಂದು ಅವಕಾಶ ನೀಡಿ, ಟಿಆರ್‌ಎಸ್ ಸರ್ಕಾರನ್ನು ಕಿತ್ತೆಸೆಯಿರಿ ಎಂದು ಜನತೆಗೆ ಮನವಿ ಮಾಡಿದ ಅಮಿತ್ ಶಾ, ಟಿಆರ್‌ಎಸ್ ಮಾಡದಿರುವುದನ್ನು ಬಿಜೆಪಿ ಸರ್ಕಾರ ಮಾಡುವುದಾಗಿ ಭರವಸೆ ನೀಡಿದರು.


ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿಯ ಭಯದಿಂದ ಕೆಸಿಆರ್ ತೆಲಂಗಾಣ ವಿಮೋಚನಾ ದಿನವನ್ನು ಆಚರಿಸುತ್ತಿಲ್ಲ ಎಂದು ಆರೋಪಿಸಿದ ಅಮಿತ್ ಶಾ, ಓವೈಸಿ ಟಿಆರ್‌ಎಸ್ ಪಕ್ಷದ ಗುರುತು ಆಗಿರುವ ಕಾರಿನ ಸ್ಟೇರಿಂಗ್ ಓವೈಸಿ ಕೈಯಲ್ಲಿದೆ. ತೆಲಂಗಾಣ ಜನರ ಮನಸ್ಥಿತಿ ಗಮನಿಸಿದ್ದು, ಕೆಸಿಆರ್ ನಿಮಗೆ ಯಾವಾಗ ಬೇಕೋ ಆಗ ಚುನಾವಣೆ ನಡೆಸಿ, ಬಿಜೆಪಿ ರಾಜ್ಯದಲ್ಲಿ ಸರ್ಕಾರ ರಚಿಸಲು ಸಜ್ಜಾಗಿದೆ ಎಂದರು.

ಮಹಾನ್ ಯೋಗಿ ಶ್ರೀ ಕೃಷ್ಣಮಾಚಾರ್ಯರ ಸಂಸ್ಮರಣೋತ್ಸವ

'ಯೋಗ ಪಿತಾಮಹ ಶ್ರೀ ಕೃಷ್ಣಮಾಚಾರ್ಯ' ಕೃತಿ ಬಿಡುಗಡೆ

ಮೈಸೂರು,ಜು.3(ಪಿಎಂ)–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಾಗೂ ಹಿಮಾಲಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಹಾನ್ ಯೋಗಿ ಶ್ರೀ ಕೃಷ್ಣಮಾಚಾರ್ಯರ (ತಿರುಮಲೈ ಕೃಷ್ಣಮಾಚಾರ್ಯ) ಸಂಸ್ಮರಣೋತ್ಸವದಲ್ಲಿ ಎ.ಎನ್.ಮೂರ್ತಿ ಅವರ 'ಯೋಗ ಪಿತಾಮಹ ಶ್ರೀ ಕೃಷ್ಣಮಾಚಾರ್ಯ' ಕೃತಿ ಬಿಡುಗಡೆ ಮಾಡಲಾಯಿತು.

ಮೈಸೂರಿನ ವಿಜಯನಗರದ ಕಸಾಪದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಂಸ್ಮರಣೋತ್ಸವದಲ್ಲಿ ಕೃತಿ ಬಿಡುಗಡೆ ಮಾಡಲಾಯಿತು. ಇದೇ ವೇಳೆ ಮಾತನಾಡಿದ ಮೈಸೂರು ಯೋಗ ಅಸೋಸಿಯೇಷನ್‌ನ ಉಪಾಧ್ಯಕ್ಷ ಯೋಗಪ್ರಕಾಶ್, ಪ್ರಾಚೀನ ಯೋಗ ವಿದ್ಯೆಗೆ ಆಧುನಿಕತೆಯ ಸ್ಪರ್ಶ ನೀಡಿದವರು ಕೃಷ್ಣಮಾಚಾರ್ಯರು. ಹಾಗಾಗಿ ಅವರನ್ನು ಆಧುನಿಕ ಯೋಗ ಪಿತಾಮಹ ಎಂದೇ ಕರೆಯಲಾಗಿದೆ. ಮೈಸೂರಿನಿಂದ ಯೋಗ ಪರಂಪರೆಯನ್ನು ವಿಶ್ವ ಮಟ್ಟದಲ್ಲಿ ಪಸರಿಸುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.



ಕೃಷ್ಣಮಾಚಾರ್ಯರ ಪೂರ್ವಜರು ತಿರುಪತಿಯ ತಿರುಮಲೆಯಿಂದ ಚಿತ್ರದುರ್ಗ ಜಿಲ್ಲೆಯ ಮುಚುಕುಂಟೆ ಗ್ರಾಮಕ್ಕೆ ಬಂದು ನೆಲೆಸಿದ್ದರು. ಇದೇ ಗ್ರಾಮದಲ್ಲಿ ಜನಿಸಿದ ಕೃಷ್ಣಮಾಚಾರ್ಯರ ಯೋಗ ಸಾಧನೆಗೆ ಮೈಸೂರು ನೆಲೆಯಾಯಿತು. ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಯೋಗ ಹೇಳಿಕೊಟ್ಟವರು ಕೃಷ್ಣಮಾಚಾರ್ಯರು. ಇವರ ಶಿಷ್ಯರಾದ ಬಿಕೆಎಸ್ ಅಯ್ಯಂಗಾರ್ 54 ದೇಶಗಳಲ್ಲಿ ಯೋಗ ಶಿಕ್ಷಣ ನೀಡಿದ ಕೀರ್ತಿ ಹೊಂದಿದ್ದಾರೆ ಎಂದು ತಿಳಿಸಿದರು.

ಕೃತಿ ಕುರಿತು ಮಾತನಾಡಿದ ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್, ಮೈಸೂರು ಯೋಗ ಪರಂಪರೆಗೆ ಹೆಸರಾಗಲು ಮೂಲ ಕಾರಣ ಕೃಷ್ಣಮಾಚಾರ್ಯರು. ಅವರು ಸಂಸ್ಕೃತ ಪಂಡಿತರೂ ಆಗಿದ್ದರು. 1906ರಲ್ಲಿ ಅವರಿಗೆ 18 ವರ್ಷ ವಯಸ್ಸಾಗಿದ್ದಾಗ ಮೈಸೂರನ್ನು ಬಿಟ್ಟು ವಿಶೇಷ ವ್ಯಾಸಂಗಕ್ಕಾಗಿ ಬನಾರಸ್ ವಿಶ್ವವಿದ್ಯಾನಿಲಯಕ್ಕೆ ಸೇರಿದರು. ಅಲ್ಲಿ ಅವರು ಶಿವಕುಮಾರ ಶಾಸ್ತ್ರಿ ಅವರ ಮಾರ್ಗದರ್ಶನದಲ್ಲಿ ತರ್ಕ ಹಾಗೂ ಸಂಸ್ಕೃತ ಶಿಕ್ಷಣ ಮುಂದುವರೆಸಿ, ಸಂಸ್ಕೃತದಲ್ಲಿ ಇನ್ನು ಹೆಚ್ಚಿನ ಪರಿಣತಿ ಸಾಧಿಸಿದರು ಎಂದರು. ಕೃಷ್ಣಮಾಚಾರ್ಯರ ಜೀವನ ಸಾಧನೆಯನ್ನು ತೆರೆದಿಡುವಲ್ಲಿ ಈ ಕೃತಿಯು ಸಾಫಲ್ಯಗೊಂಡಿದ್ದು, ಕಿರು ಕೃತಿಯಾದರೂ ಯೋಗಾಸಕ್ತರಿಗೆ ಅತ್ಯಂತ ಮಹತ್ವಪೂರ್ಣವಾದ ಅಂಶಗಳು ಇಲ್ಲಿ ದೊರೆಯಲಿದೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಕೃತಿ ಕರ್ತೃ ಎ.ಎನ್.ಮೂರ್ತಿ ಮತ್ತು ಅವರ ಪತ್ನಿ ಶ್ಯಾಮಲಾ ಮೂರ್ತಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಜಿಲ್ಲಾ ಕಸಾಪ ಕಾರ್ಯದರ್ಶಿ ಲತಾ ಮೋಹನ್, ವ್ಯಂಗ್ಯಚಿತ್ರ ಕಲಾವಿದ ಎಂ.ವಿ.ನಾಗೇಂದ್ರ ಬಾಬು ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಶೌಚಾಲಯ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಕೊಟ್ಟ ಭರವಸೆ ಈಡೇರಿಸಿದ ಪುರಸಭಾ ಸದಸ್ಯ ಅರ್ಜುನ್ ರಮೇಶ್



ತಿ.ನರಸೀಪುರ, ಜು.3(ಎಸ್‌ಕೆ)– ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿಗೆ ಪುರಸಭಾ ಸದಸ್ಯರೂ ಆದ ಚಿತ್ರನಟ ಅರ್ಜುನ್ ರಮೇಶ್ ಭೂಮಿ ಪೂಜೆ ನೆರವೇರಿಸಿದರು. ಆ ಮೂಲಕ ಸ್ವಂತ ಖರ್ಚಿನಲ್ಲಿ ಶೌಚಾಲಯ ನಿರ್ಮಿಸಿ ಕೊಡುವ ಭರವಸೆ ಈಡೇರಿಸಿದ್ದಾರೆ.

ಶಾಲಾ ವಿದ್ಯಾರ್ಥಿನಿಯರು ನೀಡಿದ ಮೌಖಿಕ ದೂರು ಹಾಗೂ ತಾಲೂಕು ಬಾಬು ಜಗಜೀವನರಾಂ ಸಂಘದ ಒತ್ತಾಯದ ಮೇರೆಗೆ ಇತ್ತೀಚೆಗೆ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ವಿದ್ಯಾರ್ಥಿನಿಯರ ಉಪಯೋಗಕ್ಕೆ ತಮ್ಮ ಸ್ವಂತ ಹಣದಲ್ಲಿ ಶೌಚಾಲಯ ನಿರ್ಮಿಸಿ ಕೊಡುವ ಭರವಸೆ ನೀಡಿದ್ದರು. ಅದರಂತೆ ಭಾನುವಾರ ಶಾಲಾವರಣದಲ್ಲಿ 2 ಶೌಚಾಲಯಗಳ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ್ದಾರೆ.

ಈ ವೇಳೆ ಮಾತನಾಡಿದ ಅವರು, ಶಾಲೆಗೆ ಭೇಟಿ ನೀಡಿ ಶಾಲೆ ಅವ್ಯವಸ್ಥೆ ಕಣ್ಣಾರೆ ಕಂಡು ಶೌಚಾಲಯ ನಿರ್ಮಿಸಿಕೊಡುವ ಭರವಸೆ ನೀಡಿದ್ದೆ. ಆದರೆ ಕೆಲ ವಿದ್ಯಾರ್ಥಿನಿಯರು ಬೇರೆಯವರ ಹಾಗೆ ಆಶ್ವಾಸನೆ ನೀಡಿ ಹೋಗುತ್ತೀರಾ ಅಥವಾ ನಿಮ್ಮಿಂದ ಏನಾದರೂ ನಿರೀಕ್ಷೆ ಮಾಡಬಹುದಾ ಎಂದು ಪ್ರಶ್ನಿಸಿದ್ದರು. ಹಾಗಾಗಿ ಇಂದು ನಾನು ಕೊಟ್ಟ ಮಾತಿನಂತೆ ನನ್ನ ಇತಿಮಿತಿಯೊಳಗೆ 2 ಶೌಚಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಿದ್ದೇನೆ. ಕಾಮಗಾರಿ ಇಂದಿನಿಂದಲೇ ಆರಂಭಗೊಂಡಿದ್ದು, ವಾರದೊಳಗೆ ಮುಕ್ತಾಯಗೊಂಡು ವಿದ್ಯಾರ್ಥಿನಿಯರ ಸೇವೆಗೆ ದೊರಕಲಿದೆ ಎಂದರು.

ಸರ್ಕಾರಿ ಶಾಲೆ ನಮ್ಮದೆ: ಸರ್ಕಾರಿ ಶಾಲೆ ನಮ್ಮದೆಂಬ ಮನೋಭಾವವನ್ನು ಚುನಾಯಿತ ಪ್ರತಿನಿಧಿಗಳು, ತಾಲೂಕಿನ ಮುಖಂಡರು ಬೆಳೆಸಿಕೊಳ್ಳಬೇಕು. ಸರ್ಕಾರಿ ಶಾಲೆಗಳಿಗೆ ಆಗಾಗ ಭೇಟಿ ನೀಡಿ ಅಲ್ಲಿನ ಆಗು ಹೋಗುಗಳಿಗೆ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಪೊಲೀಸರು ಶಾಲಾವರಣದಲ್ಲಿ ಗಸ್ತು ತಿರುಗುವ ಮೂಲಕ ಪುಂಡ ಪೋಕರಿಗಳ ಹಾವಳಿ ತಪ್ಪಿಸಬೇಕು. ಆ ಮೂಲಕ ವಿದ್ಯಾರ್ಥಿನಿಯರು ಭಯಮುಕ್ತರಾಗಿ ಶಾಲೆಗೆ ಹೋಗುವಂತಾಗಬೇಕು. ಶಾಲಾವರಣದಲ್ಲಿ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗುವವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಸಮಸ್ಯೆಗಳ ಬಗ್ಗೆ ನನ್ನ ಗಮನ ಸೆಳೆದು ಕೈಲಾದ ಸಹಾಯ ಮಾಡಲು ಕಾರಣರಾದ ಬಾಬು ಜಗಜೀವನರಾಂ ಸಂಘದ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದ ಅವರು, ಶಾಲೆಯ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಲು ಸಿದ್ಧನಿದ್ದೇನೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ನಿರ್ಭೀತಿಯಿಂದ ವಿದ್ಯಾಭ್ಯಾಸ ಮಾಡುವ ನಿಟ್ಟಿನಲ್ಲಿ ನನ್ನ ಕೈಲಾದ ಸಹಾಯ ಮಾಡಲು ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು.

ಈ ವೇಳೆ ಡಾ.ಬಾಬು ಜಗಜೀವನರಾಂ ಸಂಘದ ತಾಲೂಕು ಅಧ್ಯಕ್ಷ ಡಿ.ಶಂಕರ್, ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ವಿ.ಮಾದೇಶ್, ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ, ಕಾರ್ಯದರ್ಶಿ ಜಿ.ಮಹೇಶ್, ಮುಖ್ಯ ಶಿಕ್ಷಕಿ ಜ್ಞಾನೇಶ್ವರಿ, ರಾಜೂಗೌಡ, ಕೆ.ಸಿ.ಲಿಂಗರಾಜು, ರಜನಿ, ಮಳವಳ್ಳಿ ರವಿ, ಬಿ.ಎಲ್.ಮಹದೇವು, ಆಲಗೂಡು ರಾಜು ಮತ್ತಿತರರಿದ್ದರು.

ದುಶ್ಚಟದಿಂದ ದೂರವಿದ್ದರೆ ಮಾತ್ರ ಸಾಧನೆ ಸಾಧ್ಯ



ಪಿರಿಯಾಪಟ್ಟಣ, ಜು.3(ವೀರೇಶ್)– ದುಶ್ಚಟಗಳಿಂದ ದೂರವಿದ್ದಾಗ ಮಾತ್ರ ಜೀವನದಲ್ಲಿ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ರಂಗಭೂಮಿ ಕಲಾವಿದ, ಚಲನಚಿತ್ರ ನಟ ಕುಮಾರ್ ಅರಸೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಜೀವವಿಮಾ ಕಚೇರಿಯಲ್ಲಿ ಅಭಿವೃದ್ಧಿ ಅಧಿಕಾರಿ ಹೆಚ್.ಪಿ.ಶ್ರೀಕಾಂತ್ ತಂಡದಿಂದ ನಡೆದ ಪ್ರತಿನಿಧಿಗಳ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ. ಕಠಿಣ ಪರಿಶ್ರಮ, ಛಲವಿದ್ದರೇ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ. ಸಾರ್ವಜನಿಕ ಜೀವನದಲ್ಲಿ ಜೀವ ವಿಮಾ ಪ್ರತಿನಿಧಿಗಳ ಪಾತ್ರ ಬಹುಮುಖ್ಯ. ಸ್ವಾರ್ಥ ರಹಿತ ಸೇವೆಯೊಂದಿಗೆ ಸಮಾಜ ಸೇವೆಯಲ್ಲಿ ಪ್ರತಿಯೊಬ್ಬರೂ ತೊಡಗಿಕೊಂಡಾಗ ಸ್ವಾಸ್ಥ್ಯ ಸಮಾಜ ಕಾಣಲು ಸಾಧ್ಯ ಎಂದ ಅವರು, ತಮ್ಮ ಚಲನಚಿತ್ರ ಜೀವನದ ವಿಚಾರಧಾರೆಗಳನ್ನು ವಿವರಿಸಿದರಲ್ಲದೆ ಕೆಲಕಾಲ ಸಭೆಯಲ್ಲಿ ತಮ್ಮ ಹಾಸ್ಯ ತುಣುಕುಗಳೊಂದಿಗೆ ಸಭೆಯನ್ನು ರಂಜಿಸಿದರು.

ಜೀವ ವಿಮಾ ಅಭಿವೃದ್ಧಿ ಅಧಿಕಾರಿ ಹೆಚ್.ಪಿ.ಶ್ರೀಕಾಂತ್ ಮಾತನಾಡಿ, ಯಾವುದೇ ಕ್ಷೇತ್ರದಲ್ಲಿ ಗುರಿ ಸಾಧಿಸಲು ಅತ್ಯಂತ ಕಠಿಣ ಪರಿಶ್ರಮದ ಅವಶ್ಯಕತೆ ಇದೆ. ಆದ್ದರಿಂದ ಪ್ರತಿಯೊಬ್ಬ ಪ್ರತಿನಿಧಿಗಳು ಸಾಧ್ಯವಾದಷ್ಟು ವಿಮಾ ಪಾಲಿಸಿದಾರರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ನೆರವಿಗೆ ನೆರವಾಗುವುದರೊಂದಿಗೆ ಕಂಪನಿ ಬೆಳವಣಿಗೆಗೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕೆಂದು ಕಿವಿಮಾತು ನುಡಿದರು. ಈ ಸಂದರ್ಭ ಅಭಿವೃದ್ಧಿ ಅಧಿಕಾರಿಗಳಾದ ಮೋಹನ್ ಕುಮಾರ್, ನಿವೃತ್ತ ಅಧಿಕಾರಿ ಪುಟ್ಟೇಗೌಡ, ಉಪ ಶಾಖಾಧಿಕಾರಿ ಗಳಾದ ರಾಕೇಶ್ ಸೇರಿದಂತೆ ಹಲವು ಪ್ರತಿನಿಧಿಗಳು ಭಾಗವಹಿಸಿದ್ದರು.

ಚಿಲ್ಕುಂದ ಗ್ರಾಮದಲ್ಲಿ ವಿದ್ಯಾರ್ಥಿ ನಿಲಯ ಉದ್ಘಾಟನೆ



ಹುಣಸೂರು, ಜು.3(ಕೆಕೆ)– ಸಮಾಜ ಕಲ್ಯಾಣ ಇಲಾಖೆಯಿಂದ ಚಿಲ್ಕುಂದ ಗ್ರಾಮದಲ್ಲಿ ನಿರ್ಮಿಸಿರುವ ನೂತನ ವಿದ್ಯಾರ್ಥಿ ನಿಲಯವನ್ನು ಶಾಸಕ ಎಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ತಾಲೂಕಿನ ಹನಗೋಡು ಹೋಬಳಿಯ ಚಿಲ್ಕುಂದ ಗ್ರಾಮದಲ್ಲಿ 91.75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಉದ್ಘಾಟಿಸಿ ಮಾತನಾಡಿದ ಶಾಸಕರು ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಸರ್ಕಾರ ವಸತಿ ನಿಲಯ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ ಎಂದರು.

ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ತಯಾರಿಸುವುದರ ಜೊತೆಗೆ ಶಿಕ್ಷಣದ ಪ್ರಗತಿಯ ಕುರಿತು ನಿಲಯ ಮೇಲ್ವಿಚಾರಕರು ಕಾಳಜಿ ವಹಿಸಬೇಕು ಎಂದ ಅವರು, ಸರ್ಕಾರದ ಸೌಲಭ್ಯಗಳನ್ನು ಎಲ್ಲಾ ವಿದ್ಯಾರ್ಥಿಗಳು ಸದ್ಬಳಕೆ ಮಾಡಿ ಕೊಳ್ಳುವುದರೊಂದಿಗೆ ತಾವು ಶಿಕ್ಷಣ ಪಡೆದ ಶಾಲೆಗಳನ್ನು ಹಾಗೂ ಅನ್ನ ನೀಡಿದ ವಿದ್ಯಾರ್ಥಿ ನಿಲಯಗಳನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯಬಾರದು ಎಂದರು.

ಚಿಲ್ಕುಂದ ಗ್ರಾ.ಪಂ. ಉಪಾಧ್ಯಕ್ಷ ಜಯಣ್ಣ, ಸದಸ್ಯರಾದ ಸತೀಶ್, ರವಿ, ರೆಹಮಾನ್ ಶರೀಫ್, ತಾ.ಪಂ.ಮಾಜಿ ಉಪಾಧ್ಯಕ್ಷ ಮಹೇಂದ್ರ ಕುಮಾರ್, ಮುಖಂಡರಾದ ಸಿದ್ದೇಶ್, ರಾಮಕೃಷ್ಣ, ವೇಣು, ಸ್ವಾಮಿಗೌಡ, ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ರೇಣುಕಾ ಪ್ರಸಾದ್, ಇಂಜಿನಿಯರ್ ವಿಜಯ್ ಕುಮಾರ್, ಪಿಡಿಓ ಶಿವಕುಮಾರ್ ಇತರರು ಇದ್ದರು.



ಕಂಪಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಾಕಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಜಯಣ್ಣ, ಸಿಇಓ ಪಿ.ವೈ.ಮಂಜುಳಾ, ನಿರ್ದೇಶಕರಾದ ಕೆ.ಕುಮಾರ್, ಕೆಂಪಯ್ಯ, ಸಣ್ಣಮ್ಮ, ಸಂತೋಷ್, ರವಿ, ಮಹೇಶ್ ಮತ್ತಿತರರಿದ್ದರು.

ಮರಕ್ಕೆ ಟಾಟಾ ಏಸ್ ಡಿಕ್ಕಿ: ವ್ಯಕ್ತಿ ಸಾವು

ಹೆಚ್.ಡಿ.ಕೋಟೆ, ಜು.3(ಮಂಜು)– ಚಾಲಕನ ನಿಯಂತ್ರಣ ತಪ್ಪಿದ ಟಾಟಾ ಏಸ್ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಪುರ ಗ್ರಾಮದ ಬಳಿ ಭಾನುವಾರ ಬೆಳಗ್ಗೆ ನಡೆದಿದೆ. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಬಸ್ತಿಪುರ ಗ್ರಾಮದ ನಿವಾಸಿ ಅರ್ಜುನ್(40) ಸಾವನ್ನಪ್ಪಿದವರು.

ವಿವರ: ಅರ್ಜುನ್ ಇಂದು ಬೆಳಗ್ಗೆ ಟಾಟಾ ಏಸ್ ವಾಹನದಲ್ಲಿ ಬಸ್ತಿಪುರದಿಂದ ತಾಲೂಕಿನ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿದ ಟಾಟಾ ಏಸ್ ತಾಲೂಕಿನ ಪುರ ಗ್ರಾಮದ ಬಳಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಪರಿಣಾಮ ವಾಹನದ ಚಾಲಕ ಹಾಗೂ ಅರ್ಜುನ್ ತೀವ್ರ ಗಾಯಗೊಂಡಿದ್ದಾರೆ. ಈ ವೇಳೆ ವಾಹನದ ಕೆಳಗೆ ಬಿದ್ದು ನರಳಾಡುತ್ತಿದ್ದ ಅರ್ಜುನ್‌ನನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಇನ್ನೂ ತೀವ್ರ ಗಾಯಗೊಂಡಿದ್ದ ಟಾಟಾ ಏಸ್ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಚಾಲಕನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಪಾಲಿಷ್ ಮಾಡುವ ನೆಪದಲ್ಲಿ ಚಿನ್ನ ಕಳವು

ಬಿಹಾರ ಮೂಲದ ವಂಚಕನನ್ನು ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

ಭೇರ್ಯ, ಜು.3– ಪಾಲಿಷ್ ಮಾಡುವ ನೆಪದಲ್ಲಿ ಚಿನ್ನ ಕಳವು ಮಾಡುತ್ತಿದ್ದ ಬಿಹಾರ ಮೂಲದ ವ್ಯಕ್ತಿಯೋರ್ವನನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಭೇರ್ಯ ಗ್ರಾಮದಲ್ಲಿ ನಡೆದಿದೆ.

ಬಿಹಾರ ಮೂಲದ ಮುನ್ನಾಕುಮಾರ್ ಬಂಧಿತನಾಗಿದ್ದು, ವಿನುಕುಮಾರ್ ಎಂಬಾತ ಸ್ಥಳದಿಂದ ಪರಾರಿಯಾಗಿದ್ದಾನೆ. ಭೇರ್ಯ ಗ್ರಾಮಕ್ಕೆ ಜು.1ರಂದು ಸಂಜೆ ಭೇಟಿ ನೀಡಿದ್ದ ಇವರು ಗ್ರಾಪಂ ಅಧ್ಯಕ್ಷೆ ತಾಯಮ್ಮ ಅವರ ಮನೆಯ ಎದುರು ಮನೆಯಲ್ಲಿರುವ ಲಕ್ಷ್ಮಯ್ಯ ಎಂಬುವರ ಮನೆ ಬಳಿ ಬೆಳ್ಳಿ ಕಾಲುಚೈನ್‌ಗೆ ಪಾಲಿಷ್ ಮಾಡುತ್ತಿದ್ದರು. ಅದನ್ನು ನೋಡುತ್ತಿದ್ದ ತಾಯಮ್ಮ ಸೊಸೆ ಬಿಂದು ಅವರ ಮಾಂಗಲ್ಯ ಸರವನ್ನು ಪಾಲಿಷ್ ಮಾಡಿ ಪಳಪಳ ಹೊಳೆಯುವಂತೆ ಮಾಡಿಕೊಡುವುದಾಗಿ ಇವರಿಬ್ಬರೂ ಕೇಳಿದ್ದಾರೆ. ಅದನ್ನು ನಂಬಿದ ಬಿಂದು, ಮಾಂಗಲ್ಯ ಸರ ನೀಡಿದಾಗ ಅದನ್ನು ಯಾವುದೋ ದ್ರಾವಕದಿಂದ ಕುದಿಸುತ್ತಿದ್ದರು. ಆ ವೇಳೆಗೆ ಅಲ್ಲಿಗೆ ಬಂದ ಬಿಂದು ಅವರ ಮೈದುನ ಚಿನ್ನಸ್ವಾಮಿ, ಪಾಲಿಷ್ ಮಾಡುವುದಕ್ಕೆ ಸರವನ್ನು ಯಾಕೆ ಕುದಿಸುತ್ತಿದ್ದೀರಿ ಎಂದು ಪ್ರಶ್ನಿಸುತ್ತಿದ್ದಂತೆಯೇ ವಿನುಕುಮಾರ್ ಎಂಬಾತ ಸ್ಥಳದಿಂದ ಓಡಿ ಹೋಗಿದ್ದಾನೆ. ಮುನ್ನಾಕುಮಾರ್ ಎಂಬಾತ ದ್ರಾವಕದ ಸಮೇತ ಸರವನ್ನು ಚರಂಡಿಗೆ ಬಿಸಾಕಿ ಓಡುತ್ತಿದ್ದ ವೇಳೆ ಗ್ರಾಮಸ್ಥರು ಅವನನ್ನು ಹಿಡಿದುಕೊಂಡಿದ್ದಾರೆ. ನಂತರ ಸರವನ್ನು ತೂಕ ಹಾಕಿದಾಗ 30 ಗ್ರಾಂ ಇದ್ದದ್ದು 26 ಗ್ರಾಂಗೆ ಕಡಿಮೆಯಾಗಿತ್ತು. ಈ ವಂಚಕರು ಪಾಲಿಷ್ ಮಾಡುವ ನೆಪದಲ್ಲಿ ದ್ರಾವಕದಲ್ಲಿ ಚಿನ್ನವನ್ನು ಕುದಿಸುವ ಮೂಲಕ ಕಳವು ಮಾಡುತ್ತಿದ್ದಾರೆ ಎಂಬುದು ಪತ್ತೆಯಾಗಿದೆ. ಗ್ರಾಮಸ್ಥರು ಮುನ್ನಾಕುಮಾರ್‌ನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ಬಿಂದು ಅವರ ಪತಿ ಬಿ.ಪಿ.ಯೋಗೇಶ್ ನೀಡಿದ ದೂರಿನ ಮೇರೆಗೆ ಸಾಲಿಗ್ರಾಮ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಐದು ಲಕ್ಷ ಮೌಲ್ಯದ ಕಾಳುಮೆಣಸು ಕಳವು

ಹೆಚ್.ಡಿ.ಕೋಟೆ, ಜು.3– ಜಮೀನಿನ ತೋಟದಲ್ಲಿರುವ ಗೋಡೌನ್‌ನಿಂದ ಸುಮಾರು 5 ಲಕ್ಷ ರೂ. ಮೌಲ್ಯದ 30 ಮೂಟೆ ಕಾಳುಮೆಣಸು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಕುವೆಂಪುನಗರದಲ್ಲಿ ವಾಸವಿರುವ ಎಸ್.ಮಹೇಂದ್ರ ಅವರು ಹೆಚ್.ಡಿ.ಕೋಟೆ ತಾಲೂಕು ಕೆ.ಕನ್ನೇನಹಳ್ಳಿ ಗ್ರಾಮದಲ್ಲಿ 16 ಎಕರೆ ಜಮೀನು ಹೊಂದಿದ್ದು, ಅಡಿಕೆ, ಕಾಳಮೆಣಸು, ಕಾಫಿ ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಎರಡು ತಿಂಗಳ ಹಿಂದೆ 30 ಮೂಟೆ ಕಾಳುಮೆಣಸನ್ನು ಜಮೀನಿನಲ್ಲಿರುವ ಗೋಡೌನ್‌ನಲ್ಲಿ ಸಂಗ್ರಹಿಸಿಟ್ಟಿದ್ದರು. ಜೂ.28ರಂದು ರಾತ್ರಿ ಖದೀಮರು ಕಾಳಮೆಣಸನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಇತ್ತೀಚೆಗೆ ಬಿಹಾರದಲ್ಲಿ ನಡೆದ ಅಂತರರಾಷ್ಟ್ರೀಯ ರಗ್ಬಿ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಕಪ್ಪಸೋಗೆ ಮಹೇಂದ್ರ ಅವರನ್ನು ಹುಲ್ಲಹಳ್ಳಿ ಠಾಣೆ ಎಸ್ಐ ಮಹೇಶ್ ಕುಮಾರ್, ಎಎಸ್ಐ ವಡ್ಡಲಯ್ಯ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದರು.

ವಾಹನ ಚಾಲಕರ ಸಂಘಕ್ಕೆ ಬೀರ್ವಾಳ್ ಚಿಕ್ಕಣ್ಣ ಅಧ್ಯಕ್ಷ



ಸರಗೂರು, ಜು.3(ನಾಗೇಶ್)– ಸರಗೂರು ತಾಲೂಕು ವಾಹನ ಚಾಲಕರ ಸಂಘದ ನೂತನ ಅಧ್ಯಕ್ಷರಾಗಿ ಬೀರ್ವಾಳ್ ಚಿಕ್ಕಣ್ಣ ಆಯ್ಕೆಯಾಗಿದ್ದಾರೆ. ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯರು ಸರ್ವಾನುಮತದಿಂದ ಬೀರ್ವಾಳ್ ಚಿಕ್ಕಣ್ಣ ಅವರನ್ನು ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದರು.

ನೂತನ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ ಮಾತನಾಡಿ, ವಾಹನ ಚಾಲಕರು ಜನಸ್ನೇಹಿ ಚಾಲಕರಾಗಬೇಕು. ನಮ್ಮನ್ನು ನಂಬಿ ಜನರು ವಾಹನಗಳಲ್ಲಿ ಪ್ರಯಾಣ ಮಾಡುತ್ತಾರೆ. ನಾವು ಸಹ ಅವರನ್ನು ಸುರಕ್ಷಿತವಾಗಿ ಕರೆದೊಯ್ಯಬೇಕು ಎಂದ ಅವರು ವಾಹನ ಚಾಲಕರ ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸರ್ವ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದ ಅವರು, ಸಂಘದ ಏಳಿಗೆಗೆ ದುಡಿಯುವುದಾಗಿ ತಿಳಿಸಿದರು.

ಈ ವೇಳೆ ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಹೆಚ್.ಎಸ್.ಲಿಂಗರಾಜು, ಉಪಾಧ್ಯಕ್ಷ ಎಸ್.ಬಿ.ಕಾಳನಾಯಕ, ಕಾರ್ಯದರ್ಶಿ ಚಾಮರಾಜ್, ಸಹ ಕಾರ್ಯದರ್ಶಿ ಸುಭಾನ್, ಖಜಾಂಚಿ ಎಸ್.ಟಿ.ರವಿ, ನಿರ್ದೇಶಕರಾಗಿ ಹೆಚ್.ಎಂ. ಮಹದೇವ ನಾಯಕ, ಆರ್.ಭೈರನಾಯಕ, ಬಿ.ಬೆಟ್ಟ ನಾಯಕ, ಎಸ್.ರವಿ, ಎಂ. ನಾಗರಾಜು, ಸಿ.ವೆಂಕಟೇಶ್, ಜಗದೀಶ್, ಹಾಲ ನಾಯಕ, ಅಂಕಪ್ಪ, ಗಣೇಶ್, ಬಿ.ಎಂ.ಮಹದೇವಪ್ಪ, ಜಿ.ವೆಂಕಟೇಶ್, ಗಂಗಾಧರ್, ದೇವಚಂದ್ರ ಹಾಗೂ ಸಂಘದ ಸದಸ್ಯರು ಹಾಜರಿದ್ದರು.

ತಿ.ನರಸೀಪುರದಲ್ಲಿ ವಿಶ್ವ ವೈದ್ಯರ ದಿನಾಚರಣೆ



ತಿ.ನರಸೀಪುರ, ಜು.3(ಎಸ್‌ಕೆ)– ಮನುಷ್ಯ ಆರೋಗ್ಯ ಸಂಬಂಧಿ ಖಾಯಿಲೆಗಳಿಗೆ ತುತ್ತಾಗುವುದು ಸಹಜ. ಅದನ್ನು ನಿಯಂತ್ರಿಸುವ ಸಾಮರ್ಥ್ಯವಿರುವುದು ವೈದ್ಯರಿಗೆ ಮಾತ್ರ ಎಂದು ಪೂಜಿತ್ ಮೆಡಿಕಲ್ಸ್ ಮಾಲೀಕ ಕುಮಾರ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಎದುರಿನ ಪೂಜಿತ್ ಮೆಡಿಕಲ್ಸ್ ಮುಂಭಾಗ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸ್ವಾಮಿ ಮೆಡಿಕಲ್‌ನ ಖ್ಯಾತ ವೈದ್ಯ ಡಾ.ಟಿ.ಎಸ್.ಮಲ್ಲಿಕಾರ್ಜುನಸ್ವಾಮಿ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಸಮಾಜದಲ್ಲಿ ವೈದ್ಯರ ಪಾತ್ರ ಅಪಾರ. ವೈದ್ಯರ ಕೆಲಸ, ಜವಾಬ್ದಾರಿ, ಪ್ರಾಮುಖ್ಯತೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಭಾರತದಲ್ಲಿ ರಾಷ್ಟ್ರೀಯ ವೈದ್ಯರ ದಿನವನ್ನು ಜು.1 ರಂದು ಆಚರಿಸಲಾಗುತ್ತದೆ ಎಂದರು.

ಆಧುನಿಕ ಭಾರತದ ವೈದ್ಯ ಲೋಕದ ಧನ್ವಂತ್ರಿ ಎಂದೇ ಕರೆಯಲ್ಪಡುವ ಭಾರತರತ್ನ ಡಾ.ಬಿ.ಸಿ.ರಾಯ್ ಅವರ ಸಾಧನೆ ನೆನಪಿಸಿಕೊಳ್ಳಲು ಮತ್ತು ಇಡೀ ವೈದ್ಯ ಸಮುದಾಯದ ಸೇವೆ ಸ್ಮರಿಸುವ ಉದ್ದೇಶದಿಂದ ವೈದ್ಯರ ದಿನ ಆಚರಿಸಲಾಗುತ್ತಿದೆ ಎಂದರು.

ಕೋವಿಡ್ ಸಂದರ್ಭ ಸರ್ಕಾರಿ ವೈದ್ಯರಂತೆ ಖಾಸಗಿ ವೈದ್ಯರು ಸಹ ಜನರ ಪ್ರಾಣ ರಕ್ಷಣೆಗೆ ತಮ್ಮ ಜೀವವನ್ನೇ ಪಣವಿಟ್ಟು ಕೆಲಸ ಮಾಡಿದ್ದಾರೆ. ದಿನದ 24 ಗಂಟೆಯೂ ಪ್ರಾಮಾಣಿಕ ಸೇವೆ ಸಲ್ಲಿಸಿ ಜನರ ಪ್ರಾಣ ಉಳಿಸಿದ್ದಾರೆ. ಅಂತಹ ವೈದ್ಯರನ್ನು ನಾವೆಲ್ಲರೂ ಸ್ಮರಿಸಿದಾಗ ಮಾತ್ರ ಅವರ ಕಾರ್ಯ ಕ್ಷಮತೆಗೆ ನಾವು ಗೌರವ ಕೊಟ್ಟಂತಾಗುತ್ತದೆ ಎಂದರು. ಈ ವೇಳೆ ಅಕ್ಕಿ ನಾಗಪ್ಪ, ಓಂ ಗುರು ಶಿವಣ್ಣ, ತಾಯೂರು ಪ್ರಕಾಶ್, ಸಂದೇಶ್, ಕೊತ್ತೇಗಾಲ ಮಹೇಶ್, ಎಸ್‌ವಿ ಡಯಾಗ್ನೋಸ್ಟಿಕ್‌ನ ವಿನಯ್ ಮತ್ತಿತರರಿದ್ದರು.

ಕನ್ಹಯ್ಯಲಾಲ್ ಹತ್ಯೆ ಖಂಡಿಸಿ ಸರಗೂರಲ್ಲಿ ಪ್ರತಿಭಟನೆ



ಸರಗೂರು, ಜು.3 (ನಾಗೇಶ್)– ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ಪಟ್ಟಣದಲ್ಲಿ ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಬಜ ರಂಗದಳದ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಪಟ್ಟಣದ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಿರ್ಮಿಸಿ, ಕೆಲಕಾಲ ರಸ್ತೆ ತಡೆ ನಡೆಸಿದರು. ಬಳಿಕ ಅಲ್ಲಿಂದ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಕರ್ನಾಟಕ ದಕ್ಷಿಣ ಪ್ರಾಂತ ಹಿಂದೂ ಜಾಗರಣ ವೇದಿಕೆ ಸಹ ಸಂಯೋಜಕ ಲೋಹಿತ್ ವಿ.ಆರಸ್ ಮಾತನಾಡಿ, ಯಾವುದೇ ವಿವಾದ ಉಂಟಾದಾಗ ಡಾ.ಬಿ.ಆರ್.ಅಂಬೇಡ್ಕರ್ ಬರೆದಿರುವ ಸಂವಿಧಾನವನ್ನು ಗೌರವಿಸಿಕೊಂಡು ಬಂದಿದ್ದು, ನ್ಯಾಯಾಲಯದ ತೀರ್ಪನ್ನು ಒಪ್ಪಿಕೊಂಡಿದ್ದೇವೆ. ಆದರೆ ಸಮಾಜದಲ್ಲಿ ಹಿಂದೂಪರ ಕಾರ್ಯಕರ್ತರ ಹತ್ಯೆ ಮಾಡಲಾಗುತ್ತಿದೆ. ಕಾಶ್ಮೀರ, ಬಂಗಾಳ, ಕೇರಳ ರಾಜ್ಯಗಳಲ್ಲಿ ವರ್ಷದಿಂದ ವರ್ಷಕ್ಕೆ ಹಿಂದೂಗಳ ಹತ್ಯೆ ಹೆಚ್ಚಾಗುತ್ತಿದೆ ಇದೀಗ ರಾಜಸ್ಥಾನದ ಉದಯಪುರದಲ್ಲಿ ಕನ್ಹಯ್ಯ ಲಾಲ್ ಹತ್ಯೆಯಾಗಿದೆ. ಕೂಡಲೇ ಹತ್ಯೆ ಆರೋಪಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಿ ಮತ್ತೆ ಈ ರೀತಿಯ ಘಟನೆಗಳು ಮರು ಕಳಿಸದಂತೆ ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ವೀರೇಶ್, ನೂರಾಳಸ್ವಾಮಿ, ಬಜರಂಗ ದಳ ತಾಲೂಕು ಸಂಯೋಜಕ ಜನ್ನಪ್ಪ, ಸತ್ಸಂಗ ಪ್ರಮುಖ್ ಆನಂದ್ ಮೈಲಾರಿ, ತಾಲೂಕು ಸಂಘ ಸಂಚಾಲಕ ಶ್ರೀವತ್ಸ, ರಾಜೇಶ್, ಪೈಂಟ್ ನಾಗರಾಜು, ರಾಮು, ಎಂ.ರವಿಕುಮಾರ್, ರವಿಗೌಡ, ಲೋಕೇಶ್, ಅಭಿ, ರಮೇಶ್, ನವೀನ್, ಶ್ರೀನಾಥ್, ಉಮೇಶ್, ಮಂಜು ಇತರರಿದ್ದರು.

ಕೋಟೆ ಛಾಯಾಗ್ರಾಹಕರಿಗೆ ಎಕ್ಸಲೆನ್ಸಿ ಅವಾರ್ಡ್



ಹೆಚ್.ಡಿ.ಕೋಟೆ, ಜು.3(ಮಂಜು)– ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಛಾಯಾ ಚಿತ್ರ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ತಾಲೂಕು ಛಾಯಾಗ್ರಾಹಕರ ಸಂಘದ ಸದಸ್ಯರಾದ ನಂದಕುಮಾರ್ ಶೈಲಿ, ವೆಂಕಟೇಶ್, ಮೋಹನ್ ಕುಮಾರ್, ಮನೋಜ್ ಅವರಿಗೆ ಫೋಟೋಗ್ರಫಿ ಎಕ್ಸಲೆನ್ಸಿ ಅವಾರ್ಡ್ ನೀಡಿ ಅಭಿನಂದಿಸಲಾಯಿತು. ಈ ವೇಳೆ ಕರ್ನಾಟಕ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಪರಮೇಶ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ರಘುರಾಮ್, ಗುರುಮೂರ್ತಿ ಇದ್ದರು.

ಎಂ.ಸಿ.ಮಹೇಶ್ ನಿಧನ




ಮಲ್ಕುಂಡಿ, ಜು.3(ಚನ್ನಪ್ಪ)– ಗ್ರಾಮದ ನಿವಾಸಿ ಹಾಗೂ ಬಿಜೆಪಿ ಮುಖಂಡ ಎಂ.ಸಿ.ಮಹೇಶ್(51) ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ (ಜು.4) ಸೋಮವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಹೇಶ್ ನಿಧನಕ್ಕೆ ಶಾಸಕ ಬಿ.ಹರ್ಷವರ್ಧನ್, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಸಂತಾಪ ಸೂಚಿಸಿದ್ದಾರೆ.

ಭಾಗ್ಯಮ್ಮ



ಸುತ್ತೂರು, ಜು.3– ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ನಿವಾಸಿ ಭಾಗ್ಯಮ್ಮ ಭಾನುವಾರ ನಿಧನರಾದರು. ಮೃತರು ಪತಿ, ಪತ್ರಿಕಾ ಛಾಯಾಗ್ರಾಹಕ ನವೀನ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಖಾಸಗಿ ಹೋಟೆಲ್‌ನಲ್ಲಿ ಪವಿತ್ರ, ನರೇಶ್: ರಮ್ಯಾ ರಂಪಾಟ





ಮೈಸೂರು,ಜು.3(ಎಂಟಿವೈ)– ತೆಲುಗು ನಟ ನರೇಶ್ ಮತ್ತು ನಟಿ ಪವಿತ್ರ ಲೋಕೇಶ್ ವಾಸ್ತವ್ಯ ಹೂಡಿದ್ದ ಮೈಸೂರಿನ ಖಾಸಗಿ ಹೋಟೆಲ್‌ಗೆ ಭಾನುವಾರ ಬೆಳಗ್ಗೆ ಆಗಮಿಸಿದ ನರೇಶ್ ಪತ್ನಿ ರಮ್ಯಾ ರಘುಪತಿ ರಂಪಾಟ ನಡೆಸಿದ್ದು, ಕೆಲ ಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿ ಪೊಲೀಸರ ಮಧ್ಯ ಪ್ರವೇಶದಿಂದ ನರೇಶ್ ಮತ್ತು ಪವಿತ್ರ ಲೋಕೇಶ್ ಸುರಕ್ಷಿತವಾಗಿ ಹೋಟೆಲ್‌ನಿಂದ ಹೊರ ಹೋದರು.

ವಿವರ: ಮೈಸೂರಿನ ಹುಣಸೂರು ರಸ್ತೆಯಲ್ಲಿನ ಐಷಾರಾಮಿ ಹೋಟೆಲ್‌ವೊಂದರಲ್ಲಿ ನರೇಶ್ ಮತ್ತು ಪವಿತ್ರಾ ಲೋಕೇಶ್ ವಾಸ್ತವ್ಯ ಹೂಡಿರುವುದನ್ನು ಖಚಿತಪಡಿಸಿಕೊಂಡು ಬೆಂಗಳೂರಿಂದ ಮಧ್ಯರಾತ್ರಿ ವೇಳೆಗೆ ಕೆಲವು ಆಪ್ತರೊಂದಿಗೆ ಆಗಮಿಸಿದ ನರೇಶ್ ಪತ್ನಿ ರಮ್ಯಾ ರಘುಪತಿ, ಬೆಳಗ್ಗೆ ಪವಿತ್ರ ಲೋಕೇಶ್ ಹಾಗೂ ನರೇಶ್ ಇದ್ದ ಕೊಠಡಿಯ ಬಾಗಿಲು ಬಡಿಯಲಾರಂಭಿಸಿದರು.

ಬಾಗಿಲು ತೆರೆಯದಿದ್ದಾಗ ರಮ್ಯಾ ಕೊಠಡಿ ಮುಂಭಾಗದಲ್ಲೇ ಕುಳಿತು ತನ್ನ ಪತಿ ಹಾಗೂ ಪವಿತ್ರ ಹೊರ ಬರುವುದನ್ನು ಕಾಯುತ್ತಿದ್ದರು. ವಿಷಯ ತಿಳಿದು ಮಹಿಳಾ ಪೊಲೀಸರೊಂದಿಗೆ ಸ್ಥಳಕ್ಕೆ ಆಗಮಿಸಿ ದೇವರಾಜ ಠಾಣೆ ಪೊಲೀಸರು, ರಮ್ಯಾ ಅವರನ್ನು ಸಮಾಧಾನ ಮಾಡಲು ತೀವ್ರ ಪ್ರಯತ್ನಿಸಿದರು. ಕೊನೆಗೆ ತಮ್ಮ ಭದ್ರತಾ ಸಿಬ್ಬಂದಿಯ ಬೆಂಗಾವಲಿನಲ್ಲಿ ಪವಿತ್ರಾ ಲೋಕೇಶ್ ಜೋಡಿ ಕೊಠಡಿಯ ಬಾಗಿಲು ತೆರೆಯುತ್ತಿದ್ದಂತೆಯೇ ರಮ್ಯಾ ಆಕ್ರೋಶದಿಂದ ಚಪ್ಪಲಿಯಲ್ಲಿ ಹೊಡೆಯಲು ಮುಂದಾದರು. ಈ ವೇಳೆ ಮಹಿಳಾ ಪೊಲೀಸರು ಅವರನ್ನು ಹರಸಾಹಸ ಪಟ್ಟು ತಡೆದರು.

ಶಿಳ್ಳೆ ಹೊಡೆದ ನರೇಶ್: ಲಗ್ಗೇಜ್‌ನೊಂದಿಗೆ ನಟಿ ಪವಿತ್ರ ಲೋಕೇಶ್ ಜೊತೆ ಕೊಠಡಿಯಿಂದ ಹೊರ ಬರುತ್ತಿರುವಾಗಲೇ ಡ್ಯಾನ್ಸ್ ಆಡಿದ ನರೇಶ್ ವಿಚಲಿತರಾಗದೇ ಲಿಫ್ಟ್‌ಗೆ ತೆರಳುತ್ತಿದ್ದಾಗ ರಮ್ಯಾರೊಂದಿಗೆ ಬಂದಿದ್ದ ನಾಲ್ಕೈದು ಮಂದಿ ಅವರನ್ನು ಛೇಡಿಸಿದರು. ಲಿಫ್ಟ್ ಪ್ರವೇಶಿಸಿದ ನರೇಶ್ ಶಿಳ್ಳೆ ಹೊಡೆದು, ವಿಜಯದ ಸಂಕೇತ ಸೂಚಿಸುವಂತೆ ಕೈ ಮೇಲೆತ್ತಿ ಎರಡು ಬೆರಳನ್ನು ತೋರಿಸಿದರು. ರಮ್ಯಾ ರಘುಪತಿ ರಂಪಾಟ ಮಾಡುತ್ತಿದ್ದರೂ ಯಾವುದೇ ಪ್ರತಿಕ್ರಿಯೆ ನೀಡದೇ ತೆರಳುತ್ತಿದ್ದ ಪವಿತ್ರ ಲೋಕೇಶ್ ವಿರುದ್ಧ ಧಿಕ್ಕಾರದ ಕೆಲವರು ಘೋಷಣೆ ಕೂಗಿದರು. ರಮ್ಯಾ ಅವರೂ ಕೂಡ ಪವಿತ್ರ ಲೋಕೇಶ್‌ಗೆ ಛೀಮಾರಿ ಹಾಕಿದರು.

ಪೊಲೀಸರ ಭದ್ರತೆಯೊಂದಿಗೆ ಪಾರ್ಕಿಂಗ್ ಪ್ರದೇಶಕ್ಕೆ ಬಂದು ಕಾರು ಹತ್ತುವ ವೇಳೆ ನಟ ನರೇಶ್ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ನರೇಶ್, ರಮ್ಯಾ ನನ್ನ ಮೇಲೆ ಅಟ್ಯಾಕ್ ಮಾಡುವುದಕ್ಕೆ ಬಂದಿದ್ದಾರೆ. ಆಕೆ ವ್ಯಕ್ತಿಯೋರ್ವನ ಜೊತೆ ಸಂಬಂಧ ಹೊಂದಿದ್ದು, ಅವರಿಬ್ಬರೂ ಪ್ರೀತಿಸುತ್ತಿದ್ದಾರೆ. ಸತತವಾಗಿ ನನ್ನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಹಲ್ಲೆ ನಡೆಸಲು ಸಂಚು ನಡೆಸುತಿದ್ದಾರೆ ಎಂದು ಆರೋಪಿಸಿ ಪವಿತ್ರ ಲೋಕೇಶ್ ಜೊತೆ ನಿರ್ಗಮಿಸಿದರು.

ನೆಲಕ್ಕೆ ಬಿದ್ದರೂ ಮೀಸ ಮಣ್ಣಾಗಲಿಲ್ಲ ಎಂಬಂತೆ ಹೋದರು: ರಮ್ಯಾ ರಘುಪತಿ ಪತ್ರಕರ್ತರರೊಂದಿಗೆ ಮಾತನಾಡಿ, ಗುಡ್ ಫ್ರೆಂಡ್, ಗುಡ್ ಫ್ರೆಂಡ್ ಎನ್ನುತ್ತಲೇ ನನಗೆ ದ್ರೋಹ ಬಗೆದಿದ್ದಾರೆ. ಗುಡ್ ಫ್ರೆಂಡ್ಸ್‌ಗಳು ರಾತ್ರಿಯಿಡೀ ಒಂದೇ ರೂಮ್‌ನಲ್ಲಿ ಇರುತ್ತಾರಾ?. ಈ ಹೋಟೆಲ್‌ನಲ್ಲಿ ಇಬ್ಬರೂ ಇದ್ದಾರೆ ಎಂಬ ಮಾಹಿತಿ ಬಂತು. ಮುಂಜಾನೆ 1 ಗಂಟೆಗೆ ಬೆಂಗಳೂರಿಂದ ಹೊರಟು ಮೈಸೂರಿಗೆ ಬಂದಿದ್ದರೂ, ನಾನು ಅವರಿದ್ದ ಕೊಠಡಿ ಬಳಿ ಬರಲಿಲ್ಲ. ರಾತ್ರಿ ವೇಳೆ ಗದ್ದಲ ಮಾಡುವ ಸಂಸ್ಕೃತಿ ನನ್ನದ್ದಲ್ಲ. ಹಾಗಾಗಿ ಬೆಳಗಾದ ಬಳಿಕವೇ ಅವರಿಬ್ಬರು ಇದ್ದ ಕೊಠಡಿಯ ಬಾಗಿಲು ಬಡಿದ್ದಿದ್ದೇನೆ. ಹೆಂಡತಿ, ಮಕ್ಕಳಿದ್ದರೂ ನನ್ನ ಪತಿ ಪವಿತ್ರ ಲೋಕೇಶ್ ಅವರೊಂದಿಗೆ ಇದ್ದಾರೆ. ನನ್ನ ವಿರುದ್ಧ ಅವರು ಮಾಡಿದ್ದ ಆರೋಪಗಳೆಲ್ಲವೂ ಸಾಬೀತು ಮಾಡಲಾಗಿಲ್ಲ. ಆದರೆ ನಾನು ಅವರ ವಿರುದ್ಧ ಮಾಡಿದ್ದ ಆರೋಪಗಳೆಲ್ಲವನ್ನೂ ಸಾಭೀತು ಮಾಡಿದ್ದೇನೆ. ಇಬ್ಬರೂ ರಾತ್ರಿಯಿಡೀ ಒಂದೇ ಕೊಠಡಿಯಲ್ಲಿದ್ದಾಗ ಪ್ರತ್ಯಕ್ಷವಾಗಿ ಹಿಡಿದಿದ್ದೇನೆ. ಇಷ್ಟೆಲ್ಲಾ ಆದರೂ ಅವರು ನಗುತ್ತಲೇ ಹೋದದ್ದು ನನಗೆ ಸಿಕ್ಕ ಜಯ. ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ವರ್ತಿಸಿದ್ದಾರೆ ಎಂದು ರಮ್ಯಾ ನರೇಶ್ ಪವಿತ್ರ ವಿರುದ್ಧ ಕಿಡಿಕಾರಿದರು.

ನಾನು ವಿವಾಹವಾದ ಬಳಿಕ ಒಂದೂವರೆ ವರ್ಷವಷ್ಟೇ ನಾವು ಚೆನ್ನಾಗಿದ್ದೆವು. ಆ ನಂತರ ನರೇಶ್ ಬಣ್ಣ ಬಯಲಾಗಲಾರಂಭಿಸಿತು. ಕಳೆದ 10 ವರ್ಷದಿಂದ ಇದೇ ಕರ್ಮ ಎದುರಿಸುತ್ತಿದ್ದೇನೆ. ಬಿರುಕು ಹೊರಗಿನವರಿಂದಲೇ ಬರಬೇಕು. ನಮ್ಮ ಅತ್ತೆ (ವಿಜಯ ನಿರ್ಮಲಾ) ಇಲ್ಲದಿರುವಾಗ ನನಗೆ ವಿಚ್ಛೇದನ ನೋಟಿಸ್ ನೀಡಿದ್ದಾರೆ. ನನ್ನ ಮಗ ಅಳುತ್ತಿದ್ದಾನೆ. ನರೇಶ್‌ಗೆ ಮೂರು ಮಕ್ಕಳಿದ್ದಾರೆ. ಮೂರು ಮದುವೆಯಿಂದಲೂ ಒಂದೊಂದು ಮಗು ಆಗಿದೆ. ನಾನು ಹಿಂದೂ ಕುಟುಂಬದ ಹೆಣ್ಣು ಮಗಳು. ಅಷ್ಟು ಸುಲಭವಾಗಿ ವಿಚ್ಛೇಧನಕ್ಕೆ ಒಪ್ಪುವುದಿಲ್ಲ. ನ್ಯಾಯಾಲಯದಲ್ಲಿ ಚಾಲೆಂಜ್ ಮಾಡುತ್ತೇನೆ ಎಂದರು.

ಪೀಠೋಪಕರಣ ಖರೀದಿಸುವ ನೆಪ

ಆನ್‌ಲೈನ್ ಮೂಲಕ ವಿಜ್ಞಾನಿಯ 1.44 ಲಕ್ಷ ರೂ. ಸುಲಿಗೆ

ಮೈಸೂರು,ಜು.3–ಪೀಠೋಪಕರಣ ಖರೀದಿ ಮಾಡುವ ನೆಪದಲ್ಲಿ ವಿಜ್ಞಾನಿಯೊಬ್ಬರ ಖಾತೆಯಿಂದ 1.44 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಯಾದವಗಿರಿ ಸಂಕಲ್ಪ್ ಪ್ರಕೃತಿ ಅಪಾರ್ಟ್‌ಮೆಂಟ್ ನಿವಾಸಿ ವಿಜ್ಞಾನಿ ಯಶ್‌ವೀರ್ ಭಟ್ನಾಗರ್(57) ಹಣ ಕಳೆದುಕೊಂಡವರಾಗಿದ್ದು, ಇವರು ತಮ್ಮ ಮನೆಯ ಪೀಠೋಪಕರಣ ಮಾರಾಟ ಮಾಡುವುದಾಗಿ ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿದ್ದರು. ಅದನ್ನು ಕಂಡು ಇವರನ್ನು ಮೊಬೈಲ್ ಮೂಲಕ ಸಂಪರ್ಕಿಸಿದ ವಂಚಕ ಇವರ ಎರಡು ಬ್ಯಾಂಕ್ ಖಾತೆಗಳಿಂದ ಒಟ್ಟು 1,43,999 ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ಬ್ಯಾಂಕ್ ಖಾತೆಗೆ ನಾಮಿನಿ ಮಾಡಿಸಿಲ್ಲವೆಂದು ಕರೆ ಮಾಡಿ 50 ಸಾವಿರ ರೂ. ವರ್ಗಾವಣೆ ಮಾಡಿಕೊಳ್ಳಲಾಗಿದೆ. ಮೈಸೂರಿನ ನ್ಯೂ ಕಾಂತರಾಜೇ ಅರಸ್ ರಸ್ತೆ ನಿವಾಸಿ ಕೆ.ಎನ್.ಶುಭಶ್ರೀ(27) ಅವರ ತಂದೆಯ ಮೊಬೈಲ್ ನಂಬರ್‌ಗೆ ಕರೆ ಮಾಡಿದ ವ್ಯಕ್ತಿ ಬ್ಯಾಂಕ್ ಖಾತೆಗೆ ನಾಮಿನಿ ಮಾಡಿಸಿಲ್ಲವೆಂದು ತಿಳಿಸಿ ಶುಭಶ್ರೀ ಅವರ ಖಾತೆಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ಓಟಿಪಿ ನಂಬರ್ ಪಡೆದು 50 ಸಾವಿರ ರೂ.ಗಳನ್ನು ವರ್ಗಾವಣೆ ಮಾಡಿಕೊಂಡಿದ್ದಾನೆ.

ಇನ್ನೊಂದು ಪ್ರಕರಣದಲ್ಲಿ ಸಿಮ್ ಕಾರ್ಡ್‌ಗೆ ಸಂಬಂಧಿಸಿದಂತೆ ಕೆವೈಸಿ ಅಪ್‌ಡೇಟ್ ಮಾಡಬೇಕೆಂದು ಸಂದೇಶ ಕಳುಹಿಸಿ 4.69 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಮೈಸೂರಿನ ನಾಯ್ಡುನಗರ ನಿವಾಸಿ ವಿ.ಹರಿಣಿ(51) ಅವರ ಸಿಮ್ ಕಾರ್ಡ್‌ಗೆ ಸಂಬಂಧಿಸಿದಂತೆ ಕೆವೈಸಿ ಅಪ್‌ಡೇಟ್ ಮಾಡುವಂತೆ ಮೊಬೈಲ್‌ಗೆ ಸಂದೇಶ ಬಂದಿದೆ. ಅದನ್ನು ನಂಬಿದ ಹರಿಣಿ ಅವರು ಸಂದೇಶ ಬಂದ ಸಂಖ್ಯೆಗೆ ಕರೆ ಮಾಡಿದಾಗ Anydesk App ಇನ್‌ಸ್ಟಾಲ್ ಮಾಡಿಕೊಳ್ಳುವಂತೆ ತಿಳಿಸಲಾಗಿದೆ. ಅದರಂತೆ ಅವರು App ಇನ್‌ಸ್ಟಾಲ್ ಮಾಡಿ ಕೆವೈಸಿಗೆ ಅಪ್‌ಡೇಟ್ ಮಾಡು ತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಿಂದ 4,69,908 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

6ನೇ ವಾರ್ಡ್ ಪಾಲಿಕೆ ಸದಸ್ಯರಿಂದ ಜನಸಂಪರ್ಕ ಸಭೆ



ಮೈಸೂರಿನ 6ನೇ ವಾರ್ಡ್ ವ್ಯಾಪ್ತಿಯ ಗೋಕುಲಂ ಹಾಗೂ ಬೃಂದಾವನ ಬಡಾವಣೆಯಲ್ಲಿ ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಭಾನುವಾರ ಜನಸಂಪರ್ಕ ಸಭೆ ನಡೆಸಿ, ಬಡಾವಣೆಯ ನಾಗರಿಕರ ಸಮಸ್ಯೆಗಳನ್ನು ಆಲಿಸಿ, ಅಧಿಕಾರಿಗಳ ಮೂಲಕ ಪರಿಹರಿಸಿದರು.

ಇನ್ನರ್ ವೀಲ್ ಕ್ಲಬ್ ಮೈಸೂರು ಸೆಂಟ್ರಲ್‌ನಿಂದ ಪ್ರಯಾಣಿಕರ ತಂಗುದಾಣ ನಿರ್ಮಾಣ



ಮೈಸೂರು–ಬೋಗಾದಿ ರಸ್ತೆಯಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ನಿರ್ಮಿಸಿರುವ ಬಸ್ ಶೆಲ್ಟರ್ ಉದ್ಘಾಟನಾ ಸಂದರ್ಭ.

ಮೈಸೂರು, ಜು.3(ಎಸ್‌ಬಿಡಿ)–ಮೈಸೂರು–ಬೋಗಾದಿ ರಸ್ತೆಯಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಹಾಗೂ ದಾನಿಗಳ ಸಹಯೋಗದಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಿಸಲಾಗಿದೆ. ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್(ಆಯಿಷ್) ಬಳಿ ಬೋಗಾದಿ, ಗದ್ದಿಗೆ ಇನ್ನಿತರ ಗ್ರಾಮಗಳಿಗೆ ತೆರಳುವ ಹಾಗೂ ಈ ಮಾರ್ಗದಲ್ಲಿ ನಗರಕ್ಕೆ ಸಂಚರಿಸುವ ಸಾರಿಗೆ ಬಸ್‌ಗಳಿಗಾಗಿ ನಿತ್ಯ ನೂರಾರು ಮಂದಿ ಕಾದು ನಿಲ್ಲುತ್ತಿದ್ದರು. ಆದರೆ ಬಿಸಿಲು, ಮಳೆಯಿಂದ ರಕ್ಷಣೆ ಪಡೆಯಲು ಪ್ರಯಾಣಿಕರಿಗೆ ಸೂಕ್ತ ವ್ಯವಸ್ಥೆ ಇರಲಿಲ್ಲ. ಜನರ ಸಮಸ್ಯೆಯನ್ನು ಅರಿತ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆ, ದಾನಿಗಳ ನೆರವಿನಿಂದ ಹೊಸ ಶೆಲ್ಟರ್ ನಿರ್ಮಿಸಿದೆ.

ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಬಸ್ ಶೆಲ್ಟರ್ ಅನ್ನು ಇತ್ತೀಚೆಗೆ ದಾನಿಗಳಾದ ಮಾಜಿ ಕಾರ್ಪೋರೇಟರ್ ಸುಶೀಲಾ ಮರಿಗೌಡ ಹಾಗೂ ಶಾಸಕ ಎಲ್.ನಾಗೇಂದ್ರ ಅವರು ಉದ್ಘಾಟಿಸಿದರು. ಕಾರ್ಪೋರೇಟರ್ ವೇದಾವತಿ, ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್‌ನ ಪುಷ್ಪಾ ಗುರುರಾಜ್, ಕವಿತಾ ನಿಯತ್, ಸಾರಿಕಾ ಪ್ರಸಾದ್, ತಂಡ 22 ಹಾಗೂ 23ರ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

'ಮೋದಿ ಕಪ್' ದೇಹದಾರ್ಢ್ಯ ಸ್ಪರ್ಧೆ; 40ಕ್ಕೂ ಹೆಚ್ಚು ಮಂದಿ ಭಾಗಿ



ಮೈಸೂರು,ಜು.3(ಎಸ್‌ಬಿಡಿ)– ಬಿಜೆಪಿ ಯುವ ಮುಖಂಡರೊಬ್ಬರ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನಲ್ಲಿ 'ಮೋದಿ ಕಪ್' ದೇಹದಾರ್ಢ್ಯ ಸ್ಪರ್ಧೆ ಏರ್ಪಡಿಸಲಾಗಿತ್ತು.

ಬಿಜೆಪಿ ಯುವಮೋರ್ಚಾ ಮೈಸೂರು ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ ಹುಟ್ಟುಹಬ್ಬದ ಪ್ರಯುಕ್ತ ಮೈಸೂರು ಜಿಲ್ಲಾ ಹವ್ಯಾಸ ದೇಹದಾರ್ಢ್ಯ ಸಂಸ್ಥೆ, ಹೆಬ್ಬಾಳಿನ ಅರ್ನಾಲ್ಡ್ ಜಿಮ್ ಹಾಗೂ ರಾಕ್ ಜಿಮ್ ಸಹಯೋಗದಲ್ಲಿ ಹೆಬ್ಬಾಳು ಲಕ್ಷ್ಮಿಕಾಂತನಗರದ ಯಜಮಾನ ಸರ್ಕಲ್ ಬಳಿ ಶನಿವಾರ ನಡೆದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ 40ಕ್ಕೂ ಹೆಚ್ಚು ವಜ್ರದೇಹಿಗಳು ಭಾಗಿಯಾಗಿದ್ದರು.

ಎಲ್ಲಾ ಸುತ್ತುಗಳಲ್ಲೂ ಉತ್ತಮ ಪ್ರದರ್ಶನದೊಂದಿಗೆ ಹಿನಕಲ್‌ನ ರಾಕ್ ಜಿಮ್ ಮಂಜುನಾಥ್ 'ಮಿಸ್ಟರ್ ಮೋದಿ–2022' ಕಪ್ ಮುಡಿಗೇರಿಸಿಕೊಂಡರು. ಅವರಿಗೆ 15 ಸಾವಿರ ರೂ. ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ದ್ವಿತೀಯ ಸ್ಥಾನ 'ಮಿಸ್ಟರ್ ಮಸ್ಕಿಲ್ಲರ್' ಪಡೆದ ದೇವುಗೆ 7500 ರೂ. ನಗದು ಬಹುಮಾನ ಹಾಗೂ ತೃತೀಯ ಸ್ಥಾನ 'ಬೆಸ್ಟ್ ಪೋಸ್ಟರ್' ಪಡೆದ ಮಂಡ್ಯ ಜಿಲ್ಲೆಯ ಮೊಹಮ್ಮದ್ ಷರೀಫ್‌ಗೆ 5 ಸಾವಿರ ರೂ. ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ಅಲ್ಲದೆ ನಾಲ್ಕು ಸುತ್ತುಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದ 20 ಸ್ಪರ್ಧಾಳುಗಳಿಗೆ ನಗದು ಬಹುಮಾನ ಹಾಗೂ ಟ್ರೋಫಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಕರ್ನಾಟಕ ವಿದ್ಯುತ್ ಕಾರ್ಖಾನೆ ಅಧ್ಯಕ್ಷ ತಮ್ಮೇಶ್ ಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪಾಲಿಕೆ ಸದಸ್ಯರಾದ ಸುಬ್ಬಯ್ಯ, ರಂಗಸ್ವಾಮಿ, ಚಿಕ್ಕವೆಂಕಟು, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್‌ರಾಜು, ಬಿಜೆಪಿ ಮುಖಂಡರಾದ ಚೌಡಪ್ಪ, ದಿನೇಶ್‌ಗೌಡ, ಕೀರ್ತಿಕುಮಾರ್, ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಸಚಿನ್ ಜನಾರ್ದನ್, ಹರ್ಷ, ಭರತ್‌ಕುಮಾರ್, ಸಂತೋಷ್‌ಕುಮಾರ್, ಜೈ ಶಂಕರ್, ಅಜಿತ್ ಹೆಗಡೆ, ಸಚೀನ್, ಲೊಹಿತ್, ಚೇತನ್ ಮತ್ತಿತರರು ಭಾಗವಹಿಸಿದ್ದರು.

ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಮೂರು ದನ ರಕ್ಷಣೆ, ಇಬ್ಬರ ಬಂಧನ

ಮೈಸೂರು, ಜು.3–ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಮೂರು ದನಗಳನ್ನು ರಕ್ಷಿಸಿರುವ ಲಷ್ಕರ್ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಮೈಸೂರಿನ ಉದಯಗಿರಿ ನಿವಾಸಿ ಶಮೀಲ್ ಕುರೇಶಿ(42) ಮತ್ತು ಬನ್ನೂರಿನ ಗೂಡ್ಸ್ ಆಟೋ ಚಾಲಕ ಸನಾವುಲ್ಲಾ ಹಕ್(19) ಬಂಧಿತರಾಗಿದ್ದು, ಜು.2ರಂದು ಬೆಳಗಿನ ಜಾವ ಗಸ್ತು ತಿರುಗುತ್ತಿದ್ದ ಪೊಲೀಸರಿಗೆ ಮುಂಜಾನೆ 4.30ರ ಸುಮಾರಿನಲ್ಲಿ ಗೂಡ್ಸ್ ಆಟೋವೊಂದು (ಕೆಎ 55 2386) ಅನುಮಾನಾಸ್ಪದವಾಗಿ ನಿಂತಿರುವುದು ಕಂಡು ಬಂದಿದೆ. ಪೊಲೀಸರನ್ನು ನೋಡಿ ಆಟೋದಲ್ಲಿದ್ದ ಇಬ್ಬರು ಓಡಲಾರಂಭಿಸಿದಾಗ ಅವರನ್ನು ಬೆನ್ನತ್ತಿ ಹಿಡಿದ ಪೊಲೀಸರು, ಆಟೋವನ್ನು ಪರಿಶೀಲನೆ ನಡೆಸಿದಾಗ 3 ಹಸುಗಳು ಕಂಡು ಬಂದಿದೆ. ಬಂಧಿತರನ್ನು ವಿಚಾರಣೆಗೊಳಪಡಿಸಿದಾಗ ಮಹಮ್ಮದ್ ಸೇಠ್ ಬ್ಲಾಕ್‌ನ ಮುಕ್ರಂ ಎಂಬುವರು ತಮಗೆ ಹಣ ನೀಡಿ ದನ ಖರೀದಿಸಿ ತರುವಂತೆ ಹೇಳಿದ್ದು, ಬನ್ನೂರು ಕಡೆ ಹಳ್ಳಿಗಳಿಂದ ದನ ಖರೀದಿಸಿ ಬೆಳಗಿನ ಜಾವದಲ್ಲಿ ಬಂದರೆ ಯಾರಿಗೂ ಗೊತ್ತಾಗುವುದಿಲ್ಲ ಎಂದು ಈ ವೇಳೆಯಲ್ಲಿ ಬಂದಿದ್ದಾಗಿ ತಿಳಿಸಿದ್ದಾರೆ. ಈ ದನಗಳನ್ನು ಕಸಾಯಿ ಖಾನೆಗೆ ಸಾಗಿಸಲು ಅಕ್ರಮವಾಗಿ ಕೊಂಡೊಯ್ಯಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದು, 3 ದನ, ಗೂಡ್ಸ್ ಆಟೋ ವಶಪಡಿಸಿಕೊಂಡು, ಇಬ್ಬರನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ತ್ರಿಬ್ಬಲ್ ರೈಡಿಂಗ್: ಒಂದೇ ದಿನ 115 ಮಂದಿ ವಿರುದ್ಧ ಕೇಸ್



ಮೈಸೂರು, ಜು.3(ಎಸ್‌ಬಿಡಿ)– ದ್ವಿಚಕ್ರ ವಾಹನಗಳಲ್ಲಿ ತ್ರಿಬ್ಬಲ್ ರೈಡಿಂಗ್ ಮಾಡುವವರ ವಿರುದ್ಧ ಮೈಸೂರು ನಗರ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದು, ಭಾನುವಾರ ಬರೋಬ್ಬರಿ 115 ಸವಾರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ದ್ವಿಚಕ್ರ ವಾಹನಗಳಲ್ಲಿ ಇಬ್ಬರು ಮಾತ್ರ ಹೆಲ್ಮೆಟ್ ಧರಿಸಿ ಸಂಚರಿಸಬಹುದು. ಆದರೆ ತ್ರಿಬ್ಬಲ್ ರೈಂಡಿಗ್ ಮಾಡುವುದು ನಿಯಮ ಬಾಹಿರ ಹಾಗೂ ಅಪಾಯಕಾರಿ. ಇದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ. ಈ ವೇಳೆ ಬೇರೆ ವಾಹನಗಳ ಸವಾರರು, ಪಾದಚಾರಿಗಳು ಬಲಿಯಾಗಬಹುದು. ಈ ಹಿನ್ನೆಲೆಯಲ್ಲಿ ಎರಡಕ್ಕಿಂತ ಹೆಚ್ಚು ಜನ ಸಂಚರಿಸುವವರಿಗೆ ಬಿಸಿ ಮುಟ್ಟಿಸಲು ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ವಾಹನ ಸವಾರರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಚಾಲನೆ ವೇಳೆ ತಮ್ಮ ಚಾಲನಾ ಪರವಾನಗಿ ಹಾಗೂ ವಾಹನದ ದಾಖಲಾತಿಗಳನ್ನು ಇಟ್ಟುಕೊಂಡಿರಬೇಕು. ತಪಾಸಣೆ ಸಂದರ್ಭದಲ್ಲಿ ಅವುಗಳನ್ನು ಪ್ರಸ್ತುತಪಡಿಸಬೇಕು ಎಂದು ಪೊಲೀಸರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನೃತ್ಯ ಕಲಾವಿದರು ಸಹನೆ, ತಾಳ್ಮೆ, ಕ್ಷಮಾ ಗುಣ ಅಳವಡಿಸಿಕೊಳ್ಳಬೇಕು

ಯುವ ಪಲ್ಲವ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ.ಕೃಪಾ ಫಡ್ಕೆ ಕಿವಿಮಾತು



ಮೈಸೂರು, ಜು.3(ಎಸ್‌ಪಿಎನ್)– ಯುವ ನೃತ್ಯ ಕಲಾವಿದರು, ಗುರುವಿನ ಸ್ಥಾನ ಅಲಂಕರಿಸುವ ಮೊದಲ ದಿನದಿಂದಲೂ ಸಹನೆ– ತಾಳ್ಮೆ, ಕ್ಷಮಾಗುಣಗಳನ್ನು ಅಳವಡಿಸಿಕೊಂಡು ಅಧ್ಯಯನಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದು ನೃತ್ಯಗಿರಿ ಪ್ರದರ್ಶಕ ಕಲೆ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕಿ ಡಾ.ಕೃಪಾ ಫಡ್ಕೆ ಕಿವಿ ಮಾತು ಹೇಳಿದರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂಧ ರಂಗ ಮಂದಿರದಲ್ಲಿ ಮೈಸೂರಿನ ನೃತ್ಯ ಈಶಾ ಪ್ರದರ್ಶನ ಕಲೆಗಳ ಕೇಂದ್ರದ ವತಿಯಿಂದ ನಡೆದ ಯುವ ಪಲ್ಲವ (ಸಂಚಿಕೆ–1) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನೃತ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಅವರ ಹಿರಿಯ ಶಿಷ್ಯರಾದ ಹರೀಶ್‌ಕುಮಾರ್, ದೀಪ್ತಿ ಅದಿಶೇಷ, ಡಾ.ಪದ್ಮಶ್ರೀ ಎನ್ ಕಶ್ಯಪ್, ಎನ್.ಅನುಷ ರಾಜ್, ದೀಪ್ತಿ ದೀಕ್ಷಿತ್ ಸಮೂಹ ಭರತನಾಟ್ಯವನ್ನು ಹಲವು ವರ್ಷಗಳಿಂದ ಅಭ್ಯಾಸ ಮಾಡಿ ಸಾರ್ವಜನಿಕವಾಗಿ ಉತ್ತಮ ಹೆಸರುಗಳಿಸಿದ್ದಾರೆ ಎಂದ ಅವರು, ಶಿಷ್ಯರಾದರೆ, ಗುರುಗಳು ವಹಿಸುವ ಕಾರ್ಯಕ್ಕೆ ಸೀಮಿತವಾಗಿ ನೃತ್ಯಾಭ್ಯಾಸ ಮಾಡಬಹುದು. ಆದರೆ, ಶಿಷ್ಯರೇ ಗುರುವಿನ ಸ್ಥಾನ ಅಲಂಕರಿಸಿದಾಗ ವೃತ್ತಿಯಲ್ಲಿ ತಾಳ್ಮೆ, ಸಹನೆ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಅರಿತು ಕೆಲಸ ಮಾಡ ಬೇಕಿದೆ ಎಂದು ಸಲಹೆ ನೀಡಿದರು.

ಯುವ ಕಲಾವಿದರು ಸ್ವತಂತ್ರವಾಗಿ ನೃತ್ಯ ಪ್ರದರ್ಶನ ನೀಡುವಾಗ ಅಧ್ಯಯನಕ್ಕೆ ಹೆಚ್ಚಿನ ಒತ್ತು ನೀಡಬೇಕು ಮತ್ತು ಸಹ ಕಲಾವಿದರೊಂದಿಗೆ ಬೆರೆತು ಒಂದು ತಂಡವಾಗಿ ಕೆಲಸ ಮಾಡಬೇಕು. ಈ ಯುವ ಕಲಾವಿದರು ಡಾ.ವಸುಂಧರ ದೊರೆಸ್ವಾಮಿಯವರ ನೆರಳಿನಲ್ಲಿ ಅಭ್ಯಾಸ ಮಾಡಿರುವುದರಿಂದ ಅವರಿಗೂ ಎಲ್ಲಾ ರೀತಿಯ ಗುರುವಿನ ಸ್ಥಾನಕ್ಕೆ ಇರಬೇಕಾದ ಅರ್ಹತೆಯಿದ್ದು, ಮುಂದಿನ ಈ ಕ್ಷೇತ್ರದಲ್ಲಿ ಉತ್ತಮ ಹೆಸರುಗಳಿಸಲಿ ಎಂದು ಆಶಿಸಿದರು.

ಈ ವೇಳೆ ನಾದಬ್ರಹ್ಮ ಸಂಗೀತಾ ಸಭಾ ಅಧ್ಯಕ್ಷ ಟಿ.ಆರ್.ಹರೀಶ್ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ಬಿ.ಆರ್.ರಾಮಚಂದ್ರ, ಜೆಎಸ್‌ಎಸ್ ಕಾಲೇಜಿನ ಪ್ರಾಧ್ಯಾಪಕಿ ಡಾ.ಕುಮುದಿನಿ ಅಚ್ಚಿ, ನೃತ್ಯಾ ಈಶಾ ಸಂಸ್ಥೆಯ ಪಿ.ಸರಸ್ವತಿ, ಅಕ್ಷತ ರಾಜ್, ಜತಿನ್, ಬಿಂದು ಕುಮಾರಿ ಇನ್ನಿತರರು ಉಪಸ್ಥಿತರಿದ್ದರು.